

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 4 ಗುರುವಾರ 2024

ಸಂಪುಟ: 44 | ಸಂಚಿಕೆ: 258 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಜ.13ರಂದು ಕೆ–ಸೆಟ್ ಪರೀಕ್ಷೆ: ಪ್ರವೇಶಪತ್ರ ಡೌನ್ಲೋಡ್‌ಗೆ ಸೂಚನೆ


ಕಡ್ಡಾಯ ವಸ್ತ್ರ ಸಂಹಿತೆ

ಬೆಂಗಳೂರು: ಜನವರಿ 13ರಂದು ನಡೆಯುವ ಕೆ–ಸೆಟ್ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು http://kea.kar.nic.in ಜಾಲತಾಣದಲ್ಲಿ ಪ್ರವೇಶ ಪತ್ರವನ್ನು ಡೌನ್ಲೋಡ್ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅಭ್ಯರ್ಥಿಗಳು ಪರೀಕ್ಷಾ ಕೇಂದ್ರವನ್ನು ಪ್ರವೇಶಿಸುವ ಮುನ್ನ ಪ್ರವೇಶಪತ್ರ ಮತ್ತು ಸರ್ಕಾರದಿಂದ ಮಾನ್ಯವಾಗಿರುವ ನಿಗದಿತ ಬಗೆಯ ಗುರುತಿನ ಪತ್ರವನ್ನು ತೋರಿಸುವುದು ಕಡ್ಡಾಯವಾಗಿದೆ. ಜೊತೆಗೆ ಪ್ರವೇಶಪತ್ರದಲ್ಲಿ ನಮೂದಿಸಿರುವ ಪರೀಕ್ಷಾ ಕೇಂದ್ರದಲ್ಲಷ್ಟೇ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಬೇಕು. ಅಲ್ಲದೇ ಇತ್ತೀಚಿನ ಎರಡು ಭಾವಚಿತ್ರಗಳನ್ನು ತರಬೇಕು ಎಂದು ತಿಳಿಸಿದ್ದಾರೆ.

ಪರೀಕ್ಷೆಯು ಜನವರಿ 13ರ ಬೆಳಗ್ಗೆ 10ರಿಂದ 11 ಮತ್ತು ಮಧ್ಯಾಹ್ನ 12ರಿಂದ 2 ಗಂಟೆಯವರೆಗೆ ನಡೆಯಲಿದೆ. ಇದರ ನಡುವೆ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಿಂದ ಹೊರಹೋಗಲು ಅವಕಾಶ ಕೊಡಲಾಗುವುದಿಲ್ಲ. ಓಎಂಆರ್ ಶೀಟ್ ಮೇಲೆ ● 7ನೇ ಪುಟಕ್ಕೆ


ಶ್ರಮಜೀವಿ ಎಕ್ಸ್‌ಪ್ರೆಸ್ ರೈಲು ಸ್ಫೋಟ: ಇಬ್ಬರಿಗೆ ಮರಣದಂಡನೆ



ಜಾನ್ಪುರ್: 14 ಜನರ ಸಾವಿಗೆ ಕಾರಣವಾಗಿದ್ದ 2005ರಲ್ಲಿ ನಡೆದಿದ್ದ ಶ್ರಮಜೀವಿ ಎಕ್ಸ್‌ಪ್ರೆಸ್ ರೈಲು ಸ್ಫೋಟ ಪ್ರಕರಣದಲ್ಲಿ ಬಾಂಗ್ಲಾದೇಶದ ಒಬ್ಬ ಸೇರಿದಂತೆ ಇಬ್ಬರಿಗೆ ಸೆಷನ್ಸ್ ನ್ಯಾಯಾಲಯ ಬುಧವಾರ ಮರಣದಂಡನೆ ವಿಧಿಸಿದೆ. ಈ ಸ್ಫೋಟದಲ್ಲಿ 62 ಜನ ಗಾಯಗೊಂಡಿದ್ದರು. ಪ್ರಕರಣದಲ್ಲಿ ಹಿಲಾಲ್ ಅಲಿಯಾಸ್ ಹಿಲಾಲುದ್ದೀನ್ ಮತ್ತು ನಫಿಕುಲ್ ವಿಶ್ವಾಸ್ ಎಂಬುವವರನ್ನು ಬಂಧಿಸಲಾಗಿತ್ತು. ವಿಚಾರಣೆ ನಡೆಸಿದ ಸೆಷನ್ಸ್ ನ್ಯಾಯಾಧೀಶ ರಾಜೇಶ್ ಕುಮಾರ್ ರಾಯ್ ಡಿ. 23ರಂದು ಇವರು ದೋಷಿಗಳು ಎಂದು ಆದೇಶಿಸಿದರು. ಬುಧವಾರ ಶಿಕ್ಷೆಯ ಪ್ರಮಾಣ ಪ್ರಕಟಿಸಿ ಮರಣ ದಂಡನೆ ಮತ್ತು ತಲಾ ರೂ. 5 ಲಕ್ಷ ದಂಡ ವಿಧಿಸಿದ್ದಾರೆ. ಶಿಕ್ಷೆಗೆ ಗುರಿಯಾಗಿರುವ ಹಿಲಾಲುದ್ದೀನ್ ಬಾಂಗ್ಲಾದೇಶದ ಮೂಲದವನು ಹಾಗೂ ವಿಶ್ವಾಸ್ ಪಶ್ಚಿಮ ಬಂಗಾಳದವನು.

ಡಿಸಿಎಂ ಡಿಕೆಶಿ ಮಹಾತಂತ್ರ!

● ತಾವು ಸಿಎಂ ಸ್ಥಾನಕ್ಕೆ ಬಡ್ತಿ ಹೊಂದುವುದಕ್ಕೆ ಅಪಸ್ವರ ಎತ್ತಿರುವ ಸಚಿವರು, ಶಾಸಕರನ್ನು ಲೋಕಸಭಾ ಸಮರಕ್ಕಿಳಿಸುವ ಮಾಸ್ಟರ್ ಪ್ಲಾನ್ ● ಸಿದ್ದರಾಮಯ್ಯ ವಿರೋಧದ ನಡುವೆಯೂ ವರಿಷ್ಠರ ಮೂಲಕ ಕಾರ್ಯ ಸಾಧಿಸಿಕೊಳ್ಳಲು ಡಿಕೆಶಿ ಹರಸಾಹಸ



ಬೆಂಗಳೂರು, ಜ.3 (ಕೆಎಂಶಿ)–ತಾವು ಮುಖ್ಯ ಮಂತ್ರಿ ಗದ್ದುಗೆ ಹಿಡಿಯಲು ಅಪಸ್ವರ ಎತ್ತುತ್ತಿರುವ ಸಚಿವ, ಶಾಸಕರನ್ನು ಲೋಕಸಭಾ ಚುನಾವಣಾ ಕಣಕ್ಕಿಳಿಸಲು ಕಾಂಗ್ರೆಸ್ ರಾಜ್ಯಾಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದಾಗಿದ್ದಾರೆ. ಮುಂಬರುವ ಲೋಕಸಭಾ ಚುನಾವಣಾ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಕರ್ನಾಟಕದ 28 ಕ್ಷೇತ್ರ ಗಳ ಅಭ್ಯರ್ಥಿಗಳ ಆಯ್ಕೆ ಹಾಗೂ ಚುನಾವಣಾ ತಂತ್ರಗಾರಿಕೆ ಸೇರಿದಂತೆ ಚರ್ಚೆ ನಡೆಸಲು ಸಿಎಂ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರಿಗೆ ವರಿಷ್ಠರು ಬುಲಾವ್ ಮಾಡಿದ್ದಾರೆ.

ವರಿಷ್ಠರ ಆಹ್ವಾನದ ಮೇರೆಗೆ ದೆಹಲಿಗೆ ತೆರಳಿರುವ ಉಭಯ ನಾಯಕರು ನಾಳೆ 28 ಕ್ಷೇತ್ರಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಘಟಕ, ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಹಾಗೂ ಚುನಾವಣಾ ಪೂರ್ವ ಸಮೀಕ್ಷೆ ಆಧಾರದ ಮೇಲೆ ಪ್ರತಿ ಕ್ಷೇತ್ರಕ್ಕೆ ಸಂಭವನೀಯ ಮೂರು ಹೆಸರುಗಳನ್ನು ಪಟ್ಟಿ ಮಾಡಿದ್ದು, ಅದನ್ನು ನಾಳೆ ವರಿಷ್ಠರಿಗೆ ಸಲ್ಲಿಸಿ, ಸಿಎಂ ಸಿದ್ದರಾಮಯ್ಯ ವಿರೋಧದ ನಡುವೆ ಚರ್ಚೆ ನಡೆಸಲಿದ್ದಾರೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರು ಸಿದ್ಧಪಡಿಸಿರುವ ಪಟ್ಟಿಯಲ್ಲಿ 20 ಕ್ಷೇತ್ರಗಳಿಗೆ ಒಮ್ಮತದ ಅಭ್ಯರ್ಥಿಗಳಿದ್ದರೆ, ಉಳಿದ 8 ಕ್ಷೇತ್ರಗಳಿಗೆ ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ.

ಶಿವಕುಮಾರ್ ಅವರು, ಸಚಿವರು ಮತ್ತು ಶಾಸಕರನ್ನು ನಿರ್ದಿಷ್ಟ ಕ್ಷೇತ್ರಗಳಲ್ಲಿ ಕಣಕ್ಕಿಳಿಸಿದರೆ ಗೆಲುವು ಸಾಧ್ಯ ಎಂಬ ಅಂಕಿ–ಅಂಶಗಳನ್ನು ಮುಂದಿಟ್ಟುಕೊಂಡು ವರಿಷ್ಠರ ಮುಂದೆ ತಮ್ಮ ವಾದ ಮಂಡಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್ ಅಲ್ಲದೆ, ಇತರ ಮುಖಂಡರು ಭಾಗವಹಿಸಲಿರುವ ಸಭೆಯಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಪ್ರತಿ ಕ್ಷೇತ್ರದ ಬಗ್ಗೆ ಮಾಹಿತಿ ಮತ್ತು ಅಭ್ಯರ್ಥಿ ಗೆಲುವಿಗೆ ಯಾವ ಮಾನದಂಡಗಳನ್ನು ಅನುಸರಿಸಬೇಕು ಎಂಬ ಬಗ್ಗೆ ವಿವರಿಸಲಿದ್ದಾರೆ. ಅಧಿಕಾರ ಹಂಚಿಕೆ ಸೂತ್ರದಂತೆ ಸಿದ್ದರಾಮಯ್ಯ ಅವರು ಎರಡು ವರ್ಷಗಳ ಅವಧಿ ಪೂರ್ಣಗೊಳಿಸಿದ ನಂತರ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಡಬೇಕು.

ಅಧಿಕಾರ ಹಸ್ತಾಂತರಕ್ಕೆ ಸಮಯ ಇನ್ನೂ ದೂರವಿದ್ದರೂ ಮುಖ್ಯಮಂತ್ರಿ ಅವರ ಆಪ್ತರು ಈಗಿನಿಂದಲೇ ಕ್ಯಾತೆ ತೆಗೆದು ಉಪಮುಖ್ಯಮಂತ್ರಿ ಅವರಿಗೆ ದೊರೆಯಬಹುದಾದ ಬಡ್ತಿಗೆ ಅಡ್ಡಗಾಲು ಹಾಕಿದ್ದಾರೆ. ತಮಗೆ ಅಧಿಕಾರ ತಪ್ಪಿಸಲು ಸಂಚು ನಡೆಸುತ್ತಿರುವವರನ್ನೇ ಲೋಕಸಭಾ ಚುನಾವಣಾ ಕಣಕ್ಕೆ ಇಳಿಸಿದರೆ ತಮ್ಮ ಮುಂದಿನ ಹಾದಿ ಸುಗಮ ಎಂಬ ಉದ್ದೇಶದಿಂದ ಶಿವಕುಮಾರ್ ಅವರು, ಬೆಳಗಾವಿ, ತುಮಕೂರು, ಕೊಪ್ಪಳ, ಬಾಗಲಕೋಟೆ, ರಾಯಚೂರು, ಬೆಂಗಳೂರು ಕೇಂದ್ರ ಸೇರಿದಂತೆ ಎಂಟು ಕ್ಷೇತ್ರಗಳಲ್ಲಿ ಸಚಿವರು, ಶಾಸಕರನ್ನು ಕಣಕ್ಕಿಳಿಸಲು ತಂತ್ರಗಾರಿಕೆ ರೂಪಿಸಿ ವರಿಷ್ಠರ ಮೂಲಕ ಒತ್ತಡ ತರುವ ಯತ್ನ ಮಾಡಿದ್ದಾರೆ.

ಸರ್ಕಾರ ಅಧಿಕಾರಕ್ಕಷ್ಟೇ ಅಗ್ಗದ ಗ್ಯಾರಂಟಿ; ಶಾಲಾ ಮಕ್ಕಳ ಪ್ರಾಣ, ಭವಿಷ್ಯಕ್ಕಿಲ್ಲ ಗ್ಯಾರಂಟಿ

ಬೆಂಗಳೂರು, ಜ.3(ಕೆಎಂಶಿ)–ಚುನಾವಣೆ ಲಾಭಕ್ಕಾಗಿ ಅಗ್ಗದ ಗ್ಯಾರಂಟಿಗಳನ್ನು



ರೂಪಿಸಿ ಜಾರಿಗೆ ತಂದಿರುವ ಕಾಂಗ್ರೆಸ್ ಸರ್ಕಾರ ಶಾಲಾ ಮಕ್ಕಳ ಪ್ರಾಣ ಹಾಗೂ ಭವಿಷ್ಯಕ್ಕೆ ಮಾರಕವಾಗಿದೆ.

ಮಹಿಳೆಯರಿಗೆ ಶಕ್ತಿ ತುಂಬುತ್ತೇವೆ ಎಂದು ಹೊರಟ ಕಾಂಗ್ರೆಸ್ ಸರ್ಕಾರ ಶಾಲಾ ಮಕ್ಕಳ ಭವಿಷ್ಯಕ್ಕೆ ಕಂಟಕವಾಗಿದೆ. ಇದು ಕರ್ನಾಟಕದ ಮಾದರಿ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ತಮ್ಮ ಎಕ್ಸ್ ಟ್ವಿಟರ್ ಖಾತೆಯಲ್ಲಿ ಶಾಲಾ ಮಕ್ಕಳು ಬಸ್ ಫುಟ್ ಬೋರ್ಡ್ ಮೇಲೆ ನೇತಾಡಿಕೊಂಡು ಅಪಾಯಕಾರಿ ಪ್ರಯಾಣ ಮಾಡುತ್ತಿರುವ ವಿಡಿಯೊ ಹಂಚಿಕೊಂಡಿದ್ದು, ಕಾಂಗ್ರೆಸ್ ಪಕ್ಷಕ್ಕೆ ಟ್ಯಾಗ್ ಮಾಡಿದ್ದಾರೆ.

ಶಕ್ತಿ ಯೋಜನೆಯ ಪರಿಣಾಮ ನಿತ್ಯವೂ ಶಾಲೆಗೆ ಹೋಗಬೇಕಾಗಿರುವ ಮಕ್ಕಳಿಗೆ ಬಸ್ಸುಗಳಲ್ಲಿ ಪ್ರಯಾಣಕ್ಕೆ ಸ್ಥಳಾವಕಾಶ ಸಿಗುತ್ತಿಲ್ಲ, ಶಿಕ್ಷಕರು, ಕಾರ್ಮಿಕರೂ ಇದೇ ದುಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆಟೋ, ಲಗೇಜ್ ಆಟೋ, ಗೂಡ್ಸ್ ವಾಹನ



ಗಳನ್ನು ಹತ್ತಿ ಅಪಾಯಕಾರಿ ರಸ್ತೆಗಳಲ್ಲಿ ಮಕ್ಕಳು ಶಾಲೆಗೆ ಹೋಗಿಬರುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದಿದ್ದಾರೆ. ಒಂದೆಡೆ ಬಸ್ಸುಗಳ ಕೊರತೆ, ಇನ್ನೊಂದೆಡೆ ಮಹಿಳೆಯರು ಪ್ರವಾಸಿ ತಾಣಗಳಿಗೆ ಮುಗಿಬಿದ್ದ ಪರಿಣಾಮ ಮಕ್ಕಳು ● 7ನೇ ಪುಟಕ್ಕೆ

ಗೋಧ್ರಾ ದುರಂತ ರೀತಿ ಮತ್ತೊಂದು ಘಟಿಸಬಹುದು: ಅಯೋಧ್ಯೆಗೆ ಹೋಗುವವರಿಗೆ ಭದ್ರತೆ ಕಲ್ಪಿಸಬೇಕು

ಬೆಂಗಳೂರು: ಜನವರಿ 22ರಂದು




ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಿರುವ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಮಧ್ಯೆ ಇಷ್ಟು ದಿನ ವಾಗ್ಯುದ್ಧ ನಡೆಯುತ್ತಿದ್ದು, ಇದೀಗ ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಸ್ಫೋಟಕ ಹೇಳಿಕೆಯೊಂದನ್ನು ನೀಡಿದ್ದಾರೆ. ಅಯೋಧ್ಯೆಗೆ ಹೋಗುವವರಿಗೆ ಸರ್ಕಾರವೇ ರಕ್ಷಣೆ ನೀಡಬೇಕು. ಏಕೆಂದರೆ, ● 7ನೇ ಪುಟಕ್ಕೆ

> **“ ಕೂಡಲೇ ಕಾಂಗ್ರೆಸ್ ನಾಯಕ ಹರಿಪ್ರಸಾದ್ ಅವರನ್ನು ಸರ್ಕಾರ ಬಂಧಿಸಬೇಕು ಎಂದು ಮಾಧ್ಯಮಗಳ ಜೊತೆ ಮಾತನಾಡಿದ ಡಿವಿಎಸ್, ರಾಷ್ಟ್ರೀಯ ನಾಯಕರೊಬ್ಬರು ಹೀಗೆ ಮಾತನಾಡುತ್ತಾರೆ ಅಂದರೆ ದೊಡ್ಡ ಪಿತೂರಿ ಮಾಡಿದಂತೆ ಕಾಣುತ್ತದೆ. ಒಬ್ಬೇ ಒಬ್ಬ ರಾಮ ಭಕ್ತರಿಗೆ ಸಮಸ್ಯೆ ಆದರೆ ಅದಕ್ಕೆ ಕಾಂಗ್ರೆಸ್ ಹೊಣೆ ಆಗುತ್ತದೆ. ಕೂಡಲೇ ಹರಿಪ್ರಸಾದ್ ಬಂಧನ ಮಾಡಿ ತನಿಖೆ ಮಾಡಬೇಕು ಎಂದು ಆಗ್ರಹಿಸಿದರು.**
> –ಮಾಜಿ ಕೇಂದ್ರ ಸಚಿವ ಸದಾನಂದಗೌಡ

ಕರಸೇವಕರ ಬಿಡುಗಡೆಗೆ 48 ಗಂಟೆಗಳ ಗಡುವು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಖಡಕ್ ಎಚ್ಚರಿಕೆ

ಬೆಂಗಳೂರು: ಶ್ರೀನಗರದ ಲಾಲ್‌ಚೌಕದಲ್ಲಿ ಕಾರ್ಯಕರ್ತರು ಮುರಳಿ ಮನೋ ಹರ್ ಜೋಷಿಯವರ ನೇತೃತ್ವದಲ್ಲಿ ತ್ರಿವರ್ಣ ಧ್ವಜ ಹಾರಿಸಿದ್ದೇವೆ. ಪೊಲೀಸರ, ರಾಜ್ಯ ಸರ್ಕಾರದ ಗೊಡ್ಡು ಬೆದರಿಕೆಗೆ ಹೆದರುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಎಚ್ಚರಿಸಿದರು. ರಾಮ ವಿರೋಧಿ ರಾಜ್ಯ ಸರ್ಕಾರದ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬುಧವಾರ ನಡೆದ ಬಿಜೆಪಿ



ಬೃಹತ್ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳಿಗೆ 48 ಗಂಟೆಗಳ ಗಡುವು ಕೊಡುತ್ತೇವೆ. ಶ್ರೀಕಾಂತ್ ಪೂಜಾರಿಯವರ ಬಿಡುಗಡೆ ಮಾಡದಿದ್ದರೆ, ಬಿಜೆಪಿ ಯುವಮೋರ್ಚಾ ವತಿಯಿಂದ ಹುಬ್ಬಳ್ಳಿ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕುತ್ತೇವೆ ಎಂದು ಎಚ್ಚರಿಕೆ ನೀಡಿದರು. ಇಂದು ರಾಜ್ಯಪಾಲರನ್ನೂ ಭೇಟಿ ಮಾಡುತ್ತೇವೆ ಎಂದು ತಿಳಿಸಿದರು. ಅವಶ್ಯಕತೆ ಬಂದರೆ ರಸ್ತೆಗಿಳಿದು ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಮೊಘಲರ ಆಡಳಿತ, ತಾಲಿಬಾನ್ ಆಡಳಿತ ಇದೆಯೇ ಎಂದು ಪ್ರತಿಯೊಬ್ಬರು ಮಾತನಾಡುತ್ತಿದ್ದಾರೆ. ಹಿಂದೂ ಹಕ್ಕುಗಳನ್ನು ತುಳಿಯುವ ಕೆಲಸ, ಹಿಂದೂ ವಿರೋಧಿ ನೀತಿ ನಿಮ್ಮದು. ನಿಮಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಎಚ್ಚರಿಸಿದರು. ಪಿಎಫ್ಐ ವಿರುದ್ಧ ಇದ್ದ ಕೇಸುಗಳನ್ನು ರದ್ದು ಮಾಡಿದ ಸರ್ಕಾರ ಕಾಂಗ್ರೆಸ್ಸಿನದು. ಡಿ.ಜೆ. ಹಳ್ಳಿ, ಕೆಜಿ ಹಳ್ಳಿ ಕೇಸುಗಳನ್ನು ಹಿಂದಕ್ಕೆ ಪಡೆಯಲು ಮುಂದಾಗಿದ್ದಾರೆ. ಕನ್ನಡ ವಿರೋಧಿ ಸರ್ಕಾರ ಇದು. ರೈತರ ವಿರುದ್ಧ ಕೇಸು ಹಾಕುತ್ತಿದ್ದಾರೆ. ಹಿಂದೂ, ರಾಮ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಉತ್ತರ ಕೊಡುತ್ತೇವೆ. ಅಯೋಧ್ಯೆ ಯಲ್ಲಿ ಹಿಂದೂಗಳ ಆರಾಧ್ಯದೈವ ಪ್ರಭು ಶ್ರೀರಾಮನ ಮಂದಿರ ನಿರ್ಮಾಣದ ಕನಸು ನನಸಾಗುತ್ತಿದೆ. ನರೇಂದ್ರ ಮೋದಿಜೀ ಅವರ ನೇತೃತ್ವದಲ್ಲಿ ಶ್ರೀರಾಮನ ಮಂದಿರ ನಿರ್ಮಾಣವಾಗಿ ಲೋಕಾರ್ಪಣೆ ಆಗಲಿದೆ. ಎಲ್ಲ ಕಡೆ ಉತ್ಸಾಹ, ಸಂತಸದ ವಾತಾವರಣ ಇದೆ ಎಂದು ವಿವರಿಸಿದರು. ● 7ನೇ ಪುಟಕ್ಕೆ

ದೇಶದಲ್ಲಿ ನರೇಂದ್ರ ಮೋದಿಯನ್ನು ಸರಿಗಟ್ಟುವ ನಾಯಕ ಯಾರೂ ಇಲ್ಲ

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿಟಿಡಿ ಪ್ರತಿಪಾದನೆ

ಮೈಸೂರು, ಜ. 3(ಆರ್‌ಕೆ)– ಸದ್ಯದ ಮಟ್ಟಿಗೆ ದೇಶದಲ್ಲಿ



ನರೇಂದ್ರ ಮೋದಿಯವರನ್ನು ಸರಿಗಟ್ಟುವ ನಾಯಕ ಯಾರೂ ಇಲ್ಲ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ. ದೇವೇಗೌಡ ಇಂದಿಲ್ಲಿ ಪ್ರತಿಪಾದಿಸಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ದೇಶದ ಪ್ರಧಾನಿ ಆಗುವ ಅರ್ಹತೆ, ಜನ ಬೆಂಬಲ ಮೋದಿ ಅವರನ್ನು ಹೊರತುಪಡಿಸಿದರೆ ಬೇರೆ ಯಾರಿಗೂ ಇಲ್ಲ. 21ನೇ ಶತಮಾನದ ಈ ಆಧುನಿಕ ಯುಗದಲ್ಲಿ ದೇಶದ ಏಕತೆ, ಅಖಂಡತೆ, ರಕ್ಷಣೆ ಮತ್ತು ಅಭಿವೃದ್ಧಿ ಮೋದಿ ಅವರಿಂದ ಮಾತ್ರ ಸಾಧ್ಯ ಎಂದರು.

ಅವರನ್ನು ಮತ್ತೆ 3ನೇ ಬಾರಿಗೆ ಪ್ರಧಾನಿಯಾಗಿಸುವ ಏಕೈಕ ಗುರಿ ಬಿಟ್ಟರೆ ನಮಗೆ ಬೇರೇನೂ ಇಲ್ಲ. ಇಂಡಿಯಾ ಮೈತ್ರಿ ಕೂಟದಲ್ಲೂ ಅಂತಹ ನಾಯಕರಿಲ್ಲ ಎಂದ ಅವರು, ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಇಂಡಿಯಾ ಮೈತ್ರಿ ಕೂಟದಲ್ಲಿರುವ ಪಕ್ಷಗಳ ಹಲವು ನಾಯಕರೂ ಎನ್‌ಡಿಎ ಮೈತ್ರಿಕೂಟದತ್ತ ಬರಲಿದ್ದಾರೆ ಎಂದರು. ನಮಗೆ ಎಷ್ಟು ಸ್ಥಾನಬೇಕು, ಬೇಡ ಎನ್ನುವುದು ಮುಖ್ಯವಲ್ಲ. ಈ ರಾಷ್ಟ್ರಕ್ಕೆ ● 7ನೇ ಪುಟಕ್ಕೆ

ನನ್ನ ಮಗನ ಬೆಳವಣಿಗೆ ತಡೆಯಲು ಡಿಸಿಸಿ ಬ್ಯಾಂಕ್ ಚುನಾವಣೆ ಮುಂದೂಡುವ ತಂತ್ರ

ಮೈಸೂರು, ಜ. 3(ಆರ್‌ಕೆ)–ನನ್ನ ಮಗ ಜಿ.ಡಿ. ಹರೀಶ್ ಗೌಡನ ಬೆಳವಣಿಗೆ ತಡೆಯಲು ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಚುನಾವಣೆಯನ್ನು ಮುಂದೂಡುವ ತಂತ್ರ ಮಾಡಿದ್ದರು ಎಂದು ಶಾಸಕ ಜಿ.ಟಿ.ದೇವೇಗೌಡ ಇಂದಿಲ್ಲಿ ಆರೋಪಿಸಿದ್ದಾರೆ.

ಬ್ಯಾಂಕ್ ಚುನಾವಣೆ ನಡೆಸುವಂತೆ ಹೈಕೋರ್ಟ್ ಸೂಚನೆ ನೀಡಿರುವ ಸಂಬಂಧ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುತಂತ್ರದಿಂದಾಗಿ ಬ್ಯಾಂಕ್ ಚುನಾವಣೆ ಮುಂದೂಡಲಾಗಿತ್ತು. ಸಹಕಾರ ಸಂಘಗಳಲ್ಲಿ ನಮ್ಮ ಬೆಂಬಲಿಗರು ಹೆಚ್ಚಾಗಿದ್ದಾರೆ. ಸೋಲಿನ ಭೀತಿಯಿಂದ ಸಿದ್ದರಾಮಯ್ಯ ಚುನಾವಣೆ ಮುಂದೂಡುವಂತೆ ಮಾಡಿದ್ದರು. ಯಾವಾಗ ಚುನಾವಣೆ ನಡೆದರೂ ನಮ್ಮ ಬೆಂಬಲಿಗರು ಜಯ ಸಾಧಿಸುತ್ತಾರೆ ಎಂದರು. ಇತ್ತೀಚೆಗೆ ನಡೆದ ಬನ್ನೂರು, ಹೊಸಕೋಟೆ, ಗೋಪಾಲಪುರ ಡೈರಿಗಳ ಚುನಾವಣೆಗಳಲ್ಲಿ ನಮ್ಮ ಬೆಂಬಲಿಗರೇ ಗೆಲುವು ಸಾಧಿಸಿದ್ದಾರೆ. ನಾನು ಎಲ್ಲಿಗೂ ಹೋಗಿ ಪ್ರಚಾರ ● 7ನೇ ಪುಟಕ್ಕೆ

ಮೈಸೂರು ವಿಮಾನ ನಿಲ್ದಾಣದಲ್ಲಿ ಪೈಲಟ್ ಕಣ್ಣಿಗೆ ಲೇಸರ್ ಲೈಟ್ ಬಿಡುತ್ತಿರುವ ಕಿಡಿಗೇಡಿಗಳು

ಪೈಲಟ್‌ಗಳಿಂದಲೇ ಆಘಾತಕಾರಿ ವಿಚಾರ ಬಯಲು





ಮೈಸೂರು, ಜ.3(ಆರ್‌ಕೆ)–ವಿಮಾನ ಲ್ಯಾಂಡಿಂಗ್ ಮತ್ತು ಟೇಕ್ ಆಫ್ ಆಗುವಾಗ ಕಿಡಿಗೇಡಿಗಳು ಪೈಲಟ್‌ಗಳ ಕಣ್ಣಿಗೆ ಹೈ–ಬೀಮ್ ಲೇಸರ್ ಲೈಟ್ ಬಿಟ್ಟು ಕಿರಿಕಿರಿ ಉಂಟು ಮಾಡುತ್ತಿರುವ ಗಂಭೀರ ಸಂಗತಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬೆಳಕಿಗೆ ಬಂದಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ವಿಮಾನ ನಿಲ್ದಾಣದ ನಿರ್ದೇಶಕ ಜೆ.ಆರ್.ಅನೂಪ್, ಕಳೆದ ತಿಂಗಳು ಇಂತಹ ಪ್ರಸಂಗ ಬೆಳಕಿಗೆ ಬಂದಿದ್ದು, ತೊಂದರೆಗೀಡಾದ ಪೈಲಟ್‌ಗಳು ತಮಗೆ ದೂರು ನೀಡಿದ್ದರು ಎಂದರು. ವಿಮಾನ ನಿಲ್ದಾಣದಲ್ಲಿ ಟೇಕ್ ಆಫ್ ಮತ್ತು ಲ್ಯಾಂಡಿಂಗ್ ಆಗುವಾಗ ಪೈಲಟ್‌ಗಳ ಕಣ್ಣಿಗೆ ಲೇಸರ್ ಲೈಟ್ ಬಿಡುತ್ತಿದ್ದರಿಂದ ವಿಮಾನದ ಸುರಕ್ಷತಾ ಭೂ ಸ್ಪರ್ಶ ಹಾಗೂ ಟೇಕಾಫ್‌ಗೆ ತೊಂದರೆಯಾಗುತ್ತಿತ್ತು. ದೂರದಿಂದ ಹೈಡೆನ್ಸಿಟಿ ಇರುವ ಲೇಸರ್ ಲೈಟ್ ಬಿಡುತ್ತಿದ್ದರಿಂದ ಯಾವ ಕಡೆಯಿಂದ ಲೇಸರ್ ಲೈಟ್ ಬಿಡಲಾಗುತ್ತಿದೆ ಎಂಬುದು ತಿಳಿಯುತ್ತಿರಲಿಲ್ಲ. ಹೈಪವರ್ ಗ್ರೀನ್ ಲೇಸರ್ (SMW)ಗಳು ಮಾರುಕಟ್ಟೆಯಲ್ಲಿ ಸುಲಭವಾಗಿ ಲಭ್ಯವಾಗುತ್ತಿರುವುದರಿಂದ ಕಿಡಿಗೇಡಿಗಳು ಈ ಕೃತ್ಯ ಎಸಗುತ್ತಿರಬಹುದು ಎಂದು ಶಂಕಿಸಲಾಗಿದೆ ಎಂದು ಅನೂಪ್ ಅವರು ತಿಳಿಸಿದರು. ಈ ಲೇಸರ್ ಲೈಟ್ ● 7ನೇ ಪುಟಕ್ಕೆ

ಕೊರೊನಾ ರೂಪಾಂತರಿ ಹಾವಳಿ ಆತಂಕದ ಹಿನ್ನೆಲೆ

60 ವರ್ಷ ಮೇಲ್ಪಟ್ಟವರು, ನಾನಾ ಆರೋಗ್ಯ ಸಮಸ್ಯೆ ವುಳ್ಳವರಿಗೆ ಲಸಿಕೆ ಅಭಿಯಾನ ಆರಂಭ

ಮೈಸೂರಿನ ಕೆ.ಆರ್, ಎಸ್‌ಎಂಟಿ, ಜಿಲ್ಲಾಸ್ಪತ್ರೆ, ಕ್ಯಾತಮಾರನಹಳ್ಳಿ, ರಾಜೇಂದ್ರನಗರ ಸೇರಿದಂತೆ ಜಿಲ್ಲೆಯಾದ್ಯಂತ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕಾ ವ್ಯವಸ್ಥೆ; ಮೊದಲ ದಿನ ನೀರಸ ಪ್ರತಿಕ್ರಿಯೆ



ಮೈಸೂರು, ಜ. 3(ಆರ್‌ಕೆ)– ಕೋವಿಡ್ ರೂಪಾಂತರಿ ಹಾವಳಿ ಹಿನ್ನೆಲೆಯಲ್ಲಿ 60 ವರ್ಷ ಮೇಲ್ಪಟ್ಟ ಹಾಗೂ ರೋಗ ನಿರೋಧಕ ಶಕ್ತಿ ಕಡಿಮೆ ಇರುವ, ಜೊತೆಗೆ ಹಲವು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಕೊರೊನಾ ಲಸಿಕೆ ನೀಡುವ ಪ್ರಕ್ರಿಯೆ ಇಂದಿನಿಂದ ಆರಂಭವಾಗಿದೆ.

ಮೈಸೂರಿನ ಕೆ.ಆರ್, ಎಸ್‌ಎಂಟಿ, ಜಿಲ್ಲಾಸ್ಪತ್ರೆ, ಕ್ಯಾತಮಾರನಹಳ್ಳಿ ಮತ್ತು ರಾಜೇಂದ್ರನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಜಿಲ್ಲೆಯಾದ್ಯಂತ ಇರುವ ಪಿಹೆಚ್‌ಸಿಗಳಲ್ಲಿ ಲಸಿಕೆ ನೀಡಲಾರಂಭಿಸಿದ್ದು, ವೈದ್ಯರು ಮತ್ತು ನರ್ಸ್‌ಗಳನ್ನು ಪ್ರಕ್ರಿಯೆಗೆ ನಿಯೋಜಿಸಲಾಗಿದೆ.

ಆದರೆ, ಮೊದಲ ದಿನವಾದ ಇಂದು ಮಧ್ಯಾಹ್ನದವರೆಗೂ ಲಸಿಕೆ ಅಗತ್ಯವಿರುವವರು ಬಾರದ ಕಾರಣ, ವೈದ್ಯರು ಮತ್ತು ಸಿಬ್ಬಂದಿ ಲಸಿಕಾ ಕೇಂದ್ರದಲ್ಲಿ ಕಾದು ಕುಳಿತಿದ್ದರು. ಒಮ್ಮೆ ಒಂದು ಬಾಕ್ಸ್ ತೆರೆದರೆ 20 ಮಂದಿಗೆ ಅದರಲ್ಲಿನ ಲಸಿಕೆಯನ್ನು ತಕ್ಷಣ ನಿರಂತರವಾಗಿ ನೀಡಿ ಪೂರೈಸಬೇಕಾಗಿದೆ. ಒಂದು ವೇಳೆ ಈ ಪ್ರಮಾಣದ ಜನರು ಬಾರದಿದ್ದರೆ ಆ ಬಾಕ್ಸ್ ಅನ್ನೇ ತೆರೆಯಬಾರದೆಂದು ಕೋವಿಡ್ ಮಾರ್ಗಸೂಚಿಯಲ್ಲಿ ಸ್ಪಷ್ಟವಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಬೆಳಗ್ಗೆ ಯಾರಿಗೂ ಲಸಿಕೆ ನೀಡಲಾಗಲಿಲ್ಲ ಎಂದು ನೋಡಲ್ ಅಧಿಕಾರಿಯಾದ ಆರ್‌ಸಿಹೆಚ್ ಡಾ.ಎಂ.ಎಸ್. ಜಯಂತ್, 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆಯದ 60 ವರ್ಷ ಮೇಲ್ಪಟ್ಟವರು, ಕೋವಿಡ್–19 ಸೋಂಕಿತರಾಗಿದ್ದು, ಹೆಚ್ಚಿನ ಅಪಾಯದಂಚಿನಲ್ಲಿರುವವರು ಹಾಗೂ ಆರೋಗ್ಯ ಕಾರ್ಯಕರ್ತರಿಗೆ ಆದ್ಯತೆ ಮೇಲೆ ಕೊರೊನಾ ರೂಪಾಂತರಿ ಜೆಎನ್.1 ಲಸಿಕೆ ನೀಡಬೇಕೆಂಬ ಸೂಚನೆಯನ್ವಯ ಜಿಲ್ಲೆಯಲ್ಲಿ ಇಂದಿನಿಂದ ಲಸಿಕಾ ಅಭಿಯಾನ ಆರಂಭಿಸಲಾಗಿದೆ



ಎಂದು ಅವರು ತಿಳಿಸಿದರು.

ಲಸಿಕೆ ಬಾಕ್ಸ್ ತೆರೆದ 4 ಗಂಟೆಯೊಳಗೆ ಬಳಸಬೇಕಾಗಿರುವುದರಿಂದ ಲಸಿಕಾ ಕೇಂದ್ರದಲ್ಲಿ 20 ಫಲಾನುಭವಿಗಳು ಲಭ್ಯವಾಗುವವರೆಗೂ ಲಸಿಕಾ ಬಾಕ್ಸ್‌ಗಳನ್ನು ತೆರೆಯಬಾರದೆಂಬ ಸೂಚನೆ ಇರುವುದರಿಂದ ಇಂದು ಕೆಲವರಿಗೆ ಮಾತ್ರ ಲಸಿಕೆ ನೀಡಲು ಸಾಧ್ಯವಾಯಿತು ಎಂದು ಡಾ. ಜಯಂತ್ ತಿಳಿಸಿದರು. ಮೈಸೂರು ಜಿಲ್ಲೆಗೆ 1,360 ಕಾರ್ಬ್‌ವ್ಯಾಕ್ಸ್ ಲಸಿಕೆ ನೀಡಲಾಗಿದೆಯಾದರೂ, ಮೈಸೂರಿನ ಜಿಲ್ಲಾಸ್ಪತ್ರೆ ಹೊರತುಪಡಿಸಿ ಬೇರೆ ಕೇಂದ್ರಗಳಲ್ಲಿ ಒಬ್ಬರಿಗೂ ನೀಡಲು ಸಾಧ್ಯವಾಗಿಲ್ಲ. ಅಭಿಯಾನ ಮುಂದುವರಿಯಲಿದ್ದು, 20 ಮಂದಿ ನೋಂದಣಿಯಾಗಿರುವುದನ್ನು ಖಚಿತಪಡಿಸಿಕೊಂಡು ಲಸಿಕೆ ನೀಡಲು ಸೂಚಿಸಲಾಗಿದೆ ಎಂದು ಡಾ. ಜಯಂತ್ ತಿಳಿಸಿದರು. ಈ ಕುರಿತು ಜನರಿಗೆ ಅರಿವು ಮೂಡಿಸಬೇಕಾಗಿದ್ದು, ಆರೋಗ್ಯ ಇಲಾಖೆಯು ಅದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಜನರೂ ಆತಂಕ ಪಡದೇ ವಿವಿಧ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರು, 60 ವರ್ಷ ಮೇಲ್ಪಟ್ಟವರು ಮುಂಜಾಗ್ರತೆಯಾಗಿ ಕೊರೊನಾ ಲಸಿಕೆ ಪಡೆಯುವಂತೆ ಡಾ.ಜಯಂತ್ ತಿಳಿಸಿದ್ದಾರೆ.

ಮೈಸೂರಿನ ಚಾಮರಾಜ, ಕೃಷ್ಣರಾಜ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳಿಗೆ ತಲಾ 200 ಡೋಸ್ ಉಳಿದ ಕ್ಷೇತ್ರಗಳಿಗೆ ತಲಾ 100 ಡೋಸ್ ಲಸಿಕೆ ಸರಬರಾಜು ಮಾಡಲಾಗಿದೆ. ಆರೋಗ್ಯ ಸಮಸ್ಯೆ ಇರುವವರು 60 ವರ್ಷ ಮೇಲ್ಪಟ್ಟವರು ಮಾತ್ರ ಮುಂಜಾಗ್ರತಾ ಲಸಿಕಾ ಡೋಸ್, ಪಡೆಯಬಹುದು. ಉಳಿದವರು ಆತಂಕಪಟ್ಟು ಲಸಿಕಾ ಕೇಂದ್ರಕ್ಕೆ ಧಾವಿಸುವ ಅಗತ್ಯವಿಲ್ಲ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಮೈಸೂರು ಮಿತ್ರ ಗುರುವಾರ 4 ಜನವರಿ 2024

ಸಂಸದ ಪ್ರತಾಪ್ ಸಿಂಹ ಮೇಲಿನ ದ್ವೇಷಕ್ಕೆ ಸಹೋದರನ ಬಂಧನ

ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ ಆರೋಪ



ಮೈಸೂರು,ಜ.3(ಜಿಎ)–ಸಂಸದ ಪ್ರತಾಪ ಸಿಂಹ ವಿರುದ್ಧದ ದ್ವೇಷ ರಾಜಕಾರಣದ ಭಾಗವಾಗಿ ಮರಗಳ ಅಕ್ರಮ ಕಟಾವು ಪ್ರಕರಣದಲ್ಲಿ ಅವರ ತಮ್ಮ ವಿಕ್ರಮ್ ಸಿಂಹ ಅವರನ್ನು ಬಂಧಿಸಲಾಗಿದೆ ಎಂದು ಬಿಜೆಪಿ ಯುವ ಮೋರ್ಚಾ ನಗರ ಘಟಕದ ಅಧ್ಯಕ್ಷ ಎಂ.ಜೆ.ಕಿರಣ್ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ನಂದಗೋಡನಹಳ್ಳಿಯ ಜಯಮ್ಮ ಎಂಬುವರ ಜಮೀನಿನಲ್ಲಿ ವಿಕ್ರಮ್ ಸಿಂಹ ಅವರು 2024ರ ಜನವರಿ 24ರಿಂದ ಶುಂಠಿ ಬೇಸಾಯ ಮಾಡಲು ಕರಾರು ಮಾಡಿಕೊಂಡಿದ್ದಾರೆ. ಆದರೆ, ಅವರು ಸ್ವಾಧೀನ ಪಡೆದುಕೊಳ್ಳುವ ಮುನ್ನವೇ ಜಮೀನಿನ ವಾರಸುದಾರರು ಅಲ್ಲಿನ ಮರಗಳನ್ನು ಕಟಾವು ಮಾಡಿದ್ದಾರೆ ಹೊರತು ವಿಕ್ರಮ್ ಸಿಂಹ ಕಟಾವು ಮಾಡಿಸಿಲ್ಲ ಎಂದರು.

ಮತ್ತೊಂದೆಡೆ ಈ ಪ್ರಕರಣದ ಎಫ್‌ಐಆರ್‌ನಲ್ಲಿ ಹೆಸರಿಲ್ಲದಿದ್ದರೂ ಅನಗತ್ಯವಾಗಿ ಬಂಧಿಸಲಾಗಿತ್ತು. ಸಂಸದರ ವಿರುದ್ಧವೂ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರು ಆಧಾರರಹಿತ ಆರೋಪ ಮಾಡುತ್ತಿದ್ದು, ಹೀಗೆ ಮುಂದುವರಿದರೆ ಅವರ ಮನೆ ಮುಂದೆ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಭರತ್‌ಕುಮಾರ್, ಸಂತೋಷ್‌ಕುಮಾರ್, ಕಾರ್ಯದರ್ಶಿ ಹರ್ಷಿತ್‌ಕುಮಾರ್, ಸದಸ್ಯರಾದ ಗಿರೀಶ್ ಗೌಡ, ಪುನೀತ್ ಉಪಸ್ಥಿತರಿದ್ದರು.



ಮೈಸೂರು ರೇಸ್ ಕ್ಲಬ್‌ನಲ್ಲಿ ಬುಧವಾರ ನಡೆದ ರೇಸ್‌ನಲ್ಲಿ ಚಾಮುಂಡಿ ಮಿಲಿಯನ್ ಟ್ರೋಫಿ ಗೆದ್ದಂತಹ ಕುದುರೆ ಕುಸ್ಕ್ ತರಬೇತುದಾರರಾದ ಎಂ.ಈಶ್ವರ್ ಅವರು ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಅವರಿಂದ ಟ್ರೋಫಿ ಸ್ವೀಕರಿಸಿದರು. ಈ ವೇಳೆ ಎಂಆರ್‌ಸಿ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ, ಸ್ಟೀವರ್ಡ್ಸ್ ಕಮಿಟಿ ಸದಸ್ಯರು ಉಪಸ್ಥಿತರಿದ್ದಾರೆ.

ಇಂದು ಶ್ರೀ ಕಾಲಭೈರವ ಜನ್ಮಾಷ್ಟಮಿ

ಮೈಸೂರು, ಜ.3–ಮೈಸೂರಿನ ಶ್ರೀರಾಂಪುರದ ಟೆಂಪಲ್ ಬೆಲ್ ಲೇಔಟ್‌ನಲ್ಲಿರುವ ಶ್ರೀ ಕಾಲಭೈರವ ದಿವ್ಯ ಕ್ಷೇತ್ರದಲ್ಲಿ ಜ.4ರಂದು ಮಾರ್ಗಶಿರ ಬಹುಳ ಅಷ್ಟಮಿಯಂದು ಶ್ರೀ ಕಾಲಭೈರವಾಷ್ಟಮಿ ಅಥವಾ ಶ್ರೀ ಕಾಲಭೈರವ ಜನ್ಮಾಷ್ಟಮಿ ಆಚರಣೆ ಏರ್ಪಡಿಸಲಾಗುತ್ತಿದೆ. ಬೆಳಗ್ಗೆ 8.30ಕ್ಕೆ ಕಾಲಭೈರವ ಹೋಮ 11.00ಕ್ಕೆ ಕಬ್ಬಿನ ಹಾಲಿನಿಂದ ಅಭಿಷೇಕ, 12.30ಕ್ಕೆ ಮಹಾಮಂಗಳಾರತಿ. 12.30ರಿಂದ 3.30ರವರೆಗೂ ಅನ್ನದಾಸೋಹವನ್ನು ಆಯೋಜಿಸಲಾಗಿದ್ದು, ಸಂಜೆ 5.30ಕ್ಕೆ ವೀರಗಾಸೆ ಕುಣಿತದೊಂದಿಗೆ ಶ್ರೀ ಸ್ವಾಮಿ ಉತ್ಸವ ಹಾಗೂ ತಂಬಿಟ್ಟಿನ ಅಲಂಕಾರ ದರ್ಶನ ಮತ್ತು 7.30ಕ್ಕೆ ಮಹಾಮಂಗಳಾರತಿ ಇದ್ದು ಈ ಎಲ್ಲಾ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಿ ಶ್ರೀ ಸ್ವಾಮಿಯ ಅನುಗ್ರಹ ಪಡೆಯಬೇಕೆಂದು ಪ್ರಕಟಣೆ ತಿಳಿಸಿದೆ.

ಆಯ್ಕೆ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

ಮೈಸೂರು,ಜ.3– ಪಿಎಂ ಅಭಿಮ್ ಯೋಜನೆ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಮೆರಿಟ್ ಕಮ್ ರೋಸ್ಟರ್ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಯಿದ್ದಲ್ಲಿ ಜನವರಿ 10ರವರೆಗೆ ಆಕ್ಷೇಪಣೆಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಗೆ ಸಲ್ಲಿಸಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುತ್ತಿಗೆ ಸೀಳಿ ಪತ್ನಿ ಹತ್ಯೆಗೈದ ಪತಿ

■ ಮೈಸೂರಿನ ಜಯದೇವನಗರದಲ್ಲಿ ಮಂಗಳವಾರ ರಾತ್ರಿ ಕೃತ್ಯ: ಆರೋಪಿ ಸೆರೆ

ಮೈಸೂರು, ಜ.3(ಆರ್‌ಕೆ)–ವ್ಯಕ್ತಿಯೋರ್ವ, ಚಾಕುವಿನಿಂದ ಕುತ್ತಿಗೆ ಸೀಳಿ ಪತ್ನಿಯನ್ನು ಬರ್ಬರವಾಗಿ ಹತ್ಯೆಗೈದಿರುವ ಘಟನೆ ಮೈಸೂರಿನ ಜಯದೇವ ನಗರದಲ್ಲಿ ಮಂಗಳವಾರ ರಾತ್ರಿ ಸಂಭವಿಸಿದೆ.

ಕಬೀರಿ(38) ಕೊಲೆಯಾದ ಮಹಿಳೆಯಾಗಿದ್ದು, ಆರೋಪಿ ಪತಿ ಪ್ರಮೋದ್‌ಕುಮಾರ್ (43)ನನ್ನು ಮೇಟಗಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೂಲತಃ ಒಡಿಸ್ಸಾದ ಗುರುಗಾವ್‌ನವರಾದ ಪ್ರಮೋದ್ ಕುಮಾರ್, ವಿಕ್ರಂ ಎಂಬುವರ ಮೂಲಕ ಕಳೆದ 8 ತಿಂಗಳ ಹಿಂದೆ ಮೈಸೂರಿನ ಜೆ.ಕೆ. ಟೈರ್ಸ್‌ನಲ್ಲಿ ತಾತ್ಕಾಲಿಕ ನೌಕರನಾಗಿ ಸೇರಿಕೊಂಡಿದ್ದ.

ಜಯದೇವ ನಗರದಲ್ಲಿ ಮನೆ ಬಾಡಿಗೆಗೆ ಪಡೆದು ಪತ್ನಿ ಕಬೀರಿ ಮತ್ತು 14 ವರ್ಷದ ಪುತ್ರನೊಂದಿಗೆ ವಾಸವಾಗಿದ್ದ ಪ್ರಮೋದ್, ಪತ್ನಿ ಬಗ್ಗೆ ಅನುಮಾನಗೊಂಡು ಹಲವು ಬಾರಿ ಬುದ್ಧಿ ಹೇಳಿದ್ದನಾದರೂ, ಆಕೆ ವರ್ತನೆಯಲ್ಲಿ ಬದಲಾವಣೆಯಾಗಿರಲಿಲ್ಲ ಎಂದು ಆರೋಪಿಸಲಾಗಿದೆ. ಅದರಿಂದ ಬೇಸತ್ತ ಆತ, ಮಂಗಳವಾರ ರಾತ್ರಿ ಎಲ್ಲರೂ ಮಲಗಿದ್ದಾಗ ಕಬೀರಿಯನ್ನು ಕುತ್ತಿಗೆ ಸೀಳಿ ಹತ್ಯೆಗೈದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಧಾವಿಸಿದ ಮೇಟಗಳ್ಳಿ ಠಾಣೆ ಪ್ರಭಾರ ಇನ್ಸ್‌ಪೆಕ್ಟರ್ ಎ.ಮಲ್ಲೇಶ್ ಹಾಗೂ ಸಿಬ್ಬಂದಿ, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಘಟನೆ ನಡೆದ ಕೆಲವೇ ನಿಮಿಷಗಳಲ್ಲಿ ಕೊಲೆ ಆರೋಪಿ ಪ್ರಮೋದ್‌ಕುಮಾರ್‌ನನ್ನು ಬಂಧಿಸಿದರು. ಸ್ಥಳಕ್ಕೆ ವಿಜಯನಗರ ಉಪವಿಭಾಗದ ಎಸಿಪಿ ಎಸ್.ಜಿ.ಗಜೇಂದ್ರ ಪ್ರಸಾದ್ ಭೇಟಿ ನೀಡಿ, ಪರಿಶೀಲಿಸಿದರು.

ನಿಧನ

ಬಿ.ಶ್ರೀಕಂಠಸ್ವಾಮಿ



ಮೈಸೂರು,ಜ.3–ಮೈಸೂರಿನ ವಿಜಯನಗರ ನಿವಾಸಿ ಹಾಗೂ ಅರಣ್ಯ ಇಲಾಖೆ ನಿವೃತ್ತ ಉದ್ಯೋಗಿ ಬಿ.ಶ್ರೀಕಂಠಸ್ವಾಮಿ (74) ಬುಧವಾರ ನಿಧನರಾದರು. ಮೃತರು ಪತ್ನಿ ಸುಗುಣ, ಪುತ್ರಿ ಸೌಮ್ಯ ಮಹಾಲಿಂಗಸ್ವಾಮಿ, ಪುತ್ರರಾದ ಪ್ರಮೋದ್, ಯಶಸ್, ಸೊಸೆ ರೂಪಾ ಪ್ರಮೋದ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮರಾಜನಗರ ಜಿಲ್ಲೆಯ ಬಲಚವಾಡಿಯಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ದಿವಾಕರ ಸಿ. ಕುಲಕರ್ಣಿ



ಮೈಸೂರಿನ ಜೆ.ಪಿ.ನಗರ ನಿವಾಸಿ ದಿವಾಕರ ಸಿ.ಕುಲಕರ್ಣಿ (70) ಮಂಗಳವಾರ ನಿಧನರಾದರು. ಮೂಲತಃ ಗದಗ್‌ನ ಹರ್ತಿಯವರಾದ ಇವರು ಪತ್ನಿ ಕೆ.ಹೆಚ್.ವಿಜಯಲಕ್ಷ್ಮಿ, ಪುತ್ರ ಮಧುಸೂದನ್ ಡಿ.ಕುಲಕರ್ಣಿ, ಪುತ್ರಿ ಮಾನಸ ಡಿ.ಕುಲಕರ್ಣಿ, ಸೊಸೆ ಬಿ.ಸಿ. ಸಿಂಧೂರ, ಅಳಿಯ ಹೆಚ್.ಎಂ.ಸುದರ್ಶನ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಭಾಗ್ಯಮ್ಮ



ಮೈಸೂರಿನ ಮಂಚೇಗೌಡನಕೊಪ್ಪಲು ನಿವಾಸಿ ಶ್ರೀಮತಿ ಭಾಗ್ಯಮ್ಮ (70) ಅವರು ಇಂದು ನಿಧನರಾದರು. ಮೃತರು ಇಬ್ಬರು ಪುತ್ರರು–ಲೋಕೇಶ್, ಪರಮೇಶ್, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಮಂಚೇಗೌಡನಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭೂ ದಾಖಲೀಕರಣ ಪ್ರಕ್ರಿಯೆ ಸರಳಗೊಳಿಸಿದ ಸರ್ಕಾರ; ಶುಲ್ಕದಲ್ಲೂ ಇಳಿಕೆ



ಮೈಸೂರು, ಜ.3(ಎಸ್‌ಪಿಎನ್)– ಪಹಣಿಯಲ್ಲಿ ಬಹು ಮಾಲೀಕತ್ವ, ವಿಭಿನ್ನ ಶುಲ್ಕ ನಿಗದಿಯಂತಹ ತಾಂತ್ರಿಕ ತೊಡಕು ನಿವಾರಿಸಿ, ಭೂ ದಾಖಲೀಕರಣ ಪ್ರಕ್ರಿಯೆ ಸುಸೂತ್ರಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಜತೆಗೆ ಭೂಮಾಲೀಕರ ಅರ್ಜಿ ಶುಲ್ಕದ ಹೊರೆಯನ್ನೂ ಕಡಿತಗೊಳಿಸಿದೆ.

ಜಮೀನು ಮಾಲೀಕರು 11ಇ, ಅಲಿನೇಷನ್ ಪೂರ್ವ ನಕ್ಷೆ, ತತ್ಕಾಲ್ ಪೋಡಿ ಹಾಗೂ ಹದ್ದುಬಸ್ತು ಅರ್ಜಿಗೆ ಶುಲ್ಕ ಪರಿಷ್ಕರಿಸಿದ್ದು, 'ಸ್ವಾವಲಂಬಿ' ಯೋಜನೆಯಡಿ ಸ್ವ–ಇಚ್ಛೆಯಿಂದ ಸ್ಕೆಚ್ ತಯಾರಿಸಲು ಜಾರಿಯಲ್ಲಿದ್ದ ಶುಲ್ಕವನ್ನೇ ಮುಂದುವರೆಸಲಾಗಿದೆ.

ತರಹೇವಾರಿ ಶುಲ್ಕಗಳಿಗೆ ಕಡಿವಾಣ: ಆದರೆ, ಪಹಣಿಯಲ್ಲಿ ಉಲ್ಲೇಖವಿರುವ ವಿಸ್ತೀರ್ಣ ಹೆಚ್ಚಿದ್ದು, ಸಾರ್ವಜನಿಕರ ಹಕ್ಕಿನ ವಿಸ್ತೀರ್ಣ ಕಡಿಮೆ ಇದ್ದರೆ, ಕಂದಾಯ ಇಲಾಖೆ ಸಿಬ್ಬಂದಿ ಪೂರ್ಣ ವಿಸ್ತೀರ್ಣಕ್ಕೆ ಅರ್ಜಿ ಶುಲ್ಕವನ್ನು ಪಾವತಿಸಿಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ಜಮೀನು ಮಾಲೀಕರಿಗೆ ನಿಗದಿತ ಶುಲ್ಕ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿತು.

ಅಲಿನೇಷನ್ ಪೂರ್ವ ನಕ್ಷೆ, 11ಇ ಸ್ಕೆಚ್, ತತ್ಕಾಲ್ ಪೋಡಿ, ಹದ್ದುಬಸ್ತು ಹಾಗೂ 'ಸ್ವಾವಲಂಬಿ' ಯೋಜನೆಯಡಿ ಸ್ವೀಕರಿಸುವ ಅರ್ಜಿಗಳ ಸೇವಾ ಶುಲ್ಕ ತಗ್ಗಿಸಬೇಕು ಎಂದು ರೈತರು ಹಾಗೂ ಸಾರ್ವಜನಿಕರು ಒತ್ತಡ ಹೇರಿದ್ದರು. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ವಾಸ್ತವ ಸ್ಥಿತಿ ಅವಲೋಕಿಸಿ ಸೇವಾ ಶುಲ್ಕವನ್ನು ಪರಿಷ್ಕರಿಸಿ ಆದೇಶ ಹೊರಡಿಸಿದೆ.

ಜ.1ರ ನಂತರದ ಅರ್ಜಿಗಳಿಗೆ ಅನ್ವಯ: ಮೋಜಿಣಿ ವ್ಯವಸ್ಥೆಯಡಿ ಸಲ್ಲಿಕೆಯಾಗುವ ಅರ್ಜಿಗಳ ಶುಲ್ಕದ ಹೊರೆ ಇಳಿಸಿದೆ. ಆದರೆ, ಈಗಾಗಲೇ ಸ್ವೀಕೃತವಾಗಿ ವಿಲೇವಾರಿಗೆ ಬಾಕಿಯಿರುವ ಅರ್ಜಿಗಳಿಗೆ ಇದು ಅನ್ವಯಿಸುವುದಿಲ್ಲ. 2024ರ ಜ.1 ಹಾಗೂ ನಂತರ ಸಲ್ಲಿಸುವ ಅರ್ಜಿಗಳಿಗೆ ಪರಿಷ್ಕೃತ ಸೇವಾ ಶುಲ್ಕ ಅನ್ವಯಿಸುತ್ತದೆ.

11ಇ, ಅಲಿನೇಷನ್ ಪೂರ್ವ ನಕ್ಷೆ, ತತ್ಕಾಲ್ ಪೋಡಿಗೆ ನಗರ ಪ್ರದೇಶದ ಜಮೀನಿಗೆ ಗರಿಷ್ಠ ಮೊತ್ತ 5 ಸಾವಿರ ರೂ.ಗಳಿಂದ 1 ಸಾವಿರ ರೂ., ಗ್ರಾಮೀಣ ಪ್ರದೇಶದ ಜಮೀನಿಗೆ 4 ಸಾವಿರ ರೂ.ಗಳಿಂದ 400 ರೂ.ಗೆ ಇಳಿಸಿದೆ. ಅದೇ ರೀತಿ ಹದ್ದುಬಸ್ತು ಸೇವಾ ಶುಲ್ಕ ನಗರ ಪ್ರದೇಶದ ಜಮೀನಿಗೆ ಗರಿಷ್ಠ 4 ಸಾವಿರ ರೂ.ಗಳಿಂದ 300 ರೂ., ಗ್ರಾಮೀಣ ಪ್ರದೇಶಕ್ಕೆ 3 ಸಾವಿರ ರೂ.ಗಳಿಂದ 300 ರೂ.ಗೆ ಇಳಿಸಿದೆ.

ಪರಿಷ್ಕೃತ ಆದೇಶದ ಪ್ರಕಾರ 11ಇ, ಅಲಿನೇಷನ್ ಪೂರ್ವನಕ್ಷೆ, ತತ್ಕಾಲ್ ಪೋಡಿಗೆ ನಗರ ಪ್ರದೇಶಕ್ಕೆ 2 ಎಕರೆವರೆಗೆ 2,500 ರೂ, 2 ಎಕರೆಗಿಂತ ಹೆಚ್ಚಿದ್ದಲ್ಲಿ ಪ್ರತಿ ಭಾಗಶಃ ಎಕರೆಗೆ ಒಂದು ಸಾವಿರ ರೂ., ಗ್ರಾಮೀಣ ಪ್ರದೇಶದ ಜಮೀನಿಗೆ ಕ್ರಮವಾಗಿ 1,500 ರೂ. ಹಾಗೂ 400 ರೂ. ನಿಗದಿಯಾಗಿದೆ. ಹದ್ದುಬಸ್ತು ಸೇವಾ ಶುಲ್ಕವು ನಗರ ಪ್ರದೇಶದ ಜಮೀನು ಎರಡು ಎಕರೆಗೆ ಎರಡು ಸಾವಿರ ರೂ., ಎರಡು ಎಕರೆಗಿಂತ ಹೆಚ್ಚಿದ್ದಲ್ಲಿ ಪ್ರತಿಭಾಗಶಃ ಎಕರೆಗೆ 400 ರೂ., ಗ್ರಾಮೀಣ ಪ್ರದೇಶಕ್ಕೆ ಕ್ರಮವಾಗಿ 500 ರೂ. ಮತ್ತು 300 ರೂ. ನಿಗದಿ ಪಡಿಸಲಾಗಿದೆ.


ಅಲ್ಲದೆ, ನೋಟಿಸ್ ಶುಲ್ಕವನ್ನು ಗ್ರಾಮೀಣ ಮತ್ತು ನಗರ ಪ್ರದೇಶದ ಪ್ರತಿ ಬಾಜುದಾರರಿಗೆ 25 ರೂ. ಗೊತ್ತುಪಡಿಸಲಾಗಿದೆ. 'ಸ್ವಾವಲಂಬಿ' ಯೋಜನೆಯಡಿ ಸ್ವಇಚ್ಛೆಯಿಂದ ಸ್ಕೆಚ್ ತಯಾರಿಸಲು ಸಲ್ಲಿಸುವ ಪ್ರತಿ ಅರ್ಜಿಗೆ 1 ಸಾವಿರ ಶುಲ್ಕದಲ್ಲಿ ಬದಲಾವಣೆ ಮಾಡಿಲ್ಲ.

ಪೋಡಿ ಮುಕ್ತ ಗ್ರಾಮಕ್ಕೆ ಒತ್ತು: ಕಂದಾಯ ಇಲಾಖೆಯಲ್ಲಿನ ಸುಧಾರಣೆಗೆ ಹೆಚ್ಚಿನ ಆದ್ಯತೆ ನೀಡಿ, ಪೋಡಿಮುಕ್ತ ಗ್ರಾಮ ಅಭಿಯಾನಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡಿದೆ. ಎಲ್ಲ ಸೇವೆಗಳನ್ನು ಸರ್ಕಾರಕ್ಕೆ ಹೊರೆಯಾಗದಂತೆ ಸಾರ್ವಜನಿಕರಿಗೆ ತ್ವರಿತವಾಗಿ ಒದಗಿಸಲು ಅನುವಾಗುವಂತೆ ಕ್ರಮ ಕೈಗೊಂಡಿದೆ.

ಏಕರೂಪ ಶುಲ್ಕ ನಿಗದಿ: ಸರ್ಕಾರಿ ಭೂಮಾಪಕರ ಜತೆಗೆ ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪರವಾನಗಿ ನೀಡುವ ಸೇವೆಗೆ ಜನರು ಪಾವತಿಸುವ ಶುಲ್ಕದಿಂದಲೇ ನಿಗದಿತ ಸೇವಾ ಶುಲ್ಕ ಪಾವತಿಸಲಾಗುತ್ತಿದೆ. ನಾಗರಿಕರು ಅಳತೆ ಕೋರಿ ಸಲ್ಲಿಸುವ ವಿವಿಧ ಅರ್ಜಿಗಳಿಗೆ ಪಹಣಿ ಕಾಲಂ–9ರ ವಿಸ್ತೀರ್ಣಕ್ಕೆ ಶುಲ್ಕ ಪಾವತಿಸಿಕೊಳ್ಳುವ ಬದಲಾಗಿ ಏಕರೂಪ ಶುಲ್ಕ ಪದ್ಧತಿಯನ್ನು ಅನುಸರಿಸಲು ಕ್ರಮವಹಿಸಿದೆ.

ಮೋಜಿಣಿ ತಂತ್ರಾಂಶದಲ್ಲಿ ಪರಿಷ್ಕರಣೆ: ಪಹಣಿಯ ಕಾಲಂ–3ರ ವಿಸ್ತೀರ್ಣಕ್ಕೆ ಅರ್ಜಿ ಶುಲ್ಕವನ್ನು ಲೆಕ್ಕ ಹಾಕಿ ಪಾವತಿಸಿಕೊಳ್ಳಲು ಮೋಜಿಣಿ ತಂತ್ರಾಂಶದಲ್ಲಿ ಮಾರ್ಪಾಡು ಮಾಡಲಾಗಿದೆ ಎಂದು ಕಂದಾಯ ಇಲಾಖೆ(ಭೂ ಮಾಪನ) ಅಧೀನ ಕಾರ್ಯದರ್ಶಿ ಎಸ್.ಗುರುಮೂರ್ತಿ ಆದೇಶಿಸಿದ್ದಾರೆ.

ಗೋಪಾಲಪುರ ಹಾಲು ಉತ್ಪಾದಕರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಪ್ರಾಬಲ್ಯ



ಮೈಸೂರು ತಾಲೂಕು ಗೋಪಾಲಪುರ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಜಯಭೇರಿ ಬಾರಿಸಿ ಡೇರಿ ಆಡಳಿತವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರನ್ನು ಸನ್ಮಾನಿಸಿದರು. ಈ ವೇಳೆ ಶಾಸಕರು ಡೇರಿ ನಿರ್ದೇಶಕರಾದ ಈಶ್ವರ್, ಗೋವಿಂದೇಗೌಡ, ಮಾದೇಗೌಡ, ರವಿರಾಜ್, ಜಿ.ಎಂ.ವಿಶ್ವನಾಥ್, ಭೈರೇಗೌಡ, ಸಣ್ಣಸ್ವಾಮಿ, ಚಂದ್ರಮ್ಮ, ಸುಮತಿ ಅವರನ್ನು ಅಭಿನಂದಿಸಿ, ಶುಭ ಕೋರಿದರು. ಇದೇ ವೇಳೆ ಸದರಿ ಗ್ರಾಪಂ ಸದಸ್ಯರಾದ ಶ್ರೀಮತಿ ರಾಜಮ್ಮ ಭೈರೇಗೌಡ, ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಯಾದರು. ಗೋಪಾಲಪುರ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕ ಭೈರೇಗೌಡ, ಗೋಪಾಲಪುರ ಗ್ರಾಪಂ ಅಧ್ಯಕ್ಷ ಜಿ.ಕೆ.ಬಸವೇಗೌಡ, ಜಿ.ಎಂ. ಜಯರಾಮೇಗೌಡ, ಜಿ.ಆರ್.ಸುರೇಶ್, ವಿಶ್ವಗೌಡ, ಜಿ.ವಿ.ಮಹೇಶ್, ರಾಮೇಗೌಡ, ದೇವರಾಜೇಗೌಡ, ಎಸ್.ಸುಗ್ರೀವ್, ನಾಗೇಶ್, ಮಹದೇವ, ಕಿರಣ್, ದೇವರಾಜು, ಕೃಷ್ಣ, ರಾಮಚಂದ್ರ, ಗವಿಸಿದ್ದೇಗೌಡ ಹಾಗೂ ಗೋಪಾಲಪುರದ ಗ್ರಾಮಸ್ಥರು ಹಾಜರಿದ್ದರು.

ಕರಸೇವಕನ ಬಂಧನ ಸಮರ್ಥನೆ ಖಂಡನೀಯ



ಮೈಸೂರು,ಜ.3–ರಾಮ ಜನ್ಮಭೂಮಿ ಹೋರಾಟದಲ್ಲಿ ಭಾಗಿಯಾಗಿದ್ದ ಕರಸೇವಕ ಶ್ರೀಕಾಂತ್ ಪೂಜಾರಿ ಅವರನ್ನು 31 ವರ್ಷಗಳ ನಂತರ ಪೊಲೀಸರು ಬಂಧಿಸಿರುವುದನ್ನು ರಾಜ್ಯ ಸರ್ಕಾರ ಸಮರ್ಥಿಸಿಕೊಳ್ಳುತ್ತಿರುವುದು ಖಂಡನಾರ್ಹ ಎಂದು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಹೇಳಿದ್ದಾರೆ.

ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ಜ.22ರಂದು ಲೋಕಾರ್ಪಣೆಯಾಗುತ್ತಿದ್ದು, ದೇಶ–ವಿದೇಶದಲ್ಲಿರುವ ಭಾರತೀಯರಲ್ಲಿ ಸಂಭ್ರಮ ಮನೆ ಮಾಡಿದೆ. ಈ ಸಂದರ್ಭದಲ್ಲೇ ಮೂರು ದಶಕಗಳ ಹಿಂದಿನ ಪ್ರಕರಣದಲ್ಲಿ ಕರಸೇವಕನನ್ನು ಬಂಧಿಸಿರುವುದು ಕಾಕತಾಳೀಯ ಎಂದು ನಂಬಲು ಸಾಧ್ಯವೇ ಇಲ್ಲ. 2–3 ತಿಂಗಳಿಂದ ಹಳೆಯ ಪ್ರಕರಣಗಳ ವಿಚಾರಣೆ ತ್ವರಿತಗೊಳಿಸಲಾಗಿದೆ ಎಂದು ಸಬೂಬು ಹೇಳುವ ಮೂಲಕ ಪೊಲೀಸ್ ಅಧಿಕಾರಿಗಳ ಕ್ರಮವನ್ನು ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ಹಾಗಾದರೆ ಇಷ್ಟು ವರ್ಷಗಳವರೆಗೆ ಪ್ರಕರಣದ ತನಿಖೆ ನಡೆಸದಿರುವುದು ಪೊಲೀಸ್ ಇಲಾಖೆ ವೈಫಲ್ಯವಲ್ಲವೇ?. ರಾಮಮಂದಿರ ಉದ್ಘಾಟನೆ ಸಂಭ್ರಮದಲ್ಲಿರುವ ಕರಸೇವಕರಲ್ಲಿ ಭಯ ಹುಟ್ಟಿಸುವುದು, ಜನರಲ್ಲಿ ಗೊಂದಲ ಸೃಷ್ಟಿಸುವುದರ ಜೊತೆಗೆ ಒಂದು ವರ್ಗವನ್ನು ಸಂತಸಪಡಿಸುವ ಉದ್ದೇಶದಿಂದ ಸರ್ಕಾರ, ಹಳೆ ಪ್ರಕರಣವನ್ನು ಬೇಕಂತಲೇ ಕೆದಕಿದೆ. ಪೊಲೀಸರು ಸರ್ಕಾರದ ನಿರ್ದೇಶನದಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಕರಸೇವಕನ ಬಂಧನ ಖಂಡನಾರ್ಹ. ಆದರೆ ಈ ಮೂಲಕ ರಾಮ ಸ್ಮರಣೆ ಮತ್ತಷ್ಟು ಗಟ್ಟಿಯಾಗಿದೆ. ಜೈ ಶ್ರೀರಾಮ್ ಉದ್ಘೋಷ ಮುಗಿಲು ಮುಟ್ಟಿದೆ. ಹೋರಾಟಗಾರರ ಸಂಖ್ಯೆ ನೂರ್ಮಡಿಯಾಗಿದೆ. ಇದಕ್ಕೆ ಕಾರಣರಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರಿಗೆ ಅಭಿನಂದನೆ ತಿಳಿಸುತ್ತೇನೆ. ಶ್ರೀರಾಮ ಅವರಿಗೆ ಅನುಗ್ರಹಿಸಲಿ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

58 ದಿನ ಪೂರೈಸಿದ ಕಾವೇರಿ ಕ್ರಿಯಾ ಸಮಿತಿ ಧರಣಿ



ಮೈಸೂರು,ಜ.3(ಜಿಎ)–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಧರಣಿ ಬುಧವಾರ 58ನೇ ದಿನ ಪೂರೈಸಿದೆ.

ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ರಾಜ್ಯ ಸರ್ಕಾರ ತಮಿಳುನಾಡಿಗೆ ಬಿಡುತ್ತಿರುವ ನೀರನ್ನು ಈ ಕೂಡಲೇ ನಿಲ್ಲಿಸಬೇಕು. ರಾಜ್ಯದ ಮುಖ್ಯಮಂತ್ರಿಗಳು ನೆಲ, ಜಲ, ಭಾಷೆಯನ್ನು ರಕ್ಷಣೆ ಮಾಡಬೇಕು. ಕನ್ನಡ ಹೋರಾಟಗಾರರನ್ನು ಈ ಕೂಡಲೇ ಬಿಡುಗಡೆ ಮಾಡಬೇಕು ಎಂದು ಹೇಳಿ ರಾಜ್ಯ ಸರ್ಕಾರ ವಿರುದ್ಧ ಘೋಷಣೆ ಕೂಗಿದರು.

ಸಿಂಡಿಕೇಟ್ ಮಾಜಿ ಸದಸ್ಯ ವಸಂತ್‌ಕುಮಾರ್ ಮಾತನಾಡಿ, ಕರ್ನಾಟಕ ಸರ್ಕಾರವು ಕಾವೇರಿ ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್‌ನಲ್ಲಿ ವಸ್ತುಸ್ಥಿತಿಯ ಪ್ರಮಾಣ ಪತ್ರ ಸಲ್ಲಿಸುವಲ್ಲಿ ಸೋತಿದ್ದು, ರಾಜ್ಯ ಸರ್ಕಾರವು ಕನ್ನಡಿಗರಿಗೆ ಮಾಡುತ್ತಿರುವ ಅನ್ಯಾಯ ಎಂದು ಖಂಡಿಸಿದರು.

ಪ್ರತಿಭಟನೆಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ಜಿಲ್ಲಾಧ್ಯಕ್ಷ ಲಿಂಗರಾಜು, ಸಮಿತಿ ಪ್ರಧಾನ ಸಂಚಾಲಕ, ಮೂಗೂರು ನಂಜುಂಡಸ್ವಾಮಿ, ಉಪಾಧ್ಯಕ್ಷ ಎಂ.ಜೆ.ಸುರೇಶ್‌ಗೌಡ, ಪಾಲಿಕೆ ಮಾಜಿ ಸದಸ್ಯ ಎಸ್.ಬಿ.ಎಂ.ಮಂಜು, ಮೆಲ್ಲಹಳ್ಳಿ ಮಹಾದೇವಸ್ವಾಮಿ, ಉಮೇಶ್‌ಕುಮಾರ್, ಬಿ.ಶಿವಕುಮಾರ್, ಲೋಕೇಶ್, ಆಟೋ ಪ್ರದೀಪ್, ಪುರುಷೋತ್ತಮ್, ಶ್ರೀರಾಮ ಕಲ್ಯಾಣ ಮಂಟಪ ಧರ್ಮದರ್ಶಿ ಸಮಿತಿ ಕಾರ್ಯದರ್ಶಿ ರವಿಕುಮಾರ್, ಧರ್ಮದರ್ಶಿ ಬಾಲಚಂದ್ರ, ಒಂಟಿಕೊಪ್ಪಲ್ ಮುಖಂಡ ಸುಧಾರಾಂ ಚಂದ್ರ, ಶ್ರೀಕಂಠ, ಶಿವರಾಜ್, ಮಹೇಶ್‌ಗೌಡ, ಕೃಷ್ಣ, ಜಗದೀಶ್, ಅಶೋಕ, ಶಾಂತಪ್ಪ, ಆಟೋ ಮಹದೇವ್, ಶ್ರೀನಿವಾಸ್, ಚಂದ್ರು, ಆಟೋ ಸೋಮ, ಬಾಲಕೃಷ್ಣ ಸಿಂಧುವಳ್ಳಿ ಶಿವಕುಮಾರ್, ವಿಶ್ವನಾಥ್, ವಿಷ್ಣು, ಪುಷ್ಪವತಿ, ಮಂಜುಳಾ, ಕನ್ನಡ ಸೇನೆ ಜಿಲ್ಲಾ ಸಮಿತಿಯ ಕೃಷ್ಣಯ್ಯ, ಹನುಮಂತಯ್ಯ ಕನ್ನಡ ಹೋರಾಟಗಾರರಾದ ಬೋಗಾದಿ ಸಿದ್ದೇಗೌಡ, ಮೈಸೂರು ವಿವಿ ನಿವೃತ್ತ ಅಧೀಕ್ಷಕ ಕೆ.ಬಿ.ಪುಟ್ಟಮಾದು, ಚಲನಚಿತ್ರ ನಿರ್ಮಾಪಕ ಚೇತನ್ ರಮೇಶ್ ಪಾಲ್ಗೊಂಡಿದ್ದರು.

ರಿಯಾಯಿತಿ ಬಸ್‌ಪಾಸ್‌ಗೆ ಅರ್ಜಿ ಆಹ್ವಾನ

ಮೈಸೂರು,ಜ.3–ರಾಜ್ಯ ರಸ್ತೆ ಸಾರಿಗೆ ನಿಗಮದ ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ದಾರರ ಬಸ್ ಪಾಸ್ ಅನ್ನು ಜ.17ರಿಂದ ಕೆ.ಆರ್.ನಗರ, ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ.ಕೋಟೆ, ಮತ್ತು ನಗರ ಸಾರಿಗೆ ಬಸ್ ನಿಲ್ದಾಣದಲ್ಲಿ ನವೀಕರಿಸಲಾಗುತ್ತದೆ. 2023ನೇ ಸಾಲಿನಲ್ಲಿ ವಿತರಿಸುವ ಪಾಸ್‌ಗಳನ್ನು 2024ರ ಫೆ.29 ರವರೆಗೆ ಮಾನ್ಯತೆ ಮಾಡಲಾಗಿದೆ. 2024ನೇ ಸಾಲಿಗೆ ಬಸ್ ಪಾಸ್ ನವೀಕರಣ ಮಾಡಿಸಲು ಇಚ್ಛಿಸುವವರು https://sevasindhuservices.karnataka.gov.in ಅರ್ಜಿ ಸಲ್ಲಿಸಬೇಕು. ನಂತರ ಅದರ ಪ್ರಿಂಟ್‌ನೊಂದಿಗೆ ಮೂಲ ಯುಡಿಐಡಿ ಕಾರ್ಡ್, ಆಧಾರ್ ಕಾರ್ಡ್ ಅನ್ನು ಪರಿಶೀಲನೆಗಾಗಿ, 2023ರ ಬಸ್‌ಪಾಸ್, 1 ಪಾಸ್‌ಪೋರ್ಟ್, 1 ಸ್ಟ್ಯಾಂಪ್ ಸೈಜ್ ಭಾವಚಿತ್ರ, ಯುಡಿಐಡಿ ಕಾರ್ಡ್ (ಮೂಲ &ಜೆರಾಕ್ಸ್), ಅರ್ಜಿ ಸಲ್ಲಿಸಿದ ಪ್ರತಿ, ಸ್ವೀಕೃತಿ ಪ್ರತಿ, ಆಧಾರ್ ಕಾರ್ಡ್ ಮತ್ತು 660 ರೂ. ಪಾವತಿಸಿ, ರಿಯಾಯಿತಿ ಬಸ್ ಪಾಸ್‌ಗಳನ್ನು ನವೀಕರಿಸಿಕೊಳ್ಳಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.1.2024 ಗುರುವಾರ, ಮಳೆ ನಕ್ಷತ್ರ: ಪೂಷಾ 29.12.2023ರಿಂದ 10.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಗೋಪಾಲಸ್ವಾಮಿ ಸ್ವತಂತ್ರ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಉದ್ಘಾಟನೆ: ವಿದುಷಿ ಆರತಿ ಅರುಣ್, ಅಧ್ಯಕ್ಷತೆ: ಮಹಾರಾಜ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಡಾ.ಟಿ. ವಾಸುದೇವ್, ಉಪಸ್ಥಿತರು: ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಮುರಳಿ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಎಂಇಟಿ ಸಹ ಕಾರ್ಯದರ್ಶಿ ಡಾ.ಚೇತನ್, ಡಾ.ಗುರು, ಡಾ.ಕೃಷ್ಣೇಗೌಡ, ಡಾ.ನರೇಶ್‌ಕುಮಾರ್, ಡಾ.ಅನಂತ್ ಕೊಪ್ಪರ್, ಸ್ಥಳ: ಕಲಾಮಂದಿರ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.

■ **ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ:** ಡಾ. ಕ್ಲೌಡಿಯೋ ಗ್ನೋಲಿ ಅವರಿಂದ ಶಾರದಾ ರಂಗನಾಥನ್ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಆನಂದ, ಸ್ಥಳ: ಡಾ.ಎಸ್.ಆರ್.ರಂಗನಾಥನ್ ಹಾಲ್, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ ಗಾಂಧಿ ಭವನ :** ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತೆ ಚನ್ನಮ್ಮ ಹಳ್ಳಿಕೇರಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ, ಪುಷ್ಪಾರ್ಚನೆ : ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಪಿ.ವೆಂಕಟರಾಮಯ್ಯ, ನುಡಿನಮನ : ಗಾಂಧಿ ಭವನ ವಿಶ್ರಾಂತ ನಿರ್ದೇಶಕ ಪ್ರೊ ಎಸ್. ಶಿವರಾಜಪ್ಪ ಉಪಸ್ಥಿತರು : ಗಾಂಧಿ ಮಾರ್ಗಿ ಕೆ.ಟಿ. ವೀರಪ್ಪ, ಗಾಂಧಿ ಭವನ ವಿಶ್ರಾಂತ ನಿರ್ದೇಶಕ ಪ್ರೊ. ಎಂ.ಜಿ. ಬಸವರಾಜ, ಸದ್ವಿದ್ಯಾ ಶಿಕ್ಷಣ ಸಂಸ್ಥೆ ನಿರ್ದೇಶಕ ಗೋಪಿನಾಥ್, ಅಧ್ಯಕ್ಷತೆ: ಗಾಂಧಿ ಭವನ ನಿರ್ದೇಶಕ ಪ್ರೊ. ಎಸ್. ನರೇಂದ್ರಕುಮಾರ್, ಸ್ಥಳ: ಗಾಂಧಿ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್, ಸಹಕಾರ ಇಲಾಖೆ:** ಎರಡು ದಿನಗಳ ರಾಜ್ಯಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಡಾ.ಹೆಚ್.ವಿ.ರಾಜೀವ್, ಮುಖ್ಯ ಅತಿಥಿಗಳು: ಸಹಕಾರ ಸಂಘಗಳ ನಿಬಂಧಕ ಡಾ.ಕೆ.ರಾಜೇಂದ್ರ, ರಾಜ್ಯ ಸಹಕಾರ ಮಹಾಮಂಡಳ ಉಪಾಧ್ಯಕ್ಷ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ, ಎನ್.ಗಂಗಣ್ಣ, ಬಿ.ಸಿ. ಲೋಕಪ್ಪಗೌಡ, ಜಯಕರಶೆಟ್ಟಿ ಬಿ. ಇಂದ್ರಾಳಿ, ಬಾಮಗೌಡ ಡಿ. ಪಾಟೀಲ, ಶ್ರೀಮತಿ ಕೆ.ಸಿ. ನಾಗರತ್ನ, ಕೆ.ಎಸ್. ನವೀನ್, ಲಕ್ಷ್ಮೀಪತಯ್ಯ, ಸ್ಥಳ: ಹೋಟೆಲ್ ಲಿ ರುಚಿ ದಿ ಪ್ರಿನ್ಸ್, ಹುಣಸೂರು ರಸ್ತೆ, ಮಧ್ಯಾಹ್ನ 3 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಸಂಶೋಧನಾ ಸಹಾಯಕ ಡಾ. ಎಸ್. ಗೋಪಾಲ ಅವರಿಂದ ಭಾರತದ ಸಂವಿಧಾನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂರಕ್ಷಣಾ ಸೌಲಭ್ಯಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ನಿಲಯ ಪಾಲಕ ಚಿಕ್ಕೀರಯ್ಯ, ಸ್ಥಳ: ಸರ್ಕಾರಿ ಪದವಿಪೂರ್ವ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯ, ಬೋಗಾದಿ, ಸಂಜೆ 6ಕ್ಕೆ.

■ **ವಾಸವಿ ಕಾನ್ವೆಂಟ್:** ವಾಸವಿ ಯುವೋತ್ಸವ, ಉದ್ಘಾಟನೆ: ಶಾಸಕ ಜಿ.ಡಿ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ರಾಜ್ಯ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿನಾರಾಯಣ ಶೆಣೈ, ಅಧ್ಯಕ್ಷತೆ: ವಾಸವಿ ಕಾನ್ವೆಂಟ್ ಕಾರ್ಯದರ್ಶಿ ಅನಂತರಾಮು, ಗೌರವ ಅತಿಥಿಗಳು: ಜಿಪಂ ಮಾಜಿ ಅಧ್ಯಕ್ಷ ಮಹದೇವ, ಗ್ರಾಪಂ ಮಾಜಿ ಸದಸ್ಯ ರಾಮಣ್ಣ, ಧನಲಕ್ಷ್ಮಿ ಅನಂತರಾಮು, ಸ್ಥಳ: ಕಲಾಮಂದಿರ, ಸಂಜೆ 4.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಕಲ್ಲಾಪುರ ಪವಮಾನಾಚಾರ್ಯರಿಂದ ಭಗವದ್ಗೀತೆ 14ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್:** ಪಂಡಿತ್ ಕೃಷ್ಣರಾವ್ ಪ್ರಕಾಶ್‌ರಿಂದ ಶ್ರೀಮದ್ ಭಾಗವತ–11ನೇ ಸ್ಕಂದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಸಂಜೆ 6.45ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ –ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ: ಮೈಸೂರಿನ ಎನ್.ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ಸತ್ಯನಾರಾಯಣ, 10.00 ಹರಿಣಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ, 4.00 ಹಳ್ಳಿಹಾಡು ಭಾಗವಹಿಸುವವರು ಡಾ.ಮಳವಳ್ಳಿ ಮಹದೇವಸ್ವಾಮಿ, 4.30 ಸಂಧ್ಯಾರಾಗ–ಹಿರಿಯ ಸಾಮಾಜಿಕ ಕಾರ್ಯಕರ್ತೆ ಪಿ. ಶಾಂತಿ ಗಣಪತಿ ಅವರೊಂದಿಗೆ ಮಾತುಕತೆ. ಭಾಗವಹಿಸುವವರು ಜಿ. ಶಾಂತಕುಮಾರ್, 6.50 ಕೃಷಿರಂಗ–ಕೃಷಿಯಲ್ಲಿ ತಂತ್ರಜ್ಞಾನದ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುವವರು ಡಿ.ಎನ್. ಮಂಜುನಾಥ್ ಹಾಗೂ ಸ್ವರ್ಣ ಕಿರಣ್, 8.00 ಯುವವಾಣಿ–ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಎಂ.ಎ. ಕನ್ನಡ ವಿಷಯದಲ್ಲಿ ಪ್ರಥಮ Rank ನೊಂದಿಗೆ 18 ಚಿನ್ನದ ಪದಕ ಗಳಿಸಿದ ಶ್ರೀವಿದ್ಯಾ ಅವರೊಂದಿಗೆ ಮಾತುಕತೆ, 10.00 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ– ಮನೆ ಬೆಳಗಿದ ಮಗಳು, ರಚನೆ–ಡಾ. ಜಾನಕಿ ಸುಂದರೇಷ್, ನಿರ್ದೇಶನ ಹಾಗೂ ನಿರ್ಮಾಣ ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು

ಮೈಸೂರು ಮಿತ್ರ

ಮುಡಾ ಯಡವಟ್ಟಿನಿಂದ ಪರಿತಪಿಸುತ್ತಿರುವ ಆರ್.ಟಿ.ನಗರ 'ಎ' ವಲಯದ ನೂರಾರು ನಿವಾಸಿಗಳು

●ಬೇಕಾಬಿಟ್ಟಿ ಭೂ ಸ್ವಾಧೀನದ ಫಲವಾಗಿ ಖಾಸಗಿ ಆಸ್ತಿ ಮೂಲ ಸೌಕರ್ಯ ಕಲ್ಪಿಸುವ ಕಾರ್ಯಕ್ಕೆ ಅಡ್ಡಿ ●ಬೆಳಕು, ಕುಡಿಯುವ ನೀರಿಗೂ ಹೆಣಗಾಡುವ ಪರಿಸ್ಥಿತಿ ನಿರ್ಮಾಣ





●ಮೋಹನ್ ಕಾಯಕ

ಮೈಸೂರು, ಜ.3– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಯಡವಟ್ಟು... ನಿವಾಸಿಗಳ ಪಾಲಿಗೆ ಬಿಡಿಸಲಾಗದ ಕಗ್ಗಂಟು...!

ಹೌದು! ನಗರದ ಹೊರವರ್ತುಲ ರಸ್ತೆ(ರಿಂಗ್ ರೋಡ್) ಬದಿಯಲ್ಲಿರುವ ಆರ್.ಟಿ.ನಗರ(ರವೀಂದ್ರನಾಥ ಟ್ಯಾಗೋರ್ ನಗರ)ದ 'ಎ' ವಲಯದಲ್ಲಿ ನೆಲೆಸಿರುವ ನಿವಾಸಿಗಳ ಪರಿಸ್ಥಿತಿ, ಮುಡಾ ಮಾಡಿದ ಯಡವಟ್ಟಿನಿಂದ ಅತಂತ್ರವಾಗಿದೆ. ವಿದ್ಯುತ್, ನೀರು, ಒಳಚರಂಡಿ ಸೇರಿದಂತೆ ಯಾವೊಂದು ಮೂಲಸೌಕರ್ಯಗಳು ದೊರಕದೆ ಪರಿತಪಿಸುವಂತಾಗಿದೆ.

ಆರ್.ಟಿ.ನಗರದ 'ಎ'ವಲಯ ಹೊರತುಪಡಿಸಿ, ಉಳಿದೆಲ್ಲಾ(ಬಿ, ಸಿ, ಡಿ ಮತ್ತು ಇ) ವಲಯಗಳಲ್ಲಿಯೂ ರಸ್ತೆ, ಕುಡಿಯುವ ನೀರು, ಒಳಚರಂಡಿ ಅಭಿವೃದ್ಧಿ ಮಾಡಲಾಗಿದೆ. ಆದರೆ, ಭೂ ಸ್ವಾಧೀನಪಡಿಸಿಕೊಳ್ಳುವ ವೇಳೆ ಮುಡಾ ಅಧಿಕಾರಿಗಳ ಬೇಜವಾಬ್ದಾರಿ ನಡೆಯಿಂದ ಸುಮಾರು 150ಕ್ಕೂ ಹೆಚ್ಚು ನಿವೇಶನಗಳಿರುವ 'ಎ' ವಲಯಕ್ಕೆ ಯಾವ ಸೌಲಭ್ಯವೂ ಸಿಗದಂತಾಗಿದೆ.

ವಿದ್ಯುತ್ ಕಂಬಗಳನ್ನು ನೆಟ್ಟಿದ್ದರೂ ತಂತಿಯಲ್ಲಿ ವಿದ್ಯುತ್ ಹರಿದಿಲ್ಲ, ಪೈಪ್ ಲೈನ್ ಮಾಡಿದ್ದರೂ ಕುಡಿಯುವ ನೀರಿನ ಪೂರೈಕೆಯಾಗಿಲ್ಲ. ಯುಜಿಡಿ ಪೈಪ್‌ಲೈನ್ ನಿರ್ಮಿಸಿದ್ದರೂ ಬಳಕೆ ಮಾಡಲು ಸಾಧ್ಯವಾಗದಂತಹ ವಿಚಿತ್ರ ಪರಿಸ್ಥಿತಿ ಎದುರಾಗಿದೆ. ಮುಡಾ ಅಧಿಕಾರಿಗಳ ಅಸಡ್ಡೆಗೆ ಲಕ್ಷಾಂತರ ಹಣ ಖರ್ಚು ಮಾಡಿ ನಿವೇಶನ ಖರೀದಿಸಿ, ಮನೆ ಕಟ್ಟಿಕೊಂಡವರ ಸ್ಥಿತಿ ಹೇಳತೀರದಾಗಿದೆ.

ಆರ್.ಟಿ.ನಗರ ಬಡಾವಣೆಗೆ ಭೂ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಸರ್ವೆ ನಂ.115ರ 3 ಎಕರೆ ಪ್ರದೇಶವನ್ನು ವ್ಯವಸ್ಥಿತವಾಗಿ ಸ್ವಾಧೀನಪಡಿಸಿಕೊಳ್ಳುವಲ್ಲಿ ಎಡವಿದ ಮುಡಾ ಅಧಿಕಾರಿಗಳು, ಕೋರ್ಟ್‌ನಲ್ಲೂ ಹಿನ್ನಡೆ ಅನುಭವಿಸಿರುವುದಲ್ಲದೆ ನಿವಾಸಿಗಳ ಸಂಕಷ್ಟಕ್ಕೂ ಕಾರಣರಾಗಿದ್ದಾರೆ. 3 ಎಕರೆ ಪ್ರದೇಶದ ಮಾಲೀಕರಾದ(ಮೈಸೂರು 4ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದ ತೀರ್ಪಿನಂತೆ) ಚಿಕ್ಕವನು ಎಂಬುವರೊಡನೆ ಸರಿಯಾಗಿ ವ್ಯವಹಾರ ನಡೆಸದೆ ನಿವಾಸಿಗಳ ಜೀವನಕ್ಕೆ ಕಂಟಕವಾಗಿದ್ದಾರೆ.



> "ಆರ್.ಟಿ.ನಗರದ 'ಎ' ಬಡಾವಣೆಗೆ ಮಧ್ಯದಲ್ಲಿರುವ ಖಾಸಗಿ ಜಮೀನಿನಿಂದಾಗಿ ಯಾವ ಸೌಲಭ್ಯವೂ ದೊರಕದಂತಾಗಿದೆ. ಈ ಸಂಬಂಧ ಸಂಸದರಾದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡರು ಹಾಗೂ ಮುಡಾ ಅಧೀಕ್ಷಕ ಅಭಿಯಂತರರಿಗೂ ಮನವಿ ಮಾಡಿದ್ದೇವೆ. ವರ್ಷದಿಂದಲೂ ಸ್ಥಳ ಪರಿಶೀಲನೆ ಮಾಡಿ ಕ್ರಮಕೈಗೊಳ್ಳುತ್ತೇವೆ ಎನ್ನುತ್ತಿದ್ದಾರೆಯೇ ಹೊರತು ಯಾವ ಕ್ರಮವೂ ಆಗಿಲ್ಲ. ಹಾಗೆಯೇ ಬಡಾವಣೆಯಲ್ಲಿ ಕಸ ತ್ಯಾಜ್ಯ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ರಸ್ತೆಯುದ್ದಕ್ಕೂ ರಾಶಿ ರಾಶಿ ಕಸ ಬಿದ್ದಿದೆ.
>
> **– ಎನ್.ರಾಜೇಶ್, ಅಧ್ಯಕ್ಷರು, ರವೀಂದ್ರನಾಥ ಟ್ಯಾಗೋರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ**

ಬಡಾವಣೆಯ 'ಎ' ವಲಯಕ್ಕೆ ರಸ್ತೆ ಮಾರ್ಗವಾಗಿ ಹೋಗಬೇಕಾದರೆ, ವಿದ್ಯುತ್ ಕಂಬ ನೆಟ್ಟು ಕರೆಂಟ್ ಹರಿಸಬೇಕಾದರೆ ಹಾಗೂ ಕುಡಿಯುವ ನೀರಿನ ಪೂರೈಕೆಗೂ ಚಿಕ್ಕವನು ಎಂಬುವರ ಜಮೀನಿನ ಮೇಲೆಯೇ ಹಾದು ಹೋಗಬೇಕು. 'ಎ' ವಲಯಕ್ಕೆ ಇಷ್ಟೆಲ್ಲಾ ಮೂಲಸೌಕರ್ಯ ನೀಡಬೇಕಾದರೆ ಚಿಕ್ಕವನು ಎಂಬುವರು ತಮ್ಮ ಜಮೀನನ್ನು ಮುಡಾಗೆ ಕೊಡಬೇಕು. ಇಲ್ಲವೇ ಈಗಾಗಲೇ ಮೈಸೂರು 4ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಹಿನ್ನಡೆ ಅನುಭವಿಸಿ, ಹೈಕೋರ್ಟ್ ಮೆಟ್ಟಿಲೇರಿರುವ ಮುಡಾ, ಕೇಸ್ ಗೆಲ್ಲಲೇಬೇಕು. ಅಲ್ಲಿಯವರೆಗೂ ಮುಡಾ ನಂಬಿ ಮನೆಕಟ್ಟಿಕೊಂಡಿರುವ ಹಾಗೂ ಮನೆ ಕಟ್ಟುತ್ತಿರುವ ನಿವಾಸಿಗಳ ಪರಿಸ್ಥಿತಿ ದಿಕ್ಕಿಲ್ಲದಂತಾಗಿದೆ.

ಯಾವ ಸಂಪರ್ಕವಿಲ್ಲ: ಆರ್.ಟಿ.ನಗರ ಬಡಾವಣೆಯ 'ಎ' ವಲಯಕ್ಕೆ ವಿದ್ಯುತ್, ನೀರು, ಒಳಚರಂಡಿ ಸೌಲಭ್ಯ ಕೊಡಬೇಕಾದರೆ ಖಾಸಗಿ ಜಮೀನಿನ(ಚಿಕ್ಕವನು ಎಂಬುವರ ಜಮೀನು) ಮೇಲೆಯೇ ಸಂಪರ್ಕ ಕಲ್ಪಿಸಿಕೊಡಬೇಕು. ಇಲ್ಲವಾದರೆ ಬೇರೆ ಮಾರ್ಗದಲ್ಲಿ ಸಂಪರ್ಕ ನೀಡಬೇಕು.

ಕರೆದು, ನೀವ್ಯಾರೆಂದರೂ...!

> "ಆರ್.ಟಿ.ನಗರ ಬಡಾವಣೆಗೆ ಭೂ ಸ್ವಾಧೀನಪಡಿಸಿಕೊಳ್ಳುವಾಗ ಮುಡಾ ಅಧಿಕಾರಿಗಳು, ಜಮೀನಿನ ದಾಖಲೆಗಳನ್ನು ತೆಗೆದುಕೊಂಡು ಬನ್ನಿ ಎಂದು ಕರೆದಿದ್ದರು. ಅದರಂತೆ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಹೋದರೆ ನೀವ್ಯಾರೆಂದರು. ಅಲ್ಲದೆ ನಮ್ಮ ಜಮೀನನ್ನು ಕೂಡ ಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸಿಯೇ ಬಿಟ್ಟರು. ಮುಡಾ ವಿರುದ್ಧ ಕೇಸ್ ದಾಖಲಿಸಿ ಮತ್ತೆ ನಮ್ಮ ಜಮೀನು ವಾಪಸ್ ಪಡೆದಿದ್ದೇವೆ. ಈ ವರ್ಷ ರಾಗಿ, ಹುರುಳಿಯನ್ನು ಬೆಳೆದಿದ್ದೇನೆ.
>
> **– ಚಿಕ್ಕವನು, ಖಾಸಗಿ ಜಮೀನಿನ ಮಾಲೀಕ**

ಇದ್ಯಾವುದನ್ನು ಮುಡಾ ಅಧಿಕಾರಿಗಳು ಮಾಡದೆ, ಸುಮ್ಮನಾಗಿದ್ದಾರೆ. ನಾಲ್ಕೈದು ಬಾರಿ ಮನವಿ ಮಾಡಿದ್ದರೂ ಅದಕ್ಕೆ ಮುಡಾ ಅಧಿಕಾರಿಗಳಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಇಲ್ಲ ಎಂದು ಬಡಾವಣೆ 'ಎ' ವಲಯದ ನಿವಾಸಿಗಳಾದ ಆರ್.ಕೆ.ನಂಜುಂಡಸ್ವಾಮಿ, ಕೆ.ಯು.ತಿಮ್ಮಯ್ಯ, ಕೆ.ಎಸ್.ಗಿರೀಶ್, ಡಾ.ಕೆ.ಸತೀಶ್, ಎಸ್.ಜೆ.ಲಕ್ಷ್ಮಣ್ ಹಾಗೂ ಆದಿನಾರಾಯಣ್ 'ಮೈಸೂರು ಮಿತ್ರ'ನಲ್ಲಿ ದೂರಿದರು.

ಬಡಾವಣೆಗಾಗಿ ಭೂ ಸ್ವಾಧೀನಪಡಿಸಿಕೊಳ್ಳುವಾಗಲೇ ಮುಡಾ ಅಧಿಕಾರಿಗಳು ಎಡವಿದ್ದಾರೆ. ಬಡಾವಣೆ ಮಧ್ಯದಲ್ಲಿ ಬರುವ 3 ಎಕರೆ ಖಾಸಗಿ ಜಮೀನಿನ ದಾಖಲೆಗಳನ್ನು ಹಾಗೂ ಸಂಬಂಧಪಟ್ಟ ಮಾಲೀಕರನ್ನು ಸಂಪರ್ಕಿಸದೆಯೇ ಭೂ ಸ್ವಾಧೀನಪಡಿಸಿಕೊಂಡಿರುವುದರಿಂದ ನಮಗೆ ಈ ದುಸ್ಥಿತಿ ಬಂದಿದೆ. ಮುಡಾ ಅಧಿಕಾರಿಗಳ ತಪ್ಪಿನಿಂದ ಲಕ್ಷಾಂತರ ಹಣ ಖರ್ಚು ಮಾಡಿ ಮನೆ ಕಟ್ಟಿಕೊಂಡಿದ್ದರೂ ನಿತ್ಯ ಕತ್ತಲೆಯಲ್ಲೇ ಜೀವನ ಸಾಗಿಸುವಂತಾಗಿದೆ, ಕುಡಿಯುವ ನೀರಿಗೂ ಪರಿತಪಿಸುವಂತಾಗಿದೆ ಎಂದು ಕಿಡಿಕಾರಿದರು.

ಕಗ್ಗತ್ತಲು: 15 ಅಡ್ಡ ರಸ್ತೆಗಳು, 150ಕ್ಕೂ ಹೆಚ್ಚು ನಿವೇಶನಗಳನ್ನು ಒಳಗೊಂಡಿರುವ ಬಡಾವಣೆಯ 'ಎ' ವಲಯದಲ್ಲಿ ರಾತ್ರಿ ವೇಳೆ ಕಗ್ಗತ್ತಲು ಆವರಿಸಲಿದೆ. ವಿದ್ಯುತ್ ಕಂಬಗಳಿದ್ದರೂ ಒಂದೇ ಒಂದು ಬೀದಿದೀಪವೂ ಬೆಳಗುವುದಿಲ್ಲ. ಅಲ್ಲದೆ ರಸ್ತೆ ಬದಿಯಲ್ಲಿ ಆಳೆತ್ತರ ಬೆಳೆದು ನಿಂತಿರುವ ಗಿಡ–ಗಂಟಿಗಳು ಮತ್ತಷ್ಟು ಭಯ ಹುಟ್ಟಿಸುತ್ತಿವೆ. ಹಾವುಗಳ ಕಾಟ ವಿಪರೀತವಾಗಿದೆ. ರಸ್ತೆಯ ಇಕ್ಕೆಲಗಳಲ್ಲಿ ಆವರಿಸಿರುವ ಮುಳ್ಳಿನ ಬಳ್ಳಿಗಳಿಂದಾಗಿ ಸಂಚಾರಕ್ಕೂ ತೊಂದರೆಯಾಗುತ್ತಿದೆ ಎಂದು ಅಳಲು ತೋಡಿಕೊಂಡರು.




'ಸಿಲ್ಕ್ ಇಂಡಿಯಾ–2024' ರೇಷ್ಮೆ ಸೀರೆಗಳ ಪ್ರದರ್ಶನ, ಮಾರಾಟ




ಮೈಸೂರು,ಜ.3(ಎಂಕೆ)–ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಹಮ್ಮಿಕೊಂಡಿರುವ 6 ದಿನಗಳ 'ಸಿಲ್ಕ್ ಇಂಡಿಯಾ–2024' ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಭಾರತೀಯ ಫ್ಯಾಷನ್ ಉದ್ಯಮಿ ಮತ್ತು ವಿನ್ಯಾಸಕಿ ಜಯಂತಿ ಬಲ್ಲಾಳ್, ದೀಪ ಬೆಳಗಿಸುವ ಮೂಲಕ ಭಾರತದ ಎಲ್ಲಾ ರಾಜ್ಯಗಳ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿದರು. ಸಂಕ್ರಾಂತಿ ಹಬ್ಬದ ಅಂಗವಾಗಿ ಆಯೋಜಿಸಿರುವ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳ 45ಕ್ಕೂ ಹೆಚ್ಚಿನ ಮಳಿಗೆಗಳಿವೆ. ಮೇಳಕ್ಕೆ ಉಚಿತ ಪ್ರವೇಶವಿದ್ದು, ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಆರ್ನಿ ರೇಷ್ಮೆ ಸೀರೆಗಳು, ಧರ್ಮಾವರಂ, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕಲ್ಕೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡ್ ಸೀರೆ ಮತ್ತು ಡ್ರೆಸ್, ಬಲ್ಲೂರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೇಟಿರಿಯಲ್ಸ್‌ಗಳು ಲಭ್ಯವಿವೆ.

ಜ.6ರಂದು ವಿಶೇಷ 'ಸ್ವಾತಿ' ಪೂಜೆ





ಮೈಸೂರು, ಜ.3– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಜ.6ರಂದು 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಕ್ಕೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ (ಧನುರ್ಮಾಸದ ಪ್ರಯುಕ್ತ ಸಂಜೆ ಪ್ರಾಕಾರೋತ್ಸವ ಇರುವುದಿಲ್ಲ) ಎಂದು ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ. ಮಾಹಿತಿ ಮೊ.93421 88323, 7598832271 ಸಂಪರ್ಕಿಸಬಹುದು.

ಎಂಸಿಡಿಸಿಸಿ ಬ್ಯಾಂಕ್‌ಗೆ ಆಡಳಿತಾಧಿಕಾರಿ ನೇಮಕ

ಮೈಸೂರು, ಜ.3(ಆರ್‌ಕೆ)–ಆಡಳಿತ ಮಂಡಳಿ ಅವಧಿ ಮುಕ್ತಾಯಗೊಂಡು ಶೂನ್ಯ ಪರಿಸ್ಥಿತಿ ಉಂಟಾಗಿರುವುದರಿಂದ ಹಾಗೂ ಉಚ್ಛ ನ್ಯಾಯಾಲಯದ ಆದೇಶದನ್ವಯ ಪ್ರತಿಷ್ಠಿತ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗೆ ಆಡಳಿತಾಧಿಕಾರಿ ನೇಮಕ ಮಾಡಲಾಗಿದೆ.

ಬೆಂಗಳೂರಿನ ಸಹಕಾರ ಸಂಘಗಳ ಅಪರ ನಿಬಂಧಕರಾದ ಕೆ.ಎಂ.ಆಶಾ ಅವರನ್ನು ಬ್ಯಾಂಕಿನ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ, ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕ ಸಿ.ಪ್ರಸಾದ್ ರೆಡ್ಡಿ ಬುಧವಾರ ಆದೇಶ ಹೊರಡಿಸಿದ್ದು, ಅವರು ಇಂದು ಮಧ್ಯಾಹ್ನ ಅಧಿಕಾರ ವಹಿಸಿಕೊಂಡರು.

ಅದೇ ರೀತಿ ಮೈಸೂರು ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರಾದ ಆರ್.ಮಂಜುನಾಥ್ ಅವರನ್ನು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಅಧಿಕ ಪ್ರಭಾರದಲ್ಲಿರಿಸಿ ಸಹಕಾರ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಮಂಜುನಾಥ್ ಅವರು ಅಧಿಸೂಚನೆ ಹೊರಡಿಸಿದ್ದಾರೆ.

ಆಡಳಿತಾಧಿಕಾರಿಯು ಬ್ಯಾಂಕಿನ ಆಡಳಿತ ಮಂಡಳಿಯ ಪ್ರಭಾರ ವಹಿಸಿಕೊಂಡು ನಿಗದಿತ ಅವಧಿಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ ಆಯ್ಕೆಯಾದ ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಲು ಕೆ.ಎಂ.ಆಶಾ ಅವರಿಗೆ ನಿರ್ದೇಶನ ನೀಡಲಾಗಿದೆ.

ದೇಗುಲದ ಗರ್ಭಗುಡಿ ಪ್ರವೇಶಕ್ಕೆ ನಿರಾಕರಿಸಿದ ಸಿದ್ದರಾಮಯ್ಯ

'ಅಸಲಿ ಮುಖ ಇದು': ಬಿಜೆಪಿ ವಾಗ್ದಾಳಿ

ಬೆಂಗಳೂರು: ಹಲವು ಬಾರಿ ಮನವಿ ಮಾಡಿದರೂ ದೇವಸ್ಥಾನದ ಗರ್ಭಗುಡಿ ಪ್ರವೇಶಿಸಲು ನಿರಾಕರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಕರ್ನಾಟಕ ಬಿಜೆಪಿ, ಅವರ ವಿರುದ್ಧ ಕಿಡಿಕಾರಿದೆ.

ಅಲ್ಪಸಂಖ್ಯಾತರಿಗೆ 10 ಸಾವಿರ ಕೋಟಿ ರೂ. ನೀಡಿ, ರಾಮಮಂದಿರಕ್ಕೆ ಒಂದು ರೂ.ಗಳನ್ನು ಸಹ ದೇಣಿಗೆ ನೀಡದ ಚುನಾವಣಾ ಹಿಂದೂ ಸಿಎಂ ಸಿದ್ದರಾಮಯ್ಯರವರ ಅಸಲಿ ಮುಖ ಇದು.

ವಿಜಯಪುರದ ದ್ಯಾಬೇರಿ ಗ್ರಾಮದ ವಾಗ್ದೇವಿ ದೇವಿಯ ದರ್ಶನವನ್ನು ಕಾಟಾಚಾರಕ್ಕೆ ಮಾಡಿದ ಹಿಂದೂ ವಿರೋಧಿ ಸಿದ್ದರಾಮಯ್ಯರವರು ಪ್ರಭು ಶ್ರೀರಾಮರ ಅಪರಾವತಾರವಂತೆ ಎಂದು ಬಿಜೆಪಿ ಟೀಕಿಸಿದೆ. ಮುಂದುವರಿದು, ಸಿಎಂ ಸಿದ್ದರಾಮಯ್ಯನವರೇ, ಮಸೀದಿ, ದರ್ಗಾಗಳಿಗೆ ಹೋಗಿ ಅವರು ನೀಡಿದ್ದೆಲ್ಲವನ್ನೂ ಮೈ ಮೇಲೆ ಹಾಕಿಕೊಂಡು ಪೋಸು ಕೊಡುವ ನಿಮಗೆ, ದೇವಿಯ ಬಳಿ ನಾಡಿನ ಒಳಿತಿಗಾಗಿ ಭಕ್ತಿಯಿಂದ ಕೈ ಮುಗಿಯುವಷ್ಟು ಸಮಯವಿಲ್ಲ. ಹಿಂದೂ ಧರ್ಮ, ಹಿಂದೂ ದೈವ ಹಾಗೂ ಹಿಂದೂಗಳನ್ನು ಕಂಡರೆ ಈ ಪರಿ ಅಸಡ್ಡೆ ಏಕೆ..? ಎಂದು ಬಿಜೆಪಿ ಪ್ರಶ್ನಿಸಿದೆ.

ಬಿಜೆಪಿ ಸಿಎಂ ಸಿದ್ದರಾಮಯ್ಯ ವಿರುದ್ಧ ತೀವ್ರ ಹರಿಹಾಯ್ದಿದ್ದು, ಅವರ ಹಿಂದೂ ವಿರೋಧಿ ನಿಲುವನ್ನು ಎತ್ತಿ ಹಿಡಿಯುವ ಮೂಲಕ ಅವರ ವಿರುದ್ಧ ಸರಣಿ ಪೋಸ್ಟ್‌ಗಳನ್ನು ಹಾಕುತ್ತಿದೆ.

39 ಸೆಕೆಂಡುಗಳ ಈ ವಿಡಿಯೋದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇವಾಲಯದ ಪ್ರವೇಶದ್ವಾರದ ಬಳಿ ನಿಂತಿರುವುದನ್ನು ಕಾಣಬಹುದು.



ಅಲ್ಲಿಂದ ಅವರನ್ನು ಗರ್ಭಗುಡಿಗೆ ಬರುವಂತೆ ಮನವಿ ಮಾಡಿದರೂ, ಅವರು ಪ್ರವೇಶಿಸಲು ನಿರಾಕರಿಸುತ್ತಾರೆ. ಅವರ ಬದಲಿಗೆ ಅವರು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂಬಿ ಪಾಟೀಲ ಅವರನ್ನು ದೇವಸ್ಥಾನದ ಒಳಗೆ ಕಳುಹಿಸುತ್ತಾರೆ. ಒಳಗೆ ಬಂದ ಪಾಟೀಲರು ಸಹ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರೂ, ಅವರು ಒಳಗೆ ಬರಲು ನಿರಾಕರಿಸುತ್ತಾರೆ.

ಮತ್ತೊಂದು ಟ್ವೀಟ್ ಮಾಡಿರುವ ಬಿಜೆಪಿ, ಭೇದ ಮರೆತು ಭಾರತೀಯರೆಲ್ಲರೂ ಒಟ್ಟಾಗಿ ರಾಮಮಂದಿರ ನಿರ್ಮಾಣವನ್ನು ಸಂಭ್ರಮಿಸುತ್ತಿರುವುದು ಕಾಂಗ್ರೆಸ್ ಸರ್ಕಾರಕ್ಕೆ ಸಹಿಸಲಾಗುತ್ತಿಲ್ಲ. ಸದಾ ಕೋಮುದ್ವೇಷ ಹಬ್ಬಿಸಿ ಅದರಿಂದ ಲಾಭ ಮಾಡಿಕೊಳ್ಳುತ್ತಿದ್ದ ಕಾಂಗ್ರೆಸ್ ಈಗ ಹಸಿದಿದೆ. ತನ್ನ ಹಸಿವು ನೀಗಿಸಲು ಸಮಾಜದ ಶಾಂತಿಯನ್ನೇ ಭಕ್ಷಿಸಲು ತಯಾರಾಗಿದೆ ಎಂದು ದೂರಿದೆ.

ಪ್ರಾಂಶುಪಾಲರ ವಿರುದ್ಧ ಕಿರುಕುಳ ಆರೋಪ

ಯುವರಾಜ ಕಾಲೇಜು ನೌಕರ ಆತ್ಮಹತ್ಯೆ ಯತ್ನ

ಮೈಸೂರು,ಜ.3(ಪಿಎಂ)–ಪ್ರಾಂಶುಪಾಲರ ವಿರುದ್ಧ ಕಿರುಕುಳ ಆರೋಪ ಮಾಡಿ ಮೈಸೂರು ವಿವಿ ಅಧೀನದ ಯುವರಾಜ ಕಾಲೇಜಿನ ನೌಕರರೊಬ್ಬರು ಆತ್ಮಹತ್ಯೆಗೆ ಯತ್ನಿಸಿ, ಆಸ್ಪತ್ರೆಗೆ ದಾಖಲಾಗಿದ್ದಾರೆ.


ಕಾಲೇಜಿನಲ್ಲಿ ನಗದು ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿರುವ ಜೆ.ಶಿವಕುಮಾರ್ (38) ಆತ್ಮಹತ್ಯೆಗೆ ಯತ್ನಿಸಿದವರು. ಬುಧವಾರ ಕಾಲೇಜು ಆವರಣದಲ್ಲಿ ನಿದ್ರೆ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಬಳಿಕ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಗರದ ಟಿಕೆ ಬಡಾವಣೆ ನಿವಾಸಿಯಾದ ಶಿವಕುಮಾರ್, ಕಾಲೇಜು ಪ್ರಾಂಶುಪಾಲ ಡಾ.ಹೆಚ್.ಸಿ.ದೇವರಾಜೇಗೌಡ ಅವರೇ ನನ್ನ ಆತ್ಮಹತ್ಯೆಗೆ ಕಾರಣ ಎಂದು ತಾವು ಬರೆದಿರುವ ಡೆತ್‌ನೋಟ್‌ನಲ್ಲಿ ಆರೋಪಿಸಿದ್ದಾರೆ. ಈ ಹಿಂದಿದ್ದ ಮಹಿಳಾ ಪ್ರಾಂಶುಪಾಲರ ಅವಧಿಯ ದಾಖಲಾತಿಗಳನ್ನು ಖಾಸಗಿ ಆಡಿಟರ್ ಬಳಿ ಪರಿಶೀಲಿಸಬೇಕೆಂದು ಪ್ರಾಂಶುಪಾಲ ದೇವರಾಜೇಗೌಡರು ನನ್ನಿಂದ ಪಡೆದಿದ್ದರು. ಎಲ್ಲಾ ದಾಖಲೆಗಳನ್ನು ತಮ್ಮ ಬಳಿಯೇ ಇಟ್ಟುಕೊಂಡು ನನಗೆ ನೋಟಿಸ್ ಕೊಟ್ಟರೆ ಎಷ್ಟು ಸರಿ ಎಂದು ಬೇಸರ ವ್ಯಕ್ತಪಡಿಸಿದ್ದೆ ಎಂಬುದು ಸೇರಿದಂತೆ ಅನೇಕ ಆರೋಪಗಳನ್ನು ಶಿವಕುಮಾರ್ ತಮ್ಮ ಡೆತ್‌ನೋಟ್‌ನಲ್ಲಿ ಮಾಡಿದ್ದಾರೆ.

ಪ್ರಾಂಶುಪಾಲರ ವಿರುದ್ಧ ಕ್ರಮಕ್ಕೆ ಒತ್ತಾಯ: ಯುವರಾಜ ಕಾಲೇಜು ಪ್ರಾಂಶುಪಾಲ ಡಾ.ಹೆಚ್.ಸಿ.ದೇವ ರಾಜೇಗೌಡ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಮೈಸೂರು ವಿವಿ ಆಡಳಿತ ಸಿಬ್ಬಂದಿ ವರ್ಗದವರ ಸಂಘದ ವತಿಯಿಂದ ಬುಧವಾರ ವಿವಿ ಕುಲಪತಿ ಪ್ರೊ.ಎನ್.ಕೆ.ಡಾ.ಲೋಕನಾಥ್ ಅವರಿಗೆ ಮನವಿ ಸಲ್ಲಿಸಲಾಯಿತು.

ಸಂಘದ ನೇತೃತ್ವದಲ್ಲಿ ಕ್ರಾಫರ್ಡ್ ಭವನದಲ್ಲಿರುವ ಕುಲಪತಿಗಳ ಕಚೇರಿ ಎದುರು ಸಮಾವೇಶಗೊಂಡು ನೌಕರರು, ಕುಲಪತಿಗಳಿಗೆ ಮನವಿ ಸಲ್ಲಿಸಿದರು. ಪ್ರಾಂಶುಪಾಲ ದೇವರಾಜೇಗೌಡ ಅವರು ನೌಕರರನ್ನು ಕೇವಲವಾಗಿ ಮಾತನಾಡಿಸುತ್ತಾರೆ ಎಂದು ನೌಕರರು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಲಪತಿಗಳು, ಪ್ರಾಂಶುಪಾಲರ ವರ್ತನೆ ಬಗ್ಗೆ ಈವರೆಗೆ ಯಾವುದೇ ದೂರು ಬಂದಿರಲಿಲ್ಲ. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು. ಬಳಿಕ ನೌಕರರು ಸ್ಥಳದಿಂದ ನಿರ್ಗಮಿಸಿದರು. ಪ್ರಾಂಶುಪಾಲ ದೇವರಾಜೇಗೌಡರಿಂದ ಹಲವು ತಿಂಗಳಿಂದ ಶಿವಕುಮಾರ್ ಕಿರುಕುಳ ಅನುಭವಿಸುತ್ತಿದ್ದಾರೆ. ಇತ್ತೀಚೆಗೆ ಕಿರುಕುಳ ಹೆಚ್ಚಾಗಿ ಇಂದು ಆತ್ಮಹತ್ಯೆಗೆ ಪ್ರಯತ್ನಿಸಿ ಆಸ್ಪತ್ರೆ ಸೇರಿದ್ದಾರೆ. ಈ ಕೂಡಲೇ ಡಾ.ದೇವರಾಜೇಗೌಡ ವಿರುದ್ಧ ಕ್ರಮ ಜರುಗಿಸಿ, ಅಮಾನತುಗೊಳಿಸಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ. ಸಂಘದ ಕಾರ್ಯದರ್ಶಿ ಡಿ.ಶಿವಣ್ಣ ಸಹ ಕಾರ್ಯದರ್ಶಿ ಕೆ.ಮಂಜುಳಾ, ಕಾರ್ಯಕಾರಿ ಸಮಿತಿ ಸದಸ್ಯರಾದ ಚಿಕ್ಕಜ್ಯೋತಿ, ಕೆ.ಟಿ.ಮನು, ಎಂ.ಎಸ್.ಹರೀಶ್‌ಬಾಬು, ಎಂ.ಯಾದವ್, ಎಂ.ಆರ್.ವಿವೇಕ್ ಮತ್ತಿತರರಿದ್ದರು.



ಮೈಸೂರು ವಿವಿಯ ಕ್ರಾಫರ್ಡ್ ಭವನದಲ್ಲಿ ಬುಧವಾರ ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘದ ವತಿಯಿಂದ ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರಿಗೆ ಮನವಿ ಸಲ್ಲಿಸಲಾಯಿತು.

ನನ್ನ ವಿರುದ್ಧದ ಆರೋಪಗಳು ಸತ್ಯಕ್ಕೆ ದೂರ

> "ಕಾಲೇಜಿನಲ್ಲಿ ಆಡಿಟ್ ನಡೆಯುತ್ತಿದೆ. ಈ ಹಿಂದಿನ ವರ್ಷದ ಚಲನ್, ರಶೀದಿ ಸೇರಿದಂತೆ ದಾಖಲಾತಿಗಳನ್ನು ಇವರು ಕ್ಯಾಷಿಯರ್ ಆದ ಹಿನ್ನೆಲೆಯಲ್ಲಿ ಆಡಿಟ್‌ಗೆ ಸಲ್ಲಿಸುವಂತೆ ಸೂಚನೆ ನೀಡಿದ್ದೆ. ಆದರೆ ಇವರು ಯಾವುದನ್ನೂ ಸಲ್ಲಿಸದೇ ರಜೆ ಹಾಕಿಕೊಂಡಿದ್ದರು. ಆ ಕಾರಣದಿಂದ ಅವರಿಗೆ ಎರಡು ಮೆಮೊ ಕೊಟ್ಟಿದ್ದೆ. ಮೆಮೊ ಕೊಟ್ಟ ಮಾರನೇ ದಿನ ಈ ಘಟನೆ ನಡೆದಿದೆ. ನಾನು ಶಿವಕುಮಾರ್ ಅವರಿಂದ ದಾಖಲೆಗಳನ್ನು ಪಡೆದುಕೊಂಡಿದ್ದೇನೆ ಎಂದು ಆರೋಪಿಸಿರುವುದು ಸತ್ಯಕ್ಕೆ ದೂರವಾದದು. ನನಗೆ ಅವರು ದಾಖಲೆಗಳನ್ನು ನೀಡಿದ್ದರೆ ಆ ಸಂಬಂಧ ಅವರು ಸಹಿ ಪಡೆಯಬಹುದಿತ್ತಲ್ಲವೇ? ಅವರ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿದ್ದು, ಬೇಕಿದ್ದರೆ ತನಿಖೆ ನಡೆಯಲಿ.
>
> **–ಡಾ.ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು.**

ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 602 ಕೊರೊನಾ ಕೇಸ್

ಸಕ್ರಿಯ ಪ್ರಕರಣಗಳ ಸಂಖ್ಯೆ 4,440

ನವದೆಹಲಿ: ಭಾರತದಲ್ಲಿ ಕಳೆದ 24 ಗಂಟೆಗಳಲ್ಲಿ 602 ಹೊಸ ಕೋವಿಡ್–19 ಪ್ರಕರಣಗಳು ಮತ್ತು 5 ಸಾವು ದಾಖಲಾಗಿದೆ. ಇದರೊಂದಿಗೆ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 4,50,15,083 ಮತ್ತು ಸಕ್ರಿಯ ಪ್ರಕರಣಗಳ ಸಂಖ್ಯೆ 4,440ಕ್ಕೆ ಏರಿಕೆಯಾಗಿದೆ. ಕೋವಿಡ್‌ನಿಂದ ಈವರೆಗೆ ಸಾವನ್ನಪ್ಪಿರುವವರ ಸಂಖ್ಯೆ 5,33,371ಕ್ಕೆ ಏರಿಕೆಯಾಗಿದ್ದು, ಒಟ್ಟು ಚೇತರಿಸಿಕೊಂಡವರ ಸಂಖ್ಯೆ 4,44,77,272ಕ್ಕೆ ತಲುಪಿದೆ. ಇನ್ನು ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 17,605 ಮಂದಿಯನ್ನು ಕೊರೊನಾ ಪರೀಕ್ಷೆಗೊಳಪಡಿಸಿದ್ದು, 93,58,79,495 ಮಂದಿ ಪರೀಕ್ಷೆಗೊಳಪಡಿಸಲಾಗಿದೆ ಎಂದು ಐಸಿಎಂಆರ್ ಮಾಹಿತಿ ನೀಡಿದೆ. ಕೇಂದ್ರ ಸರ್ಕಾರ ಮಾಹಿತಿ ನೀಡಿರುವ ಪ್ರಕಾರ ಲಸಿಕೆ ಅಭಿಯಾನ ಆರಂಭ ವಾಗಿ ಇಲ್ಲಿವರೆಗೂ 2,20,67,79, 081 ಜನರಿಗೆ ಲಸಿಕೆಯನ್ನು ನೀಡಲಾಗಿದೆ ಎಂದು ಐಸಿಎಂಆರ್ ತಿಳಿಸಿದೆ.

ರೂಪಾಂತರಿ ಜೆಎನ್.1: ನಂ.1 ಸ್ಥಾನದಲ್ಲಿ ಕರ್ನಾಟಕ!

ದೇಶದ 11 ರಾಜ್ಯಗಳಲ್ಲಿ 511 ಪ್ರಕರಣ ಪತ್ತೆ

ನವದೆಹಲಿ: ಕೊರೊನಾ ರೂಪಾಂತರಿ ಜೆಎನ್.1 ಮೊದಲ ಪ್ರಕರಣ ಕೇರಳದಲ್ಲಿ ಪತ್ತೆಯಾದ ನಂತರ ದೇಶಾದ್ಯಂತ ಆತಂಕ ಹೆಚ್ಚಾಗತೊಡಗಿದ್ದು, ಕೋವಿಡ್ ಸೋಂಕಿತರ ಜೊತೆ ಜೊತೆಗೆ ರೂಪಾಂತರಿ ಜೆಎನ್.1 ಪ್ರಕರಣಗಳ ಸಂಖ್ಯೆ 511ಕ್ಕೆ ಏರಿದೆ.

ದೇಶದ ಒಟ್ಟು 11 ರಾಜ್ಯಗಳಲ್ಲಿ (ಗೋವಾ, ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳುನಾಡು, ತೆಲಂಗಾಣ, ದೆಹಲಿ, ರಾಜಸ್ಥಾನ, ಒಡಿಶಾ, ಹರಿಯಾಣ, ಗುಜರಾತ್) ಜೆಎನ್.1 ಪತ್ತೆಯಾಗಿದ್ದು, ಈ ಪೈಕಿ ಕರ್ನಾಟಕದಲ್ಲಿ ಅತೀ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ.

ಜೆಎನ್.1 ವೈರಸ್ ಕರ್ನಾಟಕದಲ್ಲಿ ಇದುವರೆಗೆ 199 ಪ್ರಕರಣಗಳ ಪತ್ತೆಯಾಗಿದ್ದರೆ, ಕೇರಳದಲ್ಲಿ 148, ಗೋವಾ 47, ಗುಜರಾತ್ 36, ಮಹಾರಾಷ್ಟ್ರ 32, ತಮಿಳುನಾಡಿ 26, ದೆಹಲಿ 15, ರಾಜಸ್ಥಾನ 4, ತೆಲಂಗಾಣ 2, ಒಡಿಶಾ 1 ಮತ್ತು ಹರಿಯಾಣ 1 ಪ್ರಕರಣ ಪತ್ತೆಯಾಗಿದೆ. ದೇಶದಲ್ಲಿ ಕೋವಿಡ್–19ನ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 4,440ಕ್ಕೆ ತಲುಪಿದ್ದು, ಮೃತರ ಸಂಖ್ಯೆ 5,33,371ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಸಚಿವಾಲಯದ ಅಂಕಿಅಂಶಗಳು ಮಾಹಿತಿ ನೀಡಿವೆ.

ನಕ್ಕರೆ ಅದೇ ಸ್ವರ್ಗ

ಪತ್ನಿ : (ಒಂದು ಸಣ್ಣ ಜಗಳದಲ್ಲಿ) "ನಿಮ್ಮನ್ನು ಮದುವೆಯಾದ ನಾನು ಮೂರ್ಖಳು"

ಪತಿ : "ಹೌದು ಡಿಯರ್ ನಿನ್ನನ್ನು ಪ್ರೀತಿಸುವ ಭರದಲ್ಲಿ ನಾನಿದನ್ನು ಗಮನಿಸಲೇ ಇಲ್ಲ!"

ಮೈಸೂರು ಮಿತ್ರ

ಗುರುವಾರ, 4 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಯಾರು ಪ್ರಪಂಚದ ಸುಖವನ್ನು ಹೆಚ್ಚಿಸಲು ಯತ್ನಿಸುತ್ತಾರೋ, ಅವರು ತಮ್ಮ ಸುಖವನ್ನು ಹೆಚ್ಚಿಸಿಕೊಳ್ಳುತ್ತಾರೆ. ಈ ತಿಳಿವಳಿಕೆ ಇಲ್ಲದ ಜನರು ಹೊರಗೆ ದುಃಖವನ್ನು ಹೆಚ್ಚಿಸುತ್ತಾರೆ – ಶಿವರಾಮ ಕಾರಂತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವಜ್ರಕ್ಕೆ ಸಾಣೆ ಹಿಡಿದಂತೆ

ನಿಮ್ಮ ಪತ್ರಗಳು

ಚಾಮುಂಡಿಬೆಟ್ಟಕ್ಕೆ ಮತ್ತೇ ಬಂತು ರೋಪ್‌ವೇ



ಮಾನ್ಯರೆ,

ಮೈಸೂರಿನ ನಾಗರಿಕರು ಮರೆತೆನೆಂದರೂ ಬಿಡದು ಮತ್ತೆ ಮತ್ತೆ ಕಾಡುವುದು ಚಾಮುಂಡಿಬೆಟ್ಟದ ರೋಪ್ ವೇ, ನಗರದ ಶುದ್ಧ ಗಾಳಿಯ ಮೂಲವಾದ ಹಸಿರಿನಿಂದ ತುಂಬಿ ಕಣ್ಮನ ಸೆಳೆ ಯುವ ಚಾಮುಂಡಿಬೆಟ್ಟಕ್ಕೆ ನಿರ್ಮಿಸಲು ಯೋಜಿಸಿರುವ ಈ ಹಗ್ಗದ ದಾರಿಯು ಮುಂದೆ ಕುಣಿಕೆಯ ನೇಣು ಆಗುವುದನ್ನು ಮರೆತು ಪದೇ ಪದೆ ಪ್ರಸ್ತಾಪಿಸುತ್ತಿರುವುದು ಏಕೆ?

ಚಾಮುಂಡಿಬೆಟ್ಟವು ಕೇವಲ ಒಂದು ಸಾವಿರ ಅಡಿಯಷ್ಟು ಮಾತ್ರ ಎತ್ತರವಿದ್ದು, ಬಹಳಷ್ಟು ಭಕ್ತಾದಿಗಳು ನಿತ್ಯವೂ ಸಾವಿರಕ್ಕೂ ಹೆಚ್ಚು ಮೆಟ್ಟಿಲುಗಳನ್ನು ಏರಿ ತಾಯಿ ದರ್ಶನ ಪಡೆಯುತ್ತಿದ್ದಾರೆ. ಬೆಟ್ಟದ ತಳದಿಂದ ಕೇವಲ ಎಂಟು ಕಿಮೀ ಇರುವ ದೂರವನ್ನು ಕಾಲು ನಡಿಗೆಯಲ್ಲೂ ಭಕ್ತರು ವಿಶೇಷ ಸಂದರ್ಭಗಳಲ್ಲಿ ಹೋಗಿ ಬರುವುದುಂಟು. ಈಗಾಗಲೇ ಬೆಟ್ಟದ ಮೇಲೆ ಹಲವು ಅನವಶ್ಯಕ ಅಭಿವೃದ್ಧಿ(ವಿನಾಶಕಾರಿ) ಕೆಲಸಗಳನ್ನು ಮಾಡಿರುವುದರಿಂದ ಕೃತಕವಾಗಿ ಹೆಚ್ಚಳವಾದ ತೂಕದ ಪರಿಣಾಮ ಬೆಟ್ಟವು ಕುಸಿದಿರುವುದನ್ನು ಕಣ್ಣಾರೆ ಕಂಡಿದ್ದೇವೆ. ಸರ್ಕಾರದಿಂದ ಅನುದಾನ ಬಂತೆಂದು ಅಭಿವೃದ್ಧಿ ಕಾರ್ಯಗಳನ್ನು ಬೆಟ್ಟದ ಮೇಲೆ ಮಾಡುವ ಬದಲು ತಳದಲ್ಲಿ ಬಫರ್ ಝೋನ್‌ನಿಂದ ಹೊರಭಾಗದಲ್ಲಿ ನಡೆಯುವಂತಾಗಲಿ. ಅಷ್ಟಾಗಿಯೂ ಅಭಿವೃದ್ಧಿ ಮಾಡಲೇಬೇಕೆಂದರೆ ಚಿನ್ನದ ಮೊಟ್ಟೆ ಇಡುವ ಅಜ್ಜಿಯ ಕೋಳಿ ಕೊಯ್ದು ತಿಂದಂತಿರುವ ಹಣ ಮಾಡುವ ವಿನಾಶಕಾರಿ ಸಲಹೆಯೊಂದನ್ನು ನೀಡಬಯಸುತ್ತೇನೆ. ಬಹುಶಃ ಕೆಲವರು ಈಗಾಗಲೇ ಯೋಚಿಸಿರಲೂಬಹುದು!?

ಬೆಟ್ಟವನ್ನು ಪೂರ್ಣವಾಗಿ ಬಗೆದು ಅದರಲ್ಲಿ ದೊರೆಯಬಹುದಾದ ಕಲ್ಲುಮಣ್ಣು ಇತ್ಯಾದಿಗಳನ್ನು ಮಾರಿಕೊಳ್ಳುವುದು, ನೆಲವು ಸಮತಟ್ಟಾದ ಬಳಿಕ ಅಂದಾಜು 2500 ಎಕರೆಗಳಿಗಿಂತಲೂ ಹೆಚ್ಚು ವಿಸ್ತೀರ್ಣದ ಭೂಮಿ ದೊರೆಯುವುದು. ಇದನ್ನು ಸುಸಜ್ಜಿತ ಬಡಾವಣೆ ಮಾಡಿ ಒಂದು ಮೂಲೆಯಲ್ಲಿ ಚಾಮುಂಡಿ ದೇವಸ್ಥಾನವನ್ನು ಮರುಸ್ಥಾಪಿಸಿ ಸೈಟುಗಳನ್ನು ಮಾರಾಟ ಮಾಡುವುದರಿಂದ ಕಡಿಮೆ ಎಂದರೂ ಒಂದು ಲಕ್ಷ ಕೋಟಿಗೂ ಮೀರಿದ ಆದಾಯ ಬರುವುದು, ನೋಡಿ ಮನಸ್ಸು ಮಾಡಿ ಅಭಿವೃದ್ಧಿ ಹೆಸರಿನಲ್ಲಿ ಮೈಸೂರನ್ನು ಶಾಶ್ವತವಾಗಿ ಹಾಳೂರು ಮಾಡಿಬಿಡಿ!, ವಿನಾಶ ಕಾಲೇ ವಿಪರೀತ ಬುದ್ಧಿ!. **–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.**

ಮೈಸೂರಿನ ಹೆಮ್ಮೆಯ ಶಿಲ್ಪಿ ಅರುಣ್ ಯೋಗಿರಾಜ್‌ಗೆ ನಮನಗಳು



ಮಾನ್ಯರೆ,

ಜನವರಿ 22 ರಂದು ಅಯೋಧ್ಯೆಯಲ್ಲಿ ಶ್ರೀರಾಮನ ಪಟ್ಟಾಭಿಷೇಕ ಮತ್ತೆ ವಿಜೃಂಭಿಸಲಿದೆ ಹಾಗೂ ಇದು ಐತಿಹಾಸಿಕ ದಾಖಲೆಯಾಗಿ ಇಡೀ ವಿಶ್ವದ ಗಮನ ಸೆಳೆದಿರುವುದು ನಿಜಕ್ಕೂ ನಮಗೆಲ್ಲ ಹರುಷ ಹಾಗೂ ಆನಂದದಾಯಕವಾಗಿದೆ.

ಮೈಸೂರು ಹಲವು ಪ್ರಥಮಗಳಿಗೆ ಕಾರಣೀಭೂತವಾಗಿರುವುದೇ ಅಲ್ಲದೇ ಹಲವು ಸಾಧನೆಗಳಿಗೆ, ಅಪೂರ್ವ ಕೊಡುಗೆಯನ್ನು ನೀಡುವಲ್ಲಿ ದೇಶಕ್ಕೆ, ವಿಶ್ವಕ್ಕೆ ಮಾದರಿಯಾಗಿದೆ. ಇದೀಗ ಮೈಸೂರಿನ ಕಿರೀಟಕ್ಕೆ ಮತ್ತೊಂದು ಗರಿ.... ಅದು ರಾಮಲಲ್ಲಾ ವಿಗ್ರಹ. ನಮ್ಮ ಮೈಸೂರಿನ ಹೆಮ್ಮೆಯ ಶಿಲ್ಪಿ ಅರುಣ್ ಯೋಗಿರಾಜ್ ಅವರು ಕೆತ್ತಿರುವ ಶ್ರೀರಾಮ ಸೀತಾ ಲಕ್ಷ್ಮಣ ಸಮೇತ ವಿಗ್ರಹ ಅಯೋಧ್ಯೆಯ ರಾಮಮಂದಿರದ ಗುಡಿಯಲ್ಲಿ ಪ್ರಾಣ ಪ್ರತಿಷ್ಠಾಪನೆಯಾಗಲಿದೆ. ಎಂತಹ ಪವಿತ್ರ ಅದ್ಭುತ ರೋಮಾಂಚನ ಕ್ಷಣಗಳು.

ಅರುಣ್ ಯೋಗಿರಾಜ್ ಅವರು ಮತ್ತೊಮ್ಮೆ ಮೈಸೂರಿನ ಕೀರ್ತಿಯನ್ನು ಜಗಜ್ಜಾಹೀರು ಮಾಡಿದ್ದಾರೆ. ಈ ಹಿಂದೆ ಅವರೇ ನಿರ್ಮಿಸಿದ ಶ್ರೀ ಶಂಕರಾಚಾರ್ಯರ ವಿಗ್ರಹ ಕೇದಾರನಾಥದಲ್ಲಿ ಮತ್ತು ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ ದೆಹಲಿಯ ಕರ್ತವ್ಯ ಪಥದ ಸಮೀಪದ ಇಂಡಿಯಾ ಗೇಟ್ ಬಳಿ ಅನಾವರಣಗೊಂಡಿದ್ದವು. ಇವರು ನಮ್ಮ ಮೈಸೂರಿನವರು, ಕರುನಾಡಿನ ಹೆಮ್ಮೆಯ ಕುವರ ಎಂಬ ಹೆಮ್ಮೆ ಮೈಸೂರಿಗರದು. ಅರುಣ್ ಯೋಗಿರಾಜ್ ಅವರಿಗೆ ನಮನಗಳು ಹಾಗೂ ಅಭಿನಂದನೆಗಳು. **–ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.**

ಸಾರಿಗೆ ಅಧಿಕಾರಿಗಳಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರ ಬಸ್ ಮಾರ್ಗ ಸಂಖ್ಯೆ 245 ಮೈಸೂರು –ಗದ್ದಿಗೆ ಬಸ್‌ಗಳಲ್ಲಿ 700 ರೂ. ಮಾಸಿಕ ಬಸ್ ಪಾಸ್ ಹೊಂದಿರುವ ಪ್ರಯಾಣಿಕರನ್ನು ನಿರ್ವಾಹಕರು ರಿಂಗ್ ರಸ್ತೆ ವ್ಯಾಪ್ತಿಯ ಒಳಗಡೆ ಪ್ರಯಾಣಿಸಲು ಅನುಮತಿ ಇದ್ದರೂ ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ನಾವೇನು ಉಚಿತವಾಗಿ ಪ್ರಯಾಣ ಮಾಡುತ್ತಿದ್ದೇವೆಯೇ? ಈ ಸಮಸ್ಯೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಬಗೆಹರಿಸಲಿ.

–ನೊಂದ ಪ್ರಯಾಣಿಕರು, ಮೈಸೂರು.

ಜನರ ಕಷ್ಟ ಕಾರ್ಪಣ್ಯಗಳು ಬೇಗ ಬಗೆಹರಿಯುವಂತಾಗಲಿ

ಮಾನ್ಯರೆ,

ಇದೇ ಮೊದಲ ಬಾರಿಗೆ ಸರ್ಕಾರ ರಾಜ್ಯ ಎಲ್ಲಾ ತಾಲೂಕುಗಳಿಗೆ ಉಸ್ತುವಾರಿ ಕಾರ್ಯದರ್ಶಿಗಳನ್ನು ನೇಮಕ ಮಾಡಿದೆ. ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಕಾರ್ಯದರ್ಶಿಗಳು ರಾಜ್ಯದ ಪ್ರತೀ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ ಸರ್ಕಾರದ ಈ ನಿರ್ಧಾರದಿಂದ ಶ್ರೀಸಾಮಾನ್ಯನಿಗೆ ಸಾಕಷ್ಟು ನಿರೀಕ್ಷೆಗಳು ಇರುತ್ತವೆ. ಈ ನಿಟ್ಟಿನಲ್ಲಿ ತಾಲೂಕು ಉಸ್ತುವಾರಿ ಕಾರ್ಯದರ್ಶಿಗಳು ಜನರ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಿ, ಜನರಿಗೆ ಸುಲಭವಾಗಿ ಸಿಗುವಂತಾಗಬೇಕು. ಜನರ ಅಹವಾಲುಗಳನ್ನು ಸ್ವೀಕರಿಸಿ, ಸಮಸ್ಯೆಗಳನ್ನು ಬಗೆಹರಿಸಬೇಕು. ಜನರು ತಮ್ಮ ಕೆಲಸ ಕಾರ್ಯಗಳಿಗೆ ಸರ್ಕಾರಿ ಕಚೇರಿಗಳಿಗೆ ಅಲೆದು ಅಲೆದು ವ್ಯವಸ್ಥೆ ಮೇಲೆ ನಂಬಿಕೆಯನ್ನೇ ಕಳೆದುಕೊಳ್ಳುತ್ತಿದ್ದಾರೆ. ಇಂಥಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ತಾಲೂಕು ಉಸ್ತುವಾರಿ ಕಾರ್ಯದರ್ಶಿಗಳನ್ನು ನೇಮಕ ಮಾಡಿರುವುದು ಒಳ್ಳೆಯ ಬೆಳವಣಿಗೆ. ಈ ವ್ಯವಸ್ಥೆಯಿಂದ ಜನರ ಕಷ್ಟ ಕಾರ್ಪಣ್ಯಗಳು ಬೇಗ ಬಗೆಹರಿಯುವಂತಾಗಲಿ ಮತ್ತು ವ್ಯವಸ್ಥೆ ಮೇಲೆ ಜನರ ನಂಬಿಕೆ ಇನ್ನಷ್ಟು ಗಟ್ಟಿಯಾಗಲಿ.

–ಪ್ರಸಾದ್ ಜಿ.ಎಂ, ಮೈಸೂರು



ಕಾರ್ಕಳ ಆನಂದ ಭಟ್

ಮೊ : 7676554198

ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಭಾರತದ ಇತಿಹಾಸ ಮರು ಸಂಕಲನ

ಕಳೆದ ವರ್ಷ ಡಿಸೆಂಬರ್ 26ರಂದು ದೇಶವು ಪ್ರಥಮ ಬಾರಿಗೆ 'ವೀರ ಬಾಲ ದಿವಸ್'ನ್ನು ಆಚರಿಸಿತು. ಆ ಸಂದರ್ಭದಲ್ಲಿ ಸಿಖ್ ಪಂಥದ ಹತ್ತನೇ ಧರ್ಮ ಗುರು ಗೋವಿಂದ ಸಿಂಹ ಮತ್ತು ಅವರ ಪರಿವಾರದವರು ದೇಶ ಮತ್ತು ಧರ್ಮ ರಕ್ಷಣೆಗಾಗಿ ಮಾಡಿದ ಮಹೋನ್ನತ ಬಲಿದಾನವನ್ನು ದೇಶಕ್ಕೆ ತಿಳಿಸಲಾಯಿತು. ಈ ವರ್ಷ ದೆಹಲಿಯ 'ಭಾರತ್ ಮಂಟಪಂ'ದಲ್ಲಿ ನಡೆದ ಎರಡನೇ ವೀರ ಬಾಲ ದಿವಸ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಪ್ರಧಾನಿ ಮೋದಿಯವರು ದೇಶವು ವೀರ ಸಾಹಿಬ್ ಜಾದಾಗಳ ಅಮರ ತ್ಯಾಗಗಳನ್ನು ಸ್ಮರಿಸುತ್ತಿದೆ ಎಂದರು. ಕಳೆದ ವರ್ಷ ನಡೆದ ಕಾರ್ಯಕ್ರಮದಲ್ಲಿ 'ವೀರ ಸಾಹಿಬ್ ಜಾದಾ'ಗಳ ಅಮರ ತ್ಯಾಗಗಳನ್ನು ಸ್ಮರಿಸುತ್ತಿದೆ ಎಂದರು. ಕಳೆದ ವರ್ಷ ನಡೆದ ಕಾರ್ಯಕ್ರಮದಲ್ಲಿ 'ವೀರ ಸಾಹಿಬ್ ಜಾದಾ'ಗಳ ಶೌರ್ಯದ ಕಥೆಗಳು ಇಡೀ ರಾಷ್ಟ್ರದಲ್ಲಿ ಮಿಂಚಿನ ಸಂಚಾರ ಉಂಟು ಮಾಡಿದ್ದನ್ನು ಸ್ಮರಿಸಿಕೊಂಡರು. ಮೊಘಲ್‌ರಿಂದ ಗಲ್ಲಿಗೇರಿಸಲ್ಪಟ್ಟ ಸಿಖ್ ಧರ್ಮಗುರು ಗೋವಿಂದ ಸಿಂಹ ಮತ್ತು ಅವರ ನಾಲ್ವರು ಪುತ್ರರಾದ ಸಾಹಿಬ್ಜಾದಾ ಅಜಿತ್ ಸಿಂಗ್, ಸಾ. ಜುಜ್ಜರ್ ಸಿಂಗ್, ಸಾ. ಬಾಬಾ ಜೋರಾವರ್ ಸಿಂಗ್ ಮತ್ತು ಸಾ. ಬಾಬಾ ಫತೆಸಿಂಗ್‌ರ ಬಲಿದಾನ ನೆನೆದರೆ ಎಲ್ಲರನ್ನೂ ರೋಮಾಂಚನಗೊಳಿಸುವುದರೊಂದಿಗೆ ನಮಗೆ ಗೊತ್ತಿಲ್ಲದೇ ಎರಡನಿ ಕಣ್ಣೀರು ಬರುತ್ತದೆ.

> **ಪುರಾಣ ಕಾಲದಲ್ಲಿ ನೂರಾರು ಶ್ರೇಷ್ಠ ಬಾಲಕರು ತಮ್ಮ ಸಾಧನೆಗಳಿಂದ ಈ ದೇಶದಲ್ಲಿ ಶಾಶ್ವತವಾಗಿ ಸ್ಥಾನ ಪಡೆದರು. ಮೃತ್ಯುವನ್ನು ಜಯಿಸಿದ ಮಾರ್ಕಂಡೇಯ, ಹುಲಿ–ಸಿಂಹಗಳೊಂದಿಗೆ ಆಟವಾಡುತ್ತಿದ್ದ ಭರತ, ಜ್ಞಾನಾರ್ಜನೆಗಾಗಿ ಯಮರಾಜನನ್ನೇ ಪ್ರಶ್ನಿಸಿದ ನಚಿಕೇತ, ಸರ್ಪ ಸಂತತಿ ರಕ್ಷಣೆಗಾಗಿ ತನ್ನನ್ನೇ ಬಲಿ ನೀಡಿದ ಜೀಮೂತವಾಹನ, ತಂದೆಯ ತೊಡೆಯ ಮೇಲೆ ಕೂರಲು ಅವಕಾಶ ಸಿಗದಾಗ ನೊಂದು ವಿಷ್ಣುವನ್ನು ಕುರಿತು ತಪಸ್ಸು ಮಾಡಿ ಆಗಸದ ಉತ್ತರ ದಿಕ್ಕಿನಲ್ಲಿ ನಕ್ಷತ್ರ ರೂಪದಲ್ಲಿ ಶಾಶ್ವತ ಸ್ಥಾನ ಪಡೆದ ಧ್ರುವ, ಬಾಲಕನಾಗಿದ್ದಾಗಲೇ ಸೂರ್ಯನನ್ನು ಹಣ್ಣೆಂದು ಭಾವಿಸಿ ಕೀಳಲು ಹಾರಿದ ಹನುಮ, ಬಾಲಕರಾಗಿದ್ದಾಗಲೇ ತಾಟಕಿಯ ಸಂಹಾರ ಮಾಡಿದ ಶ್ರೀರಾಮ–ಲಕ್ಷ್ಮಣರು, ಪುಟ್ಟ ಮಗುವಿನಿಂದ ಹೆಜ್ಜೆ ಹೆಜ್ಜೆಗೂ ಪ್ರಾಣಹರಣ ಮಾಡಲು ಬಂದ ಪೂತನಿ, ಧೇನುಕಾಸುರ, ಶಕಟಾಸುರ, ಅಘಾಸುರ, ತೃಣಾವರ್ತ, ಚಾಣೂರ–ಮುಷ್ಠಿಕ ಹಾಗೂ ಕೊನೆಗೆ ಕಂಸನನ್ನು ಕೊಂದ ಶ್ರೀಕೃಷ್ಣ–ಬಲರಾಮರು, ಶಂಕರಾಚಾರ್ಯರು ಮೊದಲಾದವರನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕಾಗಿದೆ.**

ಪ್ರಧಾನಿ ಮೋದಿಯವರು ಮುಂದುವರಿದು 'ಭಾರತೀಯತೆಯ ರಕ್ಷಣೆಗಾಗಿ ಎಂದಿಗೂ ಸಾವಿಲ್ಲದ ಅಮರ ಮನೋಭಾವದ ಸಂಕೇತ ಈ ವೀರ ಬಾಲ್ ದಿವಸ್ ಎಂದು ಒತ್ತಿ ಹೇಳಿದರು. 'ಧೈರ್ಯದ ವಿಷಯಕ್ಕೆ ಬಂದಾಗ ವಯಸ್ಸು ಮುಖ್ಯವಲ್ಲ ಎಂದು ಈ ದಿನ ನೆನಪಿಸುತ್ತದೆ ಎಂದು ಪ್ರಧಾನಿಯವರು ಹೇಳಿದರು. ವೀರ ಬಾಲ ದಿವಸ್ ಆಚರಣೆಯು ಸಾಟಿಯಿಲ್ಲದ ಶೂರರಿಗೆ ಜನ್ಮ ನೀಡಿದ ತಾಯಂದಿರಿಗೆ ಸಲ್ಲಿಸುವ ರಾಷ್ಟ್ರೀಯ ಗೌರವವಾಗಿದೆ.

ಭಾರತದ ಇತಿಹಾಸದಲ್ಲಿ ಸಂಭವಿಸಿದ ಅತ್ಯಂತ ಹೃದಯವಿದ್ರಾವಕ, ಮನಕಲಕುವ, ರಕ್ತ ಹೆಪ್ಪುಗಟ್ಟಿಸುವ ಘಟನೆಯಾಗಿದೆ. ಈ ಘಟನೆಯಲ್ಲಿ ಧರ್ಮ ರಕ್ಷಣೆಗಾಗಿ ಗುರು ಗೋವಿಂದ ಸಿಂಹರ ಎಲ್ಲ ನಾಲ್ವರು ಬಾಲಕರು ಆಕ್ರಮಣಕಾರಿ ಮೊಘಲ್‌ರ ಕ್ರೌರ್ಯಕ್ಕೆ ಬಲಿಯಾಗುತ್ತಾರೆ.

ಗುರು ಗೋವಿಂದ ಸಿಂಹರ ಪುತ್ರರಾದ ನಾಲ್ಕು ಸಿಂಹದ ಮರಿಗಳ ಬಲಿದಾನದ ಸ್ಮರಣೆಯಲ್ಲಿ ವೀರ ಬಾಲ ದಿವಸ್ ಆಚರಿಸಲಾಗುತ್ತಿದೆ. ನಾಲ್ವರಲ್ಲಿ ಅತ್ಯಂತ ಕಿರಿಯ ವಯಸ್ಸಿನವರಾದ ಸಾ. ಬಾಬಾ ಜೋರಾವರ್ ಸಿಂಗ್ (ಒಂಭತ್ತು ವರ್ಷ) ಮತ್ತು ಸಾ. ಬಾಬಾ ಫತೆಸಿಂಗ್ (ಆರು ವರ್ಷ)ರನ್ನು ದಿನಾಂಕ 26.12.1705ರಂದು ಇವರ ಸುತ್ತ ಇಟ್ಟಿಗೆ ಗೋಡೆಯನ್ನು ಕಟ್ಟಿ ಜೀವಂತ ಸಮಾಧಿ ಮಾಡುತ್ತಾರೆ. ಈ ಇಬ್ಬರು ಬಾಲಕರು ಜಗತ್ತಿನಲ್ಲಿ ಅತೀ ಕಿರಿಯ ವಯಸ್ಸಿನಲ್ಲಿ ದೇಶಕ್ಕಾಗಿ, ಧರ್ಮಕ್ಕಾಗಿ ಪ್ರಾಣಾರ್ಪಣೆ ಮಾಡಿದವರೆಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಆ ದಿನಗಳಲ್ಲಿ ಸರ್‌ಹಿಂದ್ ಪ್ರದೇಶದ ನವಾಬ ವಝೀರ್ ಖಾನ್‌ನಾಗಿದ್ದ. ಈ ಘಟನೆಗಳು 1705ರಲ್ಲಿ ಡಿಸೆಂಬರ್ ತಿಂಗಳ ದಿ.21ರಿಂದ 26ರ ಅವಧಿಯಲ್ಲಿ ಸಂಭವಿಸಿತು. ವಝೀರ್ ಖಾನ್ ಈ ಇಬ್ಬರು ಬಾಲಕರನ್ನು ಮೋಸದಿಂದ ಸೆರೆ ಹಿಡಿದು ತಂದು ನೀವು ಮುಸಲ್ಮಾನರಾಗಿ ಮತಾಂತರವಾದರೆ ಕ್ಷಮಿಸಿ ಪ್ರಾಣ ಭಿಕ್ಷೆ ನೀಡುವ ಆಮಿಷ ಒಡ್ಡುತ್ತಾನೆ. ಖಾನ್‌ನ ಆಮಿಷವನ್ನು ಧಿಕ್ಕರಿಸಿ ಇಬ್ಬರೂ ಬಾಲಕರು 'ನಮಗೆ ಪಂಥಕ್ಕಿಂತ ಸಾವು ದೊಡ್ಡದಲ್ಲ, ನಾವು ಪ್ರಾಣಕ್ಕಿಂತ ಹೆಚ್ಚಾಗಿ ಧರ್ಮವನ್ನು ಪ್ರೀತಿಸುತ್ತೇವೆ. ನಾವು ಸಾಯಲು ಸಿದ್ಧ. ಆದರೆ ನಮ್ಮ ಧರ್ಮ ತ್ಯಜಿಸುವುದಿಲ್ಲ. ಧರ್ಮಕ್ಕಾಗಿ ಬಲಿದಾನ ನೀಡಿದ ನಮ್ಮ ತಾತಾ ಗುರು ತೇಗ್‌ಬಹಾದುರ್ ನಮಗೆ ಆದರ್ಶ ಎಂದು ಘರ್ಜಿಸುತ್ತಾರೆ. ಅಂದು ಈ ಬಾಲಕರು ಮತ್ತು ಮತಾಂಧರ ನಡುವೆ ಪರಾಕ್ರಮ ಮತ್ತು ಕ್ರೌರ್ಯದ ನಡುವೆ ಸ್ಪರ್ಧೆ ನಡೆದಿತ್ತು. ಬಾಲಕರ ದಿಟ್ಟತನ, ಧೈರ್ಯ, ಪರಾಕ್ರಮದ ಮುಂದೆ ಕ್ರೌರ್ಯವು ನಾಚಿ ತಲೆ ತಗ್ಗಿಸಿತ್ತು.



ಒಂದೆಡೆ ಕ್ರೌರ್ಯ ತನ್ನ ಎಲ್ಲ ರೀತಿಯ ಎಲ್ಲೆ ದಾಟಿ ಪರಮಾವಧಿಗೆ ತಲುಪಿದ್ದರೆ ಇನ್ನೊಂದೆಡೆ ಕ್ರೌರ್ಯವನ್ನು ಅಣಕಿಸುವಂತೆ ಸಾವಿಗೆ ಅಂಜದೆ ಸಿಂಹದ ಮರಿಗಳಂತೆ ಈ ಬಾಲಕರು ಪ್ರಾಣ ಬಲಿ ಕೊಡುತ್ತೇವೆ. ಆದರೆ ಧರ್ಮ ಬಿಡುವುದಿಲ್ಲ ಎಂದು ಪದೇ ಪದೆ ಘರ್ಜಿಸುತ್ತಿದ್ದರು. ಮತ್ತೊಂದೆಡೆ ಸಿರ್ಸಾ ನದಿಯ ತೀರದ ಚಮ್ ಕೌರ್‌ನ ಕದನ ದಲ್ಲಿ ಇನ್ನಿಬ್ಬರು ಮಕ್ಕಳಾದ ಸಾ. ಬಾಬಾ ಅಜಿತ್ ಸಿಂಗ್ ಮತ್ತು ಸಾ. ಬಾಬಾ ಜುಜ್ಜರ್‌ಸಿಂಗ್ ಶತ್ರುಗಳೊಂದಿಗೆ ಹೋರಾಡುತ್ತಾ ಸರ್ವೋಚ್ಛ ಬಲಿದಾನ ನೀಡುತ್ತಾರೆ.

ದೇಶಕ್ಕಾಗಿ, ಧರ್ಮಕ್ಕಾಗಿ ತನ್ನ ಮಕ್ಕಳು ಬಲಿದಾನ ನೀಡಿರುವ ಸುದ್ದಿ ತಿಳಿಯದ ಮಾತೆ ಸುಂದರಿಜಿಯ ಪತಿ ಗುರುಗೋವಿಂದ ಸಿಂಹರ ಬಳಿ ಮಕ್ಕಳೆಲ್ಲಿ ಎಂದು ಕೇಳುತ್ತಾರೆ? ಆಗ ಗುರು ಗೋವಿಂದ ಸಿಂಹರು ನಿನ್ನ ನಾಲ್ಕು ಮಕ್ಕಳು ಮುಕ್ತಿಯನ್ನು ಪಡೆದಿದ್ದಾರೆ. ಇಂತಹ ಪರಾಕ್ರಮಿ ಪುತ್ರರ ತಾಯಿಗೆ ಅಳುವುದು ಶೋಭೆ ತರದು. ನಿನ್ನ ಮಕ್ಕಳು ಗೌರವ, ಸಮ್ಮಾನ ಪರಾಕ್ರಮದೊಂದಿಗೆ ವ್ಯಾಗುರುವಿನ ಆ ಚಿರಂತನ, ಶಾಶ್ವತ ಸ್ಥಾನಕ್ಕೆ ತೆರಳಿದ್ದಾರೆ. ಆದ್ದರಿಂದ ನಾವು ಪರಮಾತ್ಮನ ನಿರ್ಣಯವನ್ನು ಸ್ವೀಕರಿಸೋಣ ಎಂದು ಸಾಂತ್ವನ ಹೇಳುತ್ತಾ ಮಾತೆ ಸುಂದರಿಜಿಯಲ್ಲಿ ವಿಶ್ವಾಸ ತುಂಬಲು 'ಇನ್ ಪುತ್ರನ್ ಕೆ ಸೀಸ್ ಪರ್ ವಾರ್ ದಿಯ ಸುತ್ ಚಾರ್, ಚಾರ್ ಮುಯಿ ತೊ ಕ್ಯಾ ಹುವಾ. ಜೀವಿತ್ ಕಾಯಿ ಹಜಾರ್' ನಾನು ನಿನ್ನ ನಾಲ್ವರು ಪುತ್ರರ ಬಲಿದಾನ ನೀಡಿದ್ದೇನೆ. ಬದಲಿಗೆ ಸಮಸ್ತ ಸಿಖ್ ಪಂಥದ ಸಾವಿರಾರು ಪರಾಕ್ರಮಿ ಪುತ್ರರನ್ನು ನೀಡುತ್ತೇನೆ' ಎಂದು ಸಮಾಧಾನಪಡಿಸುತ್ತಾರೆ. ನಾಲ್ವರು ಪುತ್ರರನ್ನು ಕಳೆದುಕೊಂಡ ನಂತರವೂ ಗುರು ಗೋವಿಂದ ಸಿಂಹರು ತೋರಿದ ಧೈರ್ಯ, ದೃಢತೆ ಹಾಗೂ ನಾಲ್ವರು ಬಾಲಕರ ಪರಾಕ್ರಮ ಸಾಟಿ ಇಲ್ಲದ ದೇಶ, ಧರ್ಮದ ಮೇಲಿನ ಅಭಿಮಾನ ಭಾರತೀಯರಿಗೆ ಸದಾ ಕಾಲ ದೇಶಕ್ಕಾಗಿ ಹೋರಾಡಲು ಸ್ಫೂರ್ತಿ, ಪ್ರೇರಣೆ, ಮನೋಬಲ ನೀಡಲಿದೆ.

ಪ್ರಧಾನಿ ಮೋದಿಯವರು ಪ್ರಥಮ ಬಾರಿ 'ವೀರ ಬಾಲ ದಿವಸ್' ಘೋಷಣೆ ಮಾಡಿದ ನಂತರ ಮೇ। ಧ್ಯಾನ್‌ಚಂದ್ ರಾಷ್ಟ್ರೀಯ ಸ್ಟೇಡಿಯಂನಲ್ಲಿ ಒಂದು ಕಾರ್ಯಕ್ರಮ ಆಯೋಜಿಸಲಾಗಿತ್ತು. ಆ ದಿನ ದೇಶದ ಇತಿಹಾಸದಲ್ಲಿ ನಡೆದ ಘಟನೆಯನ್ನು ಮಕ್ಕಳಿಗೆ ತಿಳಿಸುವ ಮೂಲಕ ಮಕ್ಕಳಲ್ಲಿ ದೇಶಾಭಿಮಾನ ಪರಾಕ್ರಮಿ ಮನೋಭಾವ ರೂಪಿಸಿಕೊಳ್ಳಲು ಪ್ರೇರಣೆ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಸ್ವಾಭಿಮಾನ ಮತ್ತು ರಾಷ್ಟ್ರದ ಆತ್ಮ ಸಮ್ಮಾನಕ್ಕೆ ಸಿಖ್ಖರ ಧರ್ಮಗುರುಗಳು ನೀಡಿದ ಪರಮೋಚ್ಛ ಬಲಿದಾನಗಳ ಬಗ್ಗೆ ಮಾಹಿತಿ ನೀಡುವಲ್ಲಿ ಯಶಸ್ವಿಯಾಗಿತ್ತು.

ವೀರ ಬಾಲ ದಿವಸ ನಮ್ಮ ಭೂತಕಾಲದ ಪರಮೋಚ್ಛ ಇತಿಹಾಸವನ್ನು ಅಧ್ಯಯನ ಮಾಡಿ ಭವಿಷ್ಯದಲ್ಲಿ ಒಂದು ಶಕ್ತಿಶಾಲಿ ದೇಶವನ್ನು ಕಟ್ಟಲು ಪ್ರೇರಣೆ ನೀಡುತ್ತದೆ. ಭಾರತೀಯರಿಗೆ ಆತ್ಮ ಸಮ್ಮಾನ, ಆತ್ಮವಿಶ್ವಾಸ ನೀಡುತ್ತದೆ.

ಸ್ವಾತಂತ್ರ್ಯ ದೊರೆತ ನಂತರದ ಈ ಅಮೃತ ಕಾಲದಲ್ಲಿ ಪ್ರಧಾನಿ ಮೋದಿಯವರು ವೀರ ಬಾಲ ದಿವಸ್ ಆಚರಿಸುವ ಮೂಲಕ ಭಾರತೀಯರಲ್ಲಿ ಇನ್ನೂ ಉಳಿದಿರುವ ಮಾನಸಿಕ ಗುಲಾಮಿತನವನ್ನು ತೊಡೆದು ಹಾಕುವ ಪ್ರಯತ್ನ ಮಾಡಿದ್ದಾರೆ. ಪ್ರಸ್ತುತ ಭಾರತೀಯರು ದೇಶದ ಗೌರವವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಸನ್ನಾಹದಲ್ಲಿರುವ ಸಂದರ್ಭದಲ್ಲಿ ವೀರ ಬಾಲ ದಿವಸ ವಿಶೇಷ ಮಹತ್ವ ಪಡೆದಿದೆ. ಸಿಖ್ ಗುರು ಪರಂಪರೆ ಕೇವಲ ನಂಬಿಕೆ ಮತ್ತು ಆಧ್ಯಾತ್ಮಿಕತೆಗೆ ಸೀಮಿತವಾಗಿಲ್ಲ. ಇವರ ಪರಂಪರೆ 'ಏಕ್ ಭಾರತ್ ಶ್ರೇಷ್ಠ ಭಾರತ್' ಕಲ್ಪನೆಗೆ ಸ್ಫೂರ್ತಿಯ ಸೆಲೆಯಾಗಿದೆ.

ಭಾರತದ ಯುವ ಜನಾಂಗದ ಭವಿಷ್ಯವೇನು? ಇವರಿಗೆ ಆದರ್ಶಗಳೇನು? ಇವರು ಯಾರಿಂದ ಪ್ರೇರಣೆ ಪಡೆಯಬೇಕು? ಈ ಹಿನ್ನೆಲೆಯಲ್ಲಿ ದಶಕಗಳ ಹಿಂದೆ ಆದ ತಪ್ಪುಗಳನ್ನು ಮೋದಿ ಸರಕಾರ ಸರಿಪಡಿಸುವ ಕಾರ್ಯ ಆರಂಭಿಸಿದೆ.

ಯಾವುದೇ ಒಂದು ದೇಶವನ್ನು ಅದು ಪ್ರತಿಪಾದಿಸುತ್ತಿರುವ ಸಿದ್ಧಾಂತಗಳ ಆಧಾರದಲ್ಲಿ ಗುರುತಿಸಲಾಗುತ್ತದೆ. ಇತಿಹಾಸದಲ್ಲಿ ಕಂಡು ಬಂದಂತೆ ಒಂದು ದೇಶದ ಮೌಲ್ಯಗಳು ಬದಲಾದ ಕೆಲವೇ ಸಮಯದಲ್ಲಿ ಅದರ ಭವಿಷ್ಯದಲ್ಲಿ ಬದಲಾವಣೆಗಳಾಗುತ್ತವೆ. **ಗುಲಾಮಗಿರಿಯಲ್ಲಿರುವ ದೇಶದಲ್ಲಿ ಮಹಾಪುರುಷರು ಹುಟ್ಟುವುದಿಲ್ಲವೆಂಬುದು ಮನೋವೈಜ್ಞಾನಿಕರ ನಿಷ್ಕರ್ಷೆಯಾಗಿದೆ. ಆದರೆ ಭಾರತದಲ್ಲಿ ನಿರಂತರವಾಗಿ ವ್ಯತಿರಿಕ್ತವಾಗಿ ಈ ವಿಚಾರ ಸುಳ್ಳಾಗಿತ್ತು. ಪುರಾಣ ಕಾಲದಿಂದ ಆ ನಂತರ ಗ್ರೀಕ್, ಹೂಣ, ಶಕ, ಯವನರ, ಮೊಘಲರ ಆಕ್ರಮಣಗಳು ಆ ನಂತರ ಬ್ರಿಟಿಷರ ಗುಲಾಮಗಿರಿ ಈ ಎಲ್ಲ ಅವಧಿಯಲ್ಲಿ ಭಾರತದಲ್ಲಿ ಸಾಲು ಸಾಲು ಮಹಾಪುರುಷರು ಜನ್ಮ ತಾಳಿದರು.**

ಪುರಾಣ ಕಾಲದಲ್ಲಿ ನೂರಾರು ಶ್ರೇಷ್ಠ ಬಾಲಕರು ತಮ್ಮ ಸಾಧನೆಗಳಿಂದ ಈ ದೇಶದಲ್ಲಿ ಶಾಶ್ವತವಾಗಿ ಸ್ಥಾನ ಪಡೆದರು. ಮೃತ್ಯುವನ್ನು ಜಯಿಸಿದ ಮಾರ್ಕಂಡೇಯ, ಹುಲಿ–ಸಿಂಹಗಳೊಂದಿಗೆ ಆಟವಾಡುತ್ತಿದ್ದ ಭರತ, ಜ್ಞಾನಾರ್ಜನೆಗಾಗಿ ಯಮರಾಜನನ್ನೇ ಪ್ರಶ್ನಿಸಿದ ನಚಿಕೇತ, ಸರ್ಪ ಸಂತತಿ ರಕ್ಷಣೆಗಾಗಿ ತನ್ನನ್ನೇ ಬಲಿ ನೀಡಿದ ಜೀಮೂತವಾಹನ, ತಂದೆಯ ತೊಡೆಯ ಮೇಲೆ ಕೂರಲು ಅವಕಾಶ ಸಿಗದಾಗ ನೊಂದು ವಿಷ್ಣುವನ್ನು ಕುರಿತು ತಪಸ್ಸು ಮಾಡಿ ಆಗಸದ ಉತ್ತರ ದಿಕ್ಕಿನಲ್ಲಿ ನಕ್ಷತ್ರ ರೂಪದಲ್ಲಿ ಶಾಶ್ವತ ಸ್ಥಾನ ಪಡೆದ ಧ್ರುವ, ಬಾಲಕನಾಗಿದ್ದಾಗಲೇ ಸೂರ್ಯನನ್ನು ಹಣ್ಣೆಂದು ಭಾವಿಸಿ ಕೀಳಲು ಹಾರಿದ ಹನುಮ, ಬಾಲಕರಾಗಿದ್ದಾಗಲೇ ತಾಟಕಿಯ ಸಂಹಾರ ಮಾಡಿದ ಶ್ರೀರಾಮ–ಲಕ್ಷ್ಮಣರು, ಪುಟ್ಟ ಮಗುವಿನಿಂದ ಹೆಜ್ಜೆ ಹೆಜ್ಜೆಗೂ ಪ್ರಾಣಹರಣ ಮಾಡಲು ಬಂದ ಪೂತನಿ, ಧೇನುಕಾಸುರ, ಶಕಟಾಸುರ, ಅಘಾಸುರ, ತೃಣಾವರ್ತ, ಚಾಣೂರ–ಮುಷ್ಠಿಕ ಹಾಗೂ ಕೊನೆಗೆ ಕಂಸನನ್ನು ಕೊಂದ ಶ್ರೀಕೃಷ್ಣ–ಬಲರಾಮರು, ಶಂಕರಾಚಾರ್ಯರು ಮೊದಲಾದವರನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕಾಗಿದೆ.

ಮಧ್ಯ ಯುಗದಲ್ಲಿ ಬಾಲಕನಾಗಿದ್ದಾಗಲೇ ತೋರಣ ಗಢ ಗೆದ್ದ ಛತ್ರಪತಿ ಶಿವಾಜಿ, ಬುಂದೇಲ್ ಖಂಡದ ಛತ್ರಸಾಲ, ಸಾವಿರಾರು ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿದ ರಾಜಮಾತೆ ಅಹಲ್ಯಾ ಬಾಯಿ ಹೋಳ್ಕರ್, ಕರ್ನಾಟಕದ ಹೊಯ್ಸಳನಂತಹ ಬಾಲಕರ, ಯುವಕರ ಬಗ್ಗೆ ದೇಶದ ಯುವ ಜನಾಂಗಕ್ಕೆ ತಿಳಿಸಬೇಕಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಹನ್ನೆರಡನೇ ವಯಸ್ಸಿಗೆ ಬ್ರಿಟಿಷ್ ನ್ಯಾಯಾಧೀಶರೆದುರು ಮೈ ಆಜಾದ್ ಥಾ, ಆಜಾದ್ ಹೂಂ. ಆಜಾದ್ ಹೆ ರಹೂಂಗಾ ಎಂದು ಘರ್ಜಿಸಿದ ಚಂದ್ರಶೇಖರ ಆಜಾದ್, ಕಾಕೋರಿಯ ದರೋಡೆಯ ಪಂ.ರಾಮಪ್ರಸಾದ್ ಬಿಸ್ಮಿಲ್, ಅಶ್ಫಾಕ್–ಉಲ್ಲಾ–ಖಾನ್, ಕರ್ಝನ್ ವ್ಯಾಲಿಯನ್ನು ಗುಂಡಿಟ್ಟು ಕೊಂದ ನಂತರ ನನ್ನಂಥ ಶೋಕಿಲಾಲ, ದಡ್ಡ ಮಗನು ತಾಯಿ ಭಾರತಿಗೆ ರಕ್ತ, ಪ್ರಾಣವನ್ನಲ್ಲದೆ ಇನ್ನೇನು ಕೊಡಲು ಸಾಧ್ಯ ಎನ್ನುತ್ತಾ 26ನೇ ವಯಸ್ಸಿಗೆ ಗಲ್ಲಿಗೇರಿದ ಮದನ್ ಲಾಲ್ ಧಿಂಗ್ರಾ, ಮೇರಾ ರಂಗವೇ ಬಸಂತಿ ಚೋಲಾ ಎಂದು ನಗುನಗುತ್ತಾ ಗಲ್ಲಿಗೇರಿದ ಕ್ರಾಂತಿಕಾರಿಗಳಾದ ಭಗತ್ ಸಿಂಗ್, ರಾಜಗುರು, ಸುಖದೇವ್, ಮಣಿಪುರದ ರಾಣಿ ಗಾಯ್ ಡಿನಿಲ್ಯೂ, ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ ಕರ್ನಾಟಕದ ಸಂಗೊಳ್ಳಿ ರಾಯಣ್ಣ, ಹತ್ತೊಂಭತ್ತನೇ ವಯಸ್ಸಿಗೆ ಕಿಂಗ್ಸ್‌ಫೋರ್ಡ್ ಹತ್ಯೆ ಯತ್ನದಲ್ಲಿ ಗಲ್ಲುಗಂಬವೇರಿದ ಖುದಿರಾಂ ಬೋಸ್, ಗಣಿತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶ್ರೀನಿವಾಸ ರಾಮಾನುಜಂ ಅಲ್ಲದೆ ದೇಶಕ್ಕಾಗಿ ಬಾಳಿದ, ಮಡಿದ ಸಹಸ್ರಾರು ಮಹಾಪುರುಷರ ಕುರಿತು ಮುಂದಿನ ಪೀಳಿಗೆಗೆ ತಿಳಿಸಬೇಕಾಗಿತ್ತು.

ಆದರೆ ದುರ್ದೈವವಶಾತ್ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ವಾಮವಾದಿಗಳು ತಿರುಚಿದ ಇತಿಹಾಸವನ್ನು ನಮಗೆ ನೀಡಿದರು. ಭಾರತವನ್ನಾಳಿದ ಮೊಘಲರು ಶ್ರೇಷ್ಠ ದೊರೆಗಳು ಎನ್ನುವ ಇತಿಹಾಸವನ್ನು ನಮ್ಮ ಶಾಲಾ ಪಠ್ಯ ಪುಸ್ತಕಗಳಲ್ಲಿ ಕಲಿಸಲಾಯಿತು. ಬ್ರಿಟಿಷರು ನಮ್ಮನ್ನು ಆಳಿದ್ದರಿಂದ ನಮಗೆ ನಾಗರಿಕರಾಗಿ ಬದುಕಲು ಬೇಕಾದಂತಹ ಶಿಕ್ಷಣ ನೀಡಿದರು. ಈ ರೀತಿಯ ತಿರುಚಿದ ಇತಿಹಾಸಗಳನ್ನು ಕಲಿಸಿದ, ತಿಳಿಸಿದ್ದರಿಂದ ಭಾರತೀಯರಿಂದು ಕೀಳರಿಮೆಯಿಂದ ಬಳಲುತ್ತಿದ್ದಾರೆ. ಈ ದೇಶಕ್ಕೆ ಸ್ವಾತಂತ್ರ್ಯ ದೊರೆಯಿತು ಎಂಬ ಭ್ರಮೆಯನ್ನು ಸೃಷ್ಟಿಸುವಲ್ಲಿ ನೆಹರೂ ಕೂಟ ಯಶಸ್ವಿಯಾಯಿತು. ಇದರಿಂದ ಸ್ವಾತಂತ್ರ್ಯ ದೊರೆತು 70 ವರ್ಷ ಕಳೆದ ನಂತರವೂ ನಾವು ಕೀಳರಿಮೆ, ಇತಿಹಾಸದ ಬಗ್ಗೆ ತಿರಸ್ಕಾರದ ಭಾವನೆಯಿಂದ ತೊಳಲಾಡುತ್ತಿದ್ದೇವೆ.

ಈ ಅನಿಷ್ಟ ವಿಚಾರಗಳನ್ನು ತೊಡೆದು ಹಾಕಿ, ನಮ್ಮ ಇತಿಹಾಸದ ಬಗ್ಗೆ ಹೆಮ್ಮೆ ತಾಳುವಂತಹ ವಾತಾವರಣ, ಮಾನಸಿಕತೆ ಮತ್ತೆ ತರಲು ಪ್ರಧಾನಿ ಮೋದಿಯವರು ಈ ವೀರ ಬಾಲ ದಿವಸ್ ಆಚರಣೆಯನ್ನು ಆರಂಭಿಸಿದ್ದಾರೆ. ಸ್ವಾತಂತ್ರ್ಯದ ಅಮೃತ ವರ್ಷದಲ್ಲಿ ಭಾರತದ ನೈಜ ಸ್ವಾತಂತ್ರ್ಯ ಹೋರಾಟ ಮತ್ತು ದೇಶದ ಮಹಾಪುರುಷರ ಬಗ್ಗೆ ವಸ್ತುನಿಷ್ಠ ಮಾಹಿತಿ ನೀಡಲು ಇತಿಹಾಸದ ಮರು ಸಂಕಲನ ಆರಂಭವಾಗಿದೆ. ಪ್ರಸ್ತುತ ಸರಕಾರವು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಜನಸಾಮಾನ್ಯರು, ಮಹಿಳೆಯರು, ಬುಡಕಟ್ಟು ಜನಾಂಗದವರು, ವನವಾಸಿಗಳು ವಹಿಸಿದ ಪಾತ್ರ ಮತ್ತು ನೀಡಿದ ಕೊಡುಗೆಗಳನ್ನು ಎಲ್ಲದರ ನಿಖರ ಮಾಹಿತಿ ನೀಡುವ ಕಾರ್ಯಕ್ಕೆ ಚಾಲನೆ ನೀಡಿದೆ. ವೀರ ಬಾಲ ದಿವಸ್ ಈ ಎಲ್ಲ ಕಾರ್ಯಗಳಿಗೆ ಮುಂಬರುವ ದಿನಗಳಲ್ಲಿ ಪ್ರೇರಣೆ ನೀಡಲಿದೆ.

ಭಾರತ-ದಕ್ಷಿಣ ಆಫ್ರಿಕಾ 2ನೇ ಟೆಸ್ಟ್ ಪಂದ್ಯ

ಮೊದಲ ದಿನವೇ 23 ವಿಕೆಟ್ ಪತನ

ಕೇಪ್‌ಟೌನ್: ಆತಿಥೇಯ ದಕ್ಷಿಣ ಆಫ್ರಿಕಾ ಮತ್ತು ಭಾರತ ಕ್ರಿಕೆಟ್ ತಂಡಗಳ ನಡುವಣ ಟೆಸ್ಟ್ ಸರಣಿಯ ಎರಡನೇ ಹಾಗೂ ಅಂತಿಮ ಪಂದ್ಯದಲ್ಲಿ ಮೊದಲ ದಿನವೇ 23 ವಿಕೆಟ್‌ಗಳು ಪತನವಾಗಿವೆ.

ಇಲ್ಲಿನ ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ಇಂದು ಆರಂಭವಾದ ಪಂದ್ಯದಲ್ಲಿ ಆಫ್ರಿಕಾ ಪಡೆಯನ್ನು ಕೇವಲ 55 ರನ್‌ಗಳಿಗೆ ಆಲೌಟ್ ಮಾಡಿದ ಭಾರತ ತಂಡ ಸಹ, 153 ರನ್‌ಗಳಿಗೆ ಸರ್ವಪತನ ಕಂಡಿದೆ. 98 ರನ್‌ಗಳ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿರುವ ಆಫ್ರಿಕಾ, 62 ರನ್ ಆಗುವಷ್ಟರಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿದ್ದು ಮತ್ತೆ ಆಘಾತ ಅನುಭವಿಸಿದೆ.

ವೃತ್ತಿ ಜೀವನದ ಕೊನೇ ಟೆಸ್ಟ್ ಪಂದ್ಯ ಆಡುತ್ತಿರುವ ನಾಯಕ ಡೀನ್ ಎಲ್ಗರ್ (12), ಟೋನಿ ಡಿ ಝೂರ್ಜಿ (1), ಟ್ರಿಸ್ಟನ್ ಸ್ಟಬ್ಸ್ (1) ಔಟಾಗಿದ್ದಾರೆ. 36 ರನ್ ಗಳಿಸಿರುವ ಏಡನ್ ಮಾರ್ಕ್ರಂ ಹಾಗೂ 7 ರನ್ ಗಳಿಸಿರುವ ಡೇವಿಡ್ ಬೆಡಿಂಗ್ ಹ್ಯಾಮ್ ಕ್ರೀಸ್‌ನಲ್ಲಿದ್ದಾರೆ. ಇನಿಂಗ್ಸ್ ಹಿನ್ನಡೆ ತಪ್ಪಿಸಿಕೊಳ್ಳಲು ಆತಿಥೇಯ ತಂಡಕ್ಕೆ ಇನ್ನೂ 36 ರನ್‌ಗಳ ಅಗತ್ಯವಿದೆ. ಮುಕೇಶ್ ಕುಮಾರ್ ಎರಡು ಹಾಗೂ ಜಸ್‌ಪ್ರಿತ್ ಬೂಮ್ರಾ ಒಂದು ವಿಕೆಟ್ ಪಡೆದಿದ್ದಾರೆ.

ನಾಟಕೀಯ ತಿರುವು: ಮೊದಲ ಇನಿಂಗ್ಸ್‌ನಲ್ಲಿ ಡೀನ್ ಎಲ್ಗರ್ ಪಡೆಯ ಅಲ್ಪ ಮೊತ್ತದೆದುರು ಬ್ಯಾಟಿಂಗ್ ಆರಂಭಿಸಿದ ಭಾರತಕ್ಕೆ ಉತ್ತಮ ಆರಂಭ ಸಿಗಲಿಲ್ಲ. ನಾಯಕ ರೋಹಿತ್ ಶರ್ಮಾ ಜೊತೆ ಇನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ ಖಾತೆ ತೆರೆಯದೆ ವಿಕೆಟ್ ಒಪ್ಪಿಸಿದರು. ಆದರೆ, ಬಳಿಕ ಬಂದ ಶುಭಮನ್ ಗಿಲ್, ನಾಯಕನೊಂದಿಗೆ ಸೇರಿ ಅರ್ಧಶತಕದ ಆಟವಾಡಿದರು.

ರೋಹಿತ್ 39 ರನ್ ಗಳಿಸಿದರೆ, ಗಿಲ್ ಆಟ 36ಕ್ಕೆ ಕೊನೆಗೊಂಡಿತು. ಬಳಿಕ ಬಂದ ವಿರಾಟ್ ಕೊಹ್ಲಿ, ಎಂದಿನ ಲಯದಲ್ಲಿ ಬ್ಯಾಟ್ ಬೀಸಿದರಾದರೂ 46 ರನ್ ಗಳಿಸಿದ್ದಾಗ ಔಟಾದರು. ಈ ಮೂವರು ಮಾತ್ರವೇ ಭಾರತದ ಪರ ಎರಡಂಕಿ ರನ್ ಗಳಿಸಿದರು. ಕೆ.ಎಲ್.ರಾಹುಲ್ 8 ರನ್ ಗಳಿಸಿದ್ದು ಬಿಟ್ಟರೆ, ಉಳಿದ ಏಳು ಬ್ಯಾಟರ್‌ಗಳು ಸೊನ್ನೆ ಸುತ್ತಿದರು.

ರೋಹಿತ್ ಪಡೆ 33 ಓವರ್‌ಗಳ ಅಂತ್ಯಕ್ಕೆ 4 ವಿಕೆಟ್ ಕಳೆದುಕೊಂಡು 153 ರನ್ ಗಳಿಸಿತ್ತು. ಹೀಗಾಗಿ ಇನ್ನಷ್ಟು ರನ್ ಕಲೆಹಾಕಿ ಭಾರಿ ಮುನ್ನಡೆ ಸಾಧಿಸುವ ಯೋಜನೆಯಲ್ಲಿತ್ತು. ಆದರೆ, ಈ ಹಂತದಲ್ಲಿ ದಾಳಿಗಿಳಿದ ವೇಗಿ ಲುಂಗಿ ಗಿಡಿ, ಪ್ರವಾಸಿ ಪಡೆಯ ದಿಢೀರ್ ಕುಸಿತಕ್ಕೆ ಕಾರಣರಾದರು.

34ನೇ ಓವರ್‌ನ ಮೊದಲ ಎಸೆತದಲ್ಲಿ ಕೆ.ಎಲ್.ರಾಹುಲ್ ಅವರನ್ನು ಲುಂಗಿಗಿರಿ ಔಟ್ ಮಾಡಿದರು. ಅದಾದ ಬಳಿಕ ಟೀಂ ಇಂಡಿಯಾ, ಒಂದೂ ರನ್ ಸೇರಿಸದೆ ಆಲೌಟ್ ಆಯಿತು. ಬಾಲಂಗೋಚಿಗಳಾದ ಮೊಹಮ್ಮದ್ ಸಿರಾಜ್, ಜಸ್‌ಪ್ರಿತ್ ಬೂಮ್ರಾ, ಪ್ರಸಿದ್ಧ ಕೃಷ್ಣ ಅವರಷ್ಟೇ ಅಲ್ಲದೆ ರಾಹುಲ್, ಕೊಹ್ಲಿ, ರವೀಂದ್ರ ಜಡೇಜ ಅವರಂತಹ ಪ್ರಮುಖ ಬ್ಯಾಟರ್‌ಗಳೇ ಈ ಹಂತದಲ್ಲಿ ಔಟಾದದ್ದು ಅಚ್ಚರಿ ಮೂಡಿಸಿತು.



ಎಲ್ಗರ್ ಲೆಕ್ಕಾಚಾರ ತಲೆಕೆಳಗಾಗಿಸಿದ ಸಿರಾಜ್: ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಆಫ್ರಿಕಾ ತಂಡದ ನಾಯಕ ಎಲ್ಗರ್ ಲೆಕ್ಕಾಚಾರವನ್ನು ವೇಗಿ ಮೊಹಮ್ಮದ್ ಸಿರಾಜ್ ತಲೆಕೆಳಗಾಗಿಸಿದರು. 'ಹರಿಣ'ಗಳ ಪಡೆ ಮೇಲೆ ಬಿರುಗಾಳಿಯಂತೆ ಎರಗಿದ ಅವರು, 9 ಓವರ್‌ಗಳಲ್ಲಿ 15 ರನ್ ನೀಡಿ ಪ್ರಮುಖ 6 ವಿಕೆಟ್‌ಗಳನ್ನು ಕಬಳಿಸಿದರು. ವೃತ್ತಿ ಜೀವನದ ಎರಡನೇ ಟೆಸ್ಟ್ ಆಡುತ್ತಿರುವ ಮುಕೇಶ್ ಕುಮಾರ್ ಮತ್ತು ಬೂಮ್ರಾ ತಲಾ ಎರಡು ವಿಕೆಟ್ ಪಡೆದು ಸಂಭ್ರಮಿಸಿದರು. ಹೀಗಾಗಿ ಆತಿಥೇಯರ ಆಟ ಕೇವಲ 23.2 ಓವರ್‌ಗಳಲ್ಲೇ ಮುಗಿಯಿತು.

ಮೊದಲ ದಿನ ಹೆಚ್ಚು ವಿಕೆಟ್: ಟೆಸ್ಟ್ ಪಂದ್ಯವೊಂದರ ಮೊದಲ ದಿನವೇ 20ಕ್ಕಿಂತ ಹೆಚ್ಚು ವಿಕೆಟ್‌ಗಳು ಪತನವಾದದ್ದು ಇದೇ ಮೊದಲಲ್ಲ. ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ತಂಡಗಳು 1902ರಲ್ಲಿ ಮೆಲ್ಬರ್ನ್ ಅಂಗಳದಲ್ಲಿ ಮುಖಾಮುಖಿಯಾಗಿದ್ದಾಗ ಮೊದಲ ದಿನವೇ 25 ವಿಕೆಟ್‌ಗಳು ಪತನವಾಗಿದ್ದವು. 1890ರಲ್ಲಿ ಈ ತಂಡಗಳೇ ಇಂಗ್ಲೆಂಡ್‌ನ 'ದಿ ಓವಲ್' ಕ್ರೀಡಾಂಗಣದಲ್ಲಿ ಕಣಕ್ಕಿಳಿದಿದ್ದಾಗ 22 ವಿಕೆಟ್‌ಗಳು ಉರುಳಿದ್ದವು. 1951ರಲ್ಲಿ ಆಸ್ಟ್ರೇಲಿಯಾ ಮತ್ತು ವೆಸ್ಟ್ ಇಂಡೀಸ್ ತಂಡಗಳು ಅಡಿಲೇಡ್‌ನಲ್ಲಿ ಸೆಣಸಾಡಿದ್ದಾಗಲೂ ಇಷ್ಟೇ(22) ವಿಕೆಟ್‌ಗಳು ಬಿದ್ದಿದ್ದವು. ಒಟ್ಟಾರೆ ಟೆಸ್ಟ್ ಪಂದ್ಯದ ಯಾವುದೇ ದಿನದಲ್ಲಿ ಹೆಚ್ಚು ವಿಕೆಟ್ ಉರುಳಿದ್ದು, 1888ರ ಲಾರ್ಡ್ ಟೆಸ್ಟ್‌ನಲ್ಲಿ. ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ತಂಡಗಳು ಸೆಣಸಾಟ ನಡೆಸಿದ್ದ ಆ ಪಂದ್ಯದ ಎರಡನೇ ದಿನ ಒಟ್ಟು 27 ವಿಕೆಟ್‌ಗಳು ಪತನವಾಗಿದ್ದವು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೊಡಗಿನ ಕುರುಬ ಜನಾಂಗದವರಿಗೆ ಜಾತಿ, ಸಿಂಧುತ್ವ ಪ್ರಮಾಣಪತ್ರ ಸಕಾಲದಲ್ಲಿ ಕಲ್ಪಿಸಲು ಸರ್ಕಾರ ಆದೇಶ

ಬೆಂಗಳೂರು,ಜ.3–ಕೊಡಗಿನ ಕುರುಬ ಜನಾಂಗ, ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಯ ಗೊಂಡ, ರಾಜ ಗೊಂಡ, ಕಾಡುಕುರುಬ ಜನಾಂಗದವರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವ ಪ್ರಮಾಣಪತ್ರವನ್ನು ಸಕಾಲದಲ್ಲಿ ನೀಡಲು ಕ್ರಮ ಕೈಗೊಳ್ಳಬೇಕೆಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಉಪ ಕಾರ್ಯದರ್ಶಿ ಎಂ.ಎಸ್. ಜ್ಯೋತಿ ಸುತ್ತೋಲೆ ಹೊರಡಿಸಿದ್ದಾರೆ.

ಜಾತಿ ಮತ್ತು ಸಿಂಧುತ್ವ ಪ್ರಮಾಣ ಪತ್ರಗಳ ಬಗ್ಗೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ಸುಮೋಟೊ ಪ್ರಕರಣಗಳನ್ನು ದಾಖಲಿಸಿಕೊಂಡು ವಿಚಾರಣೆ ಮಾಡಬಾರದು. ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು ವಹಿಸಿದ ಪ್ರಕರಣಗಳು ಹಾಗೂ ದೂರುಗಳು ಬಂದಲ್ಲಿ ಮಾತ್ರ ವಿಚಾರಣೆ ಮಾಡತಕ್ಕದ್ದು ಎಂದು ಅವರು ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳ ಅದ್ಯಕ್ಷತೆಯ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಲ್ಲಿ ಬಾಕಿ ಇರುವ ಜಾತಿ, ಸಿಂಧುತ್ವ ಪ್ರಮಾಣಪತ್ರ ಪ್ರಕರಣಗಳನ್ನು ನಿಗದಿಪಡಿಸಿದ ಅವಧಿಯೊಳಗೆ ವಿಲೇವಾರಿ ಮಾಡತಕ್ಕದ್ದು. ಈಗಾಗಲೇ ಸರ್ಕಾರ ಹೊರಡಿಸಿರುವ ಸುತ್ತೋಲೆ, ಅಧಿಸೂಚನೆಗಳ ಪ್ರಕಾರ ಅಭ್ಯರ್ಥಿಗಳು ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿ, ಸ್ಥಳೀಯವಾಗಿ ವಿಚಾರಣೆ, ಮಹಜರ್ ಮಾಡಿ ಶಾಲಾ ದಾಖಲಾತಿಗಳಲ್ಲಿ ಈ ಜಾತಿಗಳ ಬಗ್ಗೆ ನಮೂದಾಗಿದ್ದರೆ ಅದನ್ನು ಸಾಕ್ಷ್ಯವೆಂದು ಪರಿಗಣಿಸತಕ್ಕದ್ದು.

ಸರ್ಕಾರಿ ಉದ್ಯೋಗಗಳಿಗೆ ಜಾತಿ ಮತ್ತು ಆದಾಯ ಸಿಂಧುತ್ವ ಪ್ರಮಾಣ ಪತ್ರ ನೀಡುವಾಗ ತಹಸೀಲ್ದಾರರು ನೀಡಿದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ನೈಜತೆ ಪರಿಶೀಲನೆಗಾಗಿ ಸರ್ಕಾವು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಲ್ಲಿ ಮಂಡಿಸಿ ನಿಯಮಾನುಸಾರ ಇತ್ಯರ್ಥಪಡಿಸಬೇಕು. ಒಂದು ವೇಳೆ ಜಾತಿ ಸಿಂಧುತ್ವ ಪ್ರಮಾಣಪತ್ರ ನೀಡಲು ಅರ್ಹರಿಲ್ಲದೆ ಯಾವ ಕಾರಣದ ಮೇಲೆ ತಿರಸ್ಕರಿಸಲಾಗುತ್ತಿದೆ ಎಂಬ ಬಗ್ಗೆ ವಿವರವಾದ ಆದೇಶವನ್ನು ಹೊರಡಿಸತಕ್ಕದ್ದು. ಶಾಲಾ ದಾಖಲಾತಿಗಳಲ್ಲಿ ಈ ಮೊದಲೇ ಜೇನುಕುರುಬ, ಕಾಡು ಕುರುಬ, ಗೊಂಡ, ರಾಜಗೊಂಡ ಎಂದು ನಮೂದಿಸಿದ್ದರೆ ಅಂತಹ ವಿಷಯವನ್ನು ಅವರು ಪಡೆಯಲಿಚ್ಛಿಸುವ ಜಾತಿಗೆ ಸೇರಿದವರು ಎಂಬ ಬಗ್ಗೆ ಸಾಕ್ಷ್ಯವೆಂದು ಪರಿಗಣಿಸತಕ್ಕದ್ದು ಎಂದು ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ರಸ್ತೆಗಳಲ್ಲಿ ದವಸ, ಧಾನ್ಯ ಒಕ್ಕಣೆ; ಅವಘಡಗಳ ಆತಂಕ

ರೈತರಿಗೆ ಪರಿಸ್ಥಿತಿ ಮನವರಿಕೆ ಮಾಡಿಕೊಡಲು ಪೋಲೀಸರ ನಿರ್ಧಾರ

ಮೈಸೂರು, ಜ.3(ಎಸ್‌ಪಿಎನ್)– ಪ್ರತಿ ವರ್ಷ ಡಿಸೆಂಬರ್, ಜನವರಿ ತಿಂಗಳಲ್ಲಿ ಗ್ರಾಮೀಣ ಪ್ರದೇಶದ ರಸ್ತೆಗಳಲ್ಲಿ ದವಸ ಧಾನ್ಯಗಳ 'ಒಕ್ಕಣೆ' ಮಾಡುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಇದರಿಂದ ಅಪಘಾತಗಳು ಹೆಚ್ಚಾಗುತ್ತಿವೆ.

ಈ ಕುರಿತು ಗ್ರಾಪಂ ಮಟ್ಟದಲ್ಲಿ ಸಂಚಾರ ನಿಯಮ ಉಲ್ಲಂಘನೆ ಕುರಿತು ರೈತರಲ್ಲಿ ಮೊದಲು ಜಾಗೃತಿ ಮೂಡಿಸಿ, ನಂತರ ಕಾನೂನು ಕ್ರಮ ಕೈಗೊಳ್ಳಬೇಕಿತ್ತು. ಆದರೆ, ಈ ವಿಷಯದಲ್ಲಿ ಮೈಸೂರು ಜಿಲ್ಲಾ ಪೊಲೀಸರು ವಿಫಲರಾಗಿದ್ದಾರೆ ಎಂದು ವಾಹನ ಸವಾರರು ಆರೋಪಿಸುತ್ತಿದ್ದಾರೆ.

ಮತ್ತೊಂದೆಡೆ ಒಕ್ಕಣೆ ಮಾಡವಾಗ ರಸ್ತೆಗಳಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸುವುದು ತಪ್ಪು. ಆದರೆ, ಈ ಕುರಿತು ರೈತರಲ್ಲಿ ಮೊದಲು ಜಾಗೃತಿ ಮೂಡಿಸಿ, ನಂತರ ಸಂಚಾರಿ ನಿಯಮದಡಿ ಕಾನೂನು ಕ್ರಮ ಜರುಗಿಸುವಂತೆ ರೈತರು ಮುಖಂಡರು ಪೊಲೀಸರಲ್ಲಿ ಮನವಿ ಮಾಡಿದ್ದಾರೆ.

ವರ್ಷದ ಕೊನೆ ಒಕ್ಕಣೆ ಕಾಲ: ಡಿಸೆಂಬರ್, ಜನವರಿ ತಿಂಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಒಕ್ಕಣೆ ಕಾಲ. ರೈತರು ತಮ್ಮ ತಮ್ಮ ಜಮೀನುಗಳಲ್ಲಿ ಬೆಳೆದ ಬೆಳೆಗಳನ್ನು ವಿಂಗಡಿಸಲು ಕೃಷಿ ಕಾರ್ಮಿಕರ ಕೊರತೆಯಿಂದಾಗಿ ನೇರವಾಗಿ ಹೈವೇಗಳಲ್ಲಿ ಹರಡಿ, ಒಕ್ಕಣೆಗೆ ಮುಂದಾಗುತ್ತಿದ್ದಾರೆ. ಇದರಿಂದ ಒಂದು ಊರಿನಿಂದ ಮತ್ತೊಂದು ಊರಿಗೆ ತಮ್ಮ ವಾಹನಗಳಲ್ಲಿ ತೆರಳಲು ಮುಂದಾಗುವ ವಾಹನ ಸವಾರರಿಗೆ, ಸಾಕಷ್ಟು ತೊಂದರೆಯಾಗುತ್ತಿದೆ.



ಹೈವೇಗಳಲ್ಲಿ ರೈತರು ಒಕ್ಕಣೆ ಮಾಡುವುದನ್ನು ಅರಿಯದ ವಾಹನ ಸವಾರರು, ತಮ್ಮ ವಾಹನವನ್ನು ಕಂಟ್ರೋಲ್‌ಗೆ ತರಲಾಗದೇ ಬಿದ್ದು, ಅಪಘಾತಗಳಾಗಿರುವ ಘಟನೆ ಹೆಚ್ಚಾಗುತ್ತಿವೆ. ಈ ಕುರಿತು ಠಾಣೆಗಳಲ್ಲಿ ವಾಹನ ಸವಾರರು, ದೂರು ದಾಖಲಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ವಾಹನ ಸವಾರ ಆನಂದ 'ಮೈಸೂರು ಮಿತ್ರ'ನಲ್ಲಿ ಅವಲತ್ತುಕೊಂಡರು. ಮೈಸೂರು ನಗರ ಹೊರವಲಯ, ಮೈಸೂರು ತಾಲೂಕು, ಹೆಚ್.ಡಿ.ಕೋಟೆ, ನಂಜನಗೂಡು, ಪಿರಿಯಾಪಟ್ಟಣ, ತಿ.ನರಸೀಪುರ, ಬನ್ನೂರು, ಹುಲ್ಲಹಳ್ಳಿ ಮಾರ್ಗದ ರಸ್ತೆಗಳಲ್ಲಿ ಅವಘಡಗಳ ಬಗ್ಗೆ ತಿಳಿದಿದ್ದರೂ ರೈತರು ಒಕ್ಕಣೆಗೆ ಮುಂದಾಗುತ್ತಾರೆ. ಅದೇ ರೀತಿ ಹೈವೇಗಳಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಗುವ 'ಒಕ್ಕಣೆ' ಪ್ರಕರಣಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ಮುಂದಾಗುತ್ತಿಲ್ಲ ಎಂಬುದು ವಾಹನ ಸವಾರರು ಅಳಲು.

> “ಗ್ರಾಮೀಣ ಪ್ರದೇಶದ ರಸ್ತೆಗಳಲ್ಲಿ ಒಕ್ಕಣೆ ಮಾಡುವವರ ಸಂಖ್ಯೆ ದಿನೇದಿನೆ ಹೆಚ್ಚಾಗುತ್ತಿದೆ. ಅಲ್ಲದೆ, ಇದರ ಜೊತಗೆ ವಾಹನ ಅವಘಡಗಳ ಸಂಖ್ಯೆಯೂ ಹೆಚ್ಚಾಗುತ್ತಿವೆ. ಈ ಕುರಿತು ರೈತರಲ್ಲಿ ಮೊದಲು ಜಾಗೃತಿ ಮೂಡಿಸುತ್ತೇವೆ.
> **–ನಂದಿನಿ, ಅಪರ ವರಿಷ್ಠಾಧಿಕಾರಿ**

ಮೊದಲು ಜಾಗೃತಿ, ನಂತರ ಕ್ರಮ: ಈ ಹಿಂದೆ ರಾಜ್ಯ ಸರ್ಕಾರ ಎಪಿಎಂಸಿ ವತಿಯಿಂದ ಸರ್ಕಾರಿ ಜಾಗಗಳಲ್ಲಿ ರೈತರಿಗೆ ಕಣಗಳನ್ನು ಮಾಡಿಕೊಡುತ್ತಿತ್ತು. ಈ ಕಣಗಳಲ್ಲಿ ಕೆಲ ರೈತರು ಒಕ್ಕಣೆ ಮಾಡಿಕೊಳ್ಳುತ್ತಿದ್ದರು. ಆದರೆ, ಇತ್ತೀಚೆಗೆ ಕಾಮಗಾರಿ ಕಳಪೆಯಾಗಿದ್ದರಿಂದ ಇವು ಸಂಪೂರ್ಣ ಹಾಳಾಗಿವೆ. ಅಲ್ಲದೆ, ಇತ್ತೀಚಿನ ದಿನಗಳಲ್ಲಿ ಕೃಷಿ ಕಾರ್ಮಿಕರ ಕೊರತೆಯಿಂದಾಗಿ ರೈತರು ರಸ್ತೆಗಳಲ್ಲಿ ತಾವು ಬೆಳೆದ ಬೆಳೆಯನ್ನು ಹಾಕಿ ಒಕ್ಕಣೆ ಮಾಡಿಕೊಳ್ಳುತ್ತಿದ್ದಾರೆ.

> “ರೈತರು, ರಸ್ತೆಗಳಲ್ಲಿ ಒಕ್ಕಣೆ ಮಾಡುವುದು ತಪ್ಪು. ಆದರೆ, ಇದಕ್ಕೆ ಸರ್ಕಾರ ಪರ್ಯಾಯ ವ್ಯವಸ್ಥೆ ಕಲ್ಪಿಸದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ರಸ್ತೆಗಿಳಿದಿದ್ದಾರೆ. ರಸ್ತೆಗಳಲ್ಲಿ ರೈತರು ಒಕ್ಕಣೆ ಮಾಡುತ್ತಿರುವುದರಿಂದ ವಾಹನ ಸವಾರರಿಗೆ ಆಗುವ ತೊಂದರೆಗಳ ಕುರಿತು ಜಾಗೃತಿ ಮೂಡಿಸಿ, ನಂತರ ಕಾನೂನು ಕ್ರಮ ಕೈಗೊಳ್ಳುವುದು ಉತ್ತಮ.
> **–ಕುರುಬೂರು ಶಾಂತಕುಮಾರ್, ರಾಜ್ಯಾಧ್ಯಕ್ಷ, ಕಬ್ಬು ಬೆಳೆಗಾರರ ಸಂಘ.**

ರೈತರು ಈ ರೀತಿ ಮಾಡುವುದು ತಪ್ಪು. ವಾಹನ ಸವಾರರಿಗೆ ತೊಂದರೆ ಕೊಟ್ಟು, ಹೈವೇಗಳಲ್ಲಿ ಒಕ್ಕಣೆ ಮಾಡದಂತೆ ಗ್ರಾಮ ಪಂಚಾಯಿತಿಗಳ ಮೂಲಕ ಪೊಲೀಸರು ರೈತರಲ್ಲಿ ಜಾಗೃತಿ ಮೂಡಿಸಿ, ನಂತರ ಸಂಚಾರಕ್ಕೆ ಅಡ್ಡಿಪಡಿಸಿ, 'ಒಕ್ಕಣೆ' ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸುವುದು ಉತ್ತಮ ಎಂದು ರೈತ ಮುಖಂಡ ಅತ್ತಹಳ್ಳಿ ದೇವರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪೆಟ್ರೋಲ್, ಡೀಸೆಲ್ ದರ ಇಳಿಕೆ ಇಲ್ಲ

ನವದೆಹಲಿ: ಪ್ರಸ್ತುತ ಜಾಗತಿಕ ತೈಲ ಮಾರುಕಟ್ಟೆಯು ಬಿಕ್ಕಟ್ಟಿಗೆ ಸಿಲುಕಿದೆ. ಹಾಗಾಗಿ, ಪೆಟ್ರೋಲ್ ಮತ್ತು ಡೀಸೆಲ್ ಕಡಿತಗೊಳಿಸುವ ಯಾವುದೇ ಪ್ರಸ್ತಾವವು ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಚ್ಚಾ ತೈಲ ದರಕ್ಕೆ ಸಂಬಂಧಿಸಿದಂತೆ ನಾವು ಪ್ರಕ್ಷುಬ್ಧ ಎದುರಿಸುತ್ತಿದ್ದೇವೆ. ಹಾಗಾಗಿ, ಇಂಧನ ಬೆಲೆ ಇಳಿಕೆಗೆ ಸಂಬಂಧಿಸಿದಂತೆ ತೈಲ ಮಾರಾಟ ಕಂಪನಿಗಳ ಜೊತೆಗೆ ಸರ್ಕಾರ ಯಾವುದೇ ಚರ್ಚೆ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದರು.

ಷೇರು ಮಾರುಕಟ್ಟೆಯಲ್ಲಿ ಹಿಂದೂಸ್ಥಾನ್ ಪೆಟ್ರೋಲಿಯಂ ಕಂಪನಿಯ ಷೇರು ಶೇ.3.24, ಇಂಡಿಯನ್ ಆಯಿಲ್ ಕಾರ್ಪೋರೇಷನ್ ಶೇ.1.8 ಹಾಗೂ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಷೇರಿನ ಮೌಲ್ಯದ ಶೇ 1.07ರಷ್ಟು ಏರಿಕೆಯಾಗಿದೆ ಎಂದರು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿತವಾಗಲಿದೆ ಎಂದು ವದಂತಿಯಿಂದಾಗಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ಷೇರುಗಳು ಕೆಲವು ದಿನಗಳಿಂದ ಒತ್ತಡಕ್ಕೆ ಸಿಲುಕಿವೆ ಎಂದರು.

ದೈನಂದಿನ ಲೆಕ್ಕಾಚಾರದಲ್ಲಿ ಇಂಧನದ ಬೆಲೆ ಇಳಿಸುವ ಅವಕಾಶವನ್ನು ಕಂಪನಿಗಳಿಗೆ ನೀಡಲಾಗಿದೆ. ಕಳೆದ 21 ತಿಂಗಳಿನಿಂದಲೂ ಈ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ ಎಂದು ಹೇಳಿದರು.


ಪಿಎಂ ಕುಸುಮ್–ಸಿ ಯೋಜನೆ ಅನುಷ್ಠಾನ ಕುರಿತು ಸಚಿವರು, ಅಧಿಕಾರಿಗಳೊಂದಿಗೆ ಸಿಎಂ ಸಭೆ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಇಂಧನ ಸಚಿವ ಕೆ.ಜೆ.ಜಾರ್ಜ್, ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ರಾಜ್ಯದ ರೈತರ ವಿದ್ಯುತ್ ಬೇಡಿಕೆಗಳನ್ನು ಪೂರೈಸಲು ಪಿಎಂ–ಕುಸುಮ್–ಸಿ ಯೋಜನೆಯಡಿ ನೀರಾವರಿ ಪಂಪ್ ಸೆಟ್‌ಗಳ ಸೋಲಾರೈಸೇಶನ್ ಕುರಿತು ಚರ್ಚಿಸಿದರು.

PM-KUSUM-C ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಯೋಜನೆಯಾಗಿದ್ದು, ಅಸ್ತಿತ್ವದಲ್ಲಿರುವ ಗ್ರಿಡ್ ಸಂಪರ್ಕಿತ ಕೃಷಿ ಪಂಪ್ ಸೆಟ್‌ಗಳಿಗೆ ಸೋಲಾರ್ ಅಳವಡಿಸುವ ಗುರಿ ಹೊಂದಿದೆ.


ಅಧಿಕೃತ ಹೇಳಿಕೆ ಪ್ರಕಾರ, ಇಂಧನ ಸಚಿವ ಕೆ.ಜೆ. ಜಾರ್ಜ್ ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಫೀಡರ್ ಸೋಲಾರೈಸೇಶನ್ ಯೋಜನೆಯನ್ನು ಅನುಷ್ಠಾನಗೊಳಿಸಲು ಇಂಧನ ಇಲಾಖೆಗೆ ವಿದ್ಯುತ್ ಸಬ್‌ಸ್ಟೇಷನ್‌ಗಳ ಸಮೀಪವಿರುವ ಸರ್ಕಾರಿ ಭೂಮಿಯನ್ನು ಗುತ್ತಿಗೆ ನೀಡಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡುವ ಬಗ್ಗೆ ಚರ್ಚಿಸಲಾಗಿದೆ. ಸಭೆಯ ನಂತರ ಸಚಿವ ಜಾರ್ಜ್, 2023–24ನೇ ಸಾಲಿನ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಲಿಮಿಟೆಡ್‌ನಿಂದ ಮೂರು ಕೋಟಿ ರೂ.ಗಳ ಚೆಕ್ ಅನ್ನು ಹಸ್ತಾಂತರಿಸಿದರು.



ಮೈಸೂರಿನ ಡಾ.ರಾಜ್, ಶಿವ ಸೈನ್ಯ, ಶಿವರಾಜ್‌ಕುಮಾರ್ ಅಭಿಮಾನಿ ಸಂಘದ 10ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹೊರತಂದಿರುವ 2024ರ ಸಾಲಿನ ಕ್ಯಾಲೆಂಡರ್ ಅನ್ನು 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ ಅವರು ಬುಧವಾರ ಬಿಡುಗಡೆಗೊಳಿಸಿದರು. ಚಿತ್ರದಲ್ಲಿ ಚಿತ್ರನಟ ಸೋಮಣ್ಣ, ಉದ್ಯಮಿ ಬಾಲಾಜಿ ಶೇಖರ್, ಸಂಘದ ಅಧ್ಯಕ್ಷ ಬಿ.ಎಸ್.ರವಿ, ಪದಾಧಿಕಾರಿಗಳಾದ ದೊರೈಸ್ವಾಮಿ, ಬಿ.ಎಸ್.ಮಹೇಶ್, ಶಿವು ಇನ್ನಿತರರಿದ್ದಾರೆ.

ಜ.15ರಂದು ಬುಡಕಟ್ಟು ಸಮುದಾಯದ ಪ್ರತಿನಿಧಿಗಳೊಂದಿಗೆ ಮೋದಿ ವಿಡಿಯೋ ಕಾನ್ಫರೆನ್ಸ್

ಮೈಸೂರು, ಜ.3(ಎಂಟಿವೈ)– ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಅಭಿಯಾನ (ಪಿಎಂ ಜನ್ ಮನ್) ಕಾರ್ಯಕ್ರಮದ ಅಂಗವಾಗಿ ಜ.15ರಂದು ದೇಶದ 18 ರಾಜ್ಯಗಳು ಹಾಗೂ 1 ಕೇಂದ್ರಾಡಳಿತ ಪ್ರದೇಶದ ನೈಜ ದುರ್ಬಲ ಬುಡಕಟ್ಟು ಗುಂಪಿಗೆ ಸೇರಿದ ಸಮುದಾಯಗಳ ಪ್ರತಿನಿಧಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ವಿಡಿಯೋ ಕಾನ್ಫರೆನ್ಸ್ ಮೂಲಕ ನೇರ ಸಂವಾದ ನಡೆಸಲಿದ್ದಾರೆ ಎಂದು ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಎಲ್.ಶ್ರೀನಿವಾಸ್ ತಿಳಿಸಿದರು.



ನರೇಂದ್ರ ಮೋದಿ

ಮೈಸೂರಿನ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯಗಳ ಸ್ಥಿತಿಗತಿ ಕುರಿತಂತೆ ಮಾಹಿತಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, 2011ರ ಜನಗಣತಿ ಪ್ರಕಾರ ದೇಶದಲ್ಲಿ 700ಕ್ಕೂ ಹೆಚ್ಚು ಪರಿಶಿಷ್ಟ ವರ್ಗದ ಸಮುದಾಯದ 10.45 ಕೋಟಿ ಜನಸಂಖ್ಯೆ ಇದೆ. ಇವುಗಳಲ್ಲಿ 75 ಬುಡಕಟ್ಟು ಸಮುದಾಯಗಳನ್ನು ನೈಜ, ದುರ್ಬಲ ಬುಡಕಟ್ಟು ಎಂದು ಗುರುತಿಸಲಾಗಿದೆ. 7 ಲಕ್ಷ ಕುಟುಂಬಗಳು ದೇಶದ 200 ಜಿಲ್ಲೆಗಳ 22 ಸಾವಿರ ಹಾಡಿಗಳಲ್ಲಿ, ಕಾಡು ಮತ್ತು ಕಾಡಂಚಿನಲ್ಲಿರುವ ವಾಸಿಸುತ್ತಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರು ಈ ಸಮುದಾಯದವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದೆ. ಈ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದ್ದು, 9 ವಿವಿಧ ಇಲಾಖೆಗಳ ಮೂಲಕ 11 ರೀತಿಯ ಅಗತ್ಯ ಮೂಲ ಸೌಲಭ್ಯಗಳಾದ ಶಾಶ್ವತ ಮನೆ, ಹಾಡಿಗಳಿಗೆ ಸಂಪರ್ಕ ರಸ್ತೆ, ಕುಡಿ ಯುವ ನೀರು, ಸಂಚಾರಿ ಆರೋಗ್ಯ ಘಟಕ ಅಂಗನವಾಡಿ ಕೇಂದ್ರಗಳು, ವಿದ್ಯುತ್ ಸಂಪರ್ಕ, ಶಾಲೆ, ಹಾಸ್ಟೆಲ್ ಕಟ್ಟಡಗಳು, ಮೊಬೈಲ್ ಟವರ್ಸ್ ಕೌಶಾಲ್ಯಾಭಿವೃದ್ಧಿ ತರಬೇತಿ ಸೌಲಭ್ಯಗಳನ್ನು ಒದಗಿಸಲು 24.104 ಕೋಟಿ ರೂ. ಮೀಸಲಿರಿಸಿದೆ. ಇದರಲ್ಲಿ ಕೇಂದ್ರ ಸರ್ಕಾರ ರೂ. 15.104 ಕೋಟಿ ಹಾಗೂ ರಾಜ್ಯ ಸರ್ಕಾರದ ಪಾಲು 8 ಸಾವಿರ ಕೋಟಿ ಆಗಿರುತ್ತದೆ ಎಂದರು.

> ಕರ್ನಾಟಕ ರಾಜ್ಯದ ಜೇನು, ಕುರುಬ ಮತ್ತು ಕೊರಗ ಸಮುದಾಯದವರಿಗೆ ಎಲ್ಲಾ ಅಗತ್ಯ ದಾಖಲೆಗಳಾದ ಆಧಾರ್ ಕಾರ್ಡ್, ಆಯುಷ್ಮಾನ್ ಕಾರ್ಡ್, ಪಡಿತರ ಚೀಟಿ, ಜಾತಿ, ಆಧಾಯ ಪ್ರಮಾಣ ಪತ್ರ, ಪ್ರಧಾನಮಂತ್ರಿಗಳ ಕಿಸ್ಸಾನ್ ಸಮ್ಮಾನ್, ವಿಧವಾವೇತನ, ವೃದ್ಧಾಪ್ಯ ವೇತನದಂತಹ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ದೊರಕುವಂತೆ ಮಾಡುವ ಗುರಿಯೊಂದಿಗೆ ಮೂಲ ದಾಖಲಾತಿಗಳ ನೋಂದಣಿ ಕಾರ್ಯಕ್ರಮದ ಅಭಿಯಾನ ಪ್ರಾರಂಭವಾಗಿದ್ದು, ಸಂಬಂಧಪಟ್ಟ ಇಲಾಖೆಗಳು ಕ್ಷೇತ್ರ ಅಧ್ಯಯನ ನಡೆಸಿದ್ದಾರೆ. ಈ ಕಾರ್ಯಕ್ರಮದ ಸದುಪಯೋಗವನ್ನು ರಾಜ್ಯದ ನೈಜ ದುರ್ಬಲ ಬುಡಕಟ್ಟು ಸಮುದಾಯಗಳು ಉಪಯೋಗಿಸಿಕೊಳ್ಳಿ
> **–ಡಾ.ಎಲ್.ಶ್ರೀನಿವಾಸ್**

ಈ ಸಂದರ್ಭದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಪ್ರಭಾ ಅರಸ್ ಉಪಸ್ಥಿತರಿದ್ದರು.

ಫೆಬ್ರವರಿ 29ರಿಂದ ಮಾರ್ಚ್ 7ರವರೆಗೆ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

ಬೆಂಗಳೂರು: ಫೆಬ್ರವರಿ 29ರಿಂದ ಮಾರ್ಚ್ 7ರವರೆಗೆ 15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಗೃಹ ಕಚೇರಿ ಕೃಷ್ಣದಲ್ಲಿ ನಡೆದ ಸಭೆಯಲ್ಲಿ 15ನೇ ಬೆಂಗಳೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ದಿನಾಂಕ ಘೋಷಣೆ ಮಾಡಲಾಗಿದೆ.

ಫೆಬ್ರವರಿ 29ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಲನಚಿತ್ರೋತ್ಸವಕ್ಕೆ ಚಾಲನೆ ನೀಡಲಿದ್ದು, ಮಾರ್ಚ್ 1ರಿಂದ ಮಾರ್ಚ್ 7ರವರೆಗೆ ಸಿನಿಮಾಗಳ ಪ್ರದರ್ಶನ ನಡೆಯಲಿದೆ. ಸಭೆ ಬಳಿಕ ಮಾತನಾಡಿದ ಸಿಎಂ, 'ನನ್ನ ಅಧ್ಯಕ್ಷತೆಯಲ್ಲಿ ಇಂದು ಅಂತರಾಷ್ಟ್ರೀಯ ಚಲನ ಚಿತ್ರೋತ್ಸವ ಸಂಘಟನಾ ಸಮಿತಿ ಸಭೆ ನಡೆದಿದೆ, ಫೆಬ್ರವರಿ 29ರಿಂದ ಮಾರ್ಚ್ 7ವರೆಗೂ ಚಲನಚಿತ್ರೋತ್ಸವ ನಡೆಸಲು ತೀರ್ಮಾನ ಮಾಡಿದ್ದೇವೆ. ಇದು 15ನೇ ಆವೃತ್ತಿ ಆಗಿದೆ. ನಿಯಮದಂತೆ ಸಿಎಂ ಉದ್ಘಾಟನೆ ಮಾಡಲಿದ್ದಾರೆ. ದೇಶ ವಿದೇಶಗಳಲ್ಲಿ ಈ ಚಲನಚಿತ್ರೋತ್ಸವ ಮನ್ನಣೆ ಪಡೆದಿದೆ, ವಿಧಾನಸೌಧ ಮುಂಭಾಗ ಉದ್ಘಾಟನೆ ಮಾಡಲಾಗುತ್ತೆ, ಮಾರ್ಚ್ 7ನೇ ತಾರೀಖು ಸಮಾರೋಪ ಸಮಾರಂಭ ನಡೆಯುತ್ತೆ, ರಾಜ್ಯಪಾಲರು ಪ್ರಶಸ್ತಿಗಳನ್ನು ನೀಡುತ್ತಾರೆ. ಚಿತ್ರೋತ್ಸವ ಸಂಬಂಧ ಕೋರ್ ಕಮಿಟಿ ಮಾಡಿದ್ದೇವೆ. ವಿದೇಶದಿಂದ ಉತ್ತಮ ಚಿತ್ರಗಳನ್ನ ತರಿಸುತ್ತೇವೆ, ಕೋಮುವಾದ, ಸಮಾನತೆ, ಶಾಂತಿ ಸೌಹಾರ್ದತೆ ಬಗ್ಗೆ ಸಾರುವ ಚಿತ್ರಗಳ ಪ್ರದರ್ಶನ ನಡೆಯುತ್ತೆ' ಎಂದು ಮಾಹಿತಿ ನೀಡಿದರು.

ಪ್ರಾಧ್ಯಾಪಕಿ ಡಾ.ಶುಭಾ ಗೋಪಾಲ್ ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಜ.3(ಎಂಟಿವೈ)– ಪಿಹೆಚ್‌ಡಿ ಸಂಶೋಧನಾ ವಿದ್ಯಾರ್ಥಿನಿಯ ರೊಂದಿಗೆ ಅಸ್ಪೃಶ್ಯತೆ ಆಚರಿಸಿದ ಆರೋಪಕ್ಕೆ ಒಳಗಾಗಿರುವ ಮೈಸೂರು ವಿಶ್ವವಿದ್ಯಾನಿಲಯದ ಸೂಕ್ಷ್ಮ ಜೀವಶಾಸ್ತ್ರದ ಪ್ರಾಧ್ಯಾಪಕಿ ಡಾ.ಶುಭಗೋಪಾಲ್ ಅವರನ್ನು ಸೇವೆಯಿಂದ ವಜಾಗೊಳಿಸುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸೂಕ್ಷ್ಮ ಜೀವಶಾಸ್ತ್ರ ವಿಭಾಗದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ವಿದ್ಯಾರ್ಥಿಗಳು ಕ್ಲಾಕ್ ಟವರ್ ಬಳಿ ಮಾನವ ಸರಪಳಿ ರಚಿಸಿ ಆಕ್ರೋಶ ವ್ಯಕ್ತಪಡಿಸಿದರು.

ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ಶುಭಗೋಪಾಲ್ ಮಾರ್ಗದರ್ಶನದಲ್ಲಿ ಪಿಹೆಚ್.ಡಿ ಸಂಶೋಧನೆ ನಡೆಸುತ್ತಿರುವ ಸಂಶೋಧಕಿಯನ್ನು ಕೀಳಾಗಿ ನಡೆಸಿಕೊಳ್ಳುತ್ತಿದ್ದಾರೆ. ಜಾತಿ ಹೆಸರಿನಲ್ಲಿ ನಿಂದಿಸುತ್ತ ಶೋಷಿಸಿದ್ದಾರೆ. ಈ ಕುರಿತು ಹಲವು ಬಾರಿ ದೂರು ನೀಡಿರುವ ಸಂಶೋಧನ ವಿದ್ಯಾರ್ಥಿನಿಗೆ ನ್ಯಾಯ ದೊರೆತಿಲ್ಲ. ಬದಲಿಗೆ ವಿವಿಯ ಆಡಳಿತ ಮಂಡಳಿಯವರು ಮಾರ್ಗದರ್ಶಕರನ್ನು ಬದಲಿಸಿಕೊಳ್ಳುವಂತೆ ಸಲಹೆ ಕೊಟ್ಟಿದ್ದಾರೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಗಾಯಕ ಶೇಷಣ್ಣ ಕ್ರಾಂತಿ ಗೀತೆ ಹಾಡಿದರು. ವಿದ್ಯಾರ್ಥಿಗಳು ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ದಲಿತ ವಿದ್ಯಾರ್ಥಿ ಜಿಲ್ಲಾಧ್ಯಕ್ಷ ವಿಶ್ವಪ್ರಸಾದ್, ರಾಜ್ಯ ಸಂಶೋಧಕರ ವೇದಿಕೆ ರಾಜ್ಯಾಧ್ಯಕ್ಷ ರಾಜೇಶ್ ಚಾಕನಹಳ್ಳಿ, ಸಂಶೋಧಕರ ಸಂಘದ ಅಧ್ಯಕ್ಷ ಮಹೇಶ್, ದಲಿತ ವಿದ್ಯಾರ್ಥಿ ಒಕ್ಕೂಟದ ಸಚಿನ್, ಗೌರವಾಧ್ಯಕ್ಷ ಗಿರೀಶ್, ಕಾರ್ಯದರ್ಶಿ ನವೀನ್, ಸಂಶೋಧಕ ಗೌತಮ್ ಶಾಕ್ಯ ಇನ್ನಿತರರು ಪಾಲ್ಗೊಂಡಿದ್ದರು.

ಶೃತಿಗೆ ಪಿಎಚ್.ಡಿ ಪದವಿ



ಮೈಸೂರು, ಜ. 3–ಡಾ. ಪಿ.ಮಲ್ಲು ಅವರ ಮಾರ್ಗದರ್ಶನದಲ್ಲಿ ಎಸ್. ಶೃತಿ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ವಿವಿಧೆಡೆ ಪ್ರತ್ಯೇಕ ಅಪಘಾತ ಪ್ರಕರಣ: ಏಳು ಮಂದಿ ಸಾವು; ಹಲವರಿಗೆ ಗಾಯ

ಮೈಸೂರು, ಜ. 3– ಹೊಸ ವರ್ಷದಲ್ಲಿ ವಿವಿಧೆಡೆ ನಡೆದ ಅಪಘಾತಗಳಲ್ಲಿ 7 ಮಂದಿ ಮೃತಪಟ್ಟಿರುವುದಾಗಿ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ.

ಕೆಲಸದ ನಿಮಿತ್ತ ಡಿಸೆಂಬರ್ 31ರಂದು ಮಧ್ಯರಾತ್ರಿ 11.45ರ ಸುಮಾರಿನಲ್ಲಿ ಮೈಸೂರಿಗೆ ಆಗಮಿಸುತ್ತಿದ್ದ ಮಂಡ್ಯದ ಹುಲಿಕೆರೆ ಕೊಪ್ಪಲು ಗ್ರಾಮದ ಸಿ.ಆದರ್ಶ್(28) ಎಂಬುವರು ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ (ಕೆಎ 09–ಹೆಚ್‌ಕ್ಯೂ 6016) ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಹಳೇ ಟೋಲ್‌ಗೇಟ್ ಜಂಕ್ಷನ್ ಕಡೆಯಿಂದ ಜೆಎಸ್‌ಎಸ್ ಡೆಂಟಲ್ ಕಾಲೇಜ್ ಕಡೆಗೆ ಬರುತ್ತಿದ್ದಾಗ ಎದುರಿನಿಂದ ಬಂದ ಕಾರು (ಕೆಎ 55–ಎನ್ 1240) ಇವರ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಜ.1ರಂದು ರಾತ್ರಿ 10.30ರ ವೇಳೆ ಸುಮಾರಿನಲ್ಲಿ ಮೃತಪಟ್ಟಿದ್ದಾರೆ. ಈ ಸಂಬಂಧ ಎನ್‌ಆರ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಸವಾರ ಸಾವು: ಪಿರಿಯಾಪಟ್ಟಣ ಟೌನ್ ನಿವಾಸಿ ಕಲಿರಾಜು(18) ಅವರು ತಮ್ಮ ಸ್ನೇಹಿತರಾದ ಪೃಥ್ವಿ ಸಾಗರ್ (15) ಮತ್ತು ಕಿರಣ್‌ಕುಮಾರ್(20) ಅವರೊಂದಿಗೆ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕ್ (ಕೆಎ 45–ಕ್ಯೂ 6290)ನಲ್ಲಿ ಪಿರಿಯಾಪಟ್ಟಣ–ಸಿದ್ದಾಪುರ ರಸ್ತೆಯಲ್ಲಿ ಜ.2ರಂದು ಮುಂಜಾನೆ 2 ಗಂಟೆ ಸುಮಾರಿನಲ್ಲಿ ಬರುತ್ತಿದ್ದಾಗ ಎದುರುಗಡೆಯಿಂದ ಬಂದ ಅಶೋಕ ಲೈಲ್ಯಾಂಡ್ ವಾಹನ ಇವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಈ ಸಂದರ್ಭದಲ್ಲಿ ಅಶೋಕ ಲೆಲ್ಯಾಂಡ್ ವಾಹನವನ್ನು ಅದರ ಚಾಲಕ ನಿಲ್ಲಿಸದೇ ಪರಾರಿಯಾಗಿದ್ದಾನೆ. ಈ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಕಲಿರಾಜು ಮೃತಪಟ್ಟಿದ್ದು, ಆತನ ಸ್ನೇಹಿತರಾದ ಕಿರಣ್‌ಕುಮಾರ್ ಮತ್ತು ಪೃಥ್ವಿ ಸಾಗರ್ ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹೊಸ ವರ್ಷಾಚರಣೆ ಹಿಂದೆ–ಮುಂದೆ ನಡೆದ ದುರಂತಗಳು

ಕಾರು ಡಿಕ್ಕಿಯಾಗಿ ಬೈಕ್ ಸವಾರ ಸಾವು: ಚಾಮರಾಜನಗರ ಜಿಲ್ಲೆ ಹನೂರು ತಾಲೂಕು ಆರ್‌ಎಸ್ ದೊಡ್ಡಿ ನಿವಾಸಿ ಲೊಕ್ಕನಹಳ್ಳಿ ಗ್ರಾಮದ ಬೇಕರಿಯಲ್ಲಿ ಕೆಲಸ ಮಾಡುವ ಶ್ರೀನಿವಾಸ್(42) ಎಂಬುವರು ಡಿ. 31ರಂದು ರಾತ್ರಿ 7.35ರ ಸಮಯದಲ್ಲಿ ಲೊಕ್ಕನಹಳ್ಳಿಯಿಂದ ಆರ್‌ಎಸ್ ದೊಡ್ಡಿಗೆ ಬೈಕ್‌ನಲ್ಲಿ (ಕೆಎ 11–ಇಎ 4555) ತೆರಳುತ್ತಿದ್ದಾಗ ಆರ್‌ಎಸ್ ದೊಡ್ಡಿಯ ವಿವೇಕಾನಂದ ಶಾಲೆ ಬಳಿ ಇವರ ಬೈಕ್‌ಗೆ ಕಾರು (ಕೆಎ 05–ಎನ್‌ಹೆಚ್ 3717) ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡ ಅವರನ್ನು ಕಾಮಗೆರೆ ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಮೈಸೂರಿನ ಕೆಆರ್ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಅವರು ಜ.1ರಂದು ಮುಂಜಾನೆ 1 ಗಂಟೆ ಸುಮಾರಿನಲ್ಲಿ ಮೃತಪಟ್ಟಿದ್ದಾರೆ.

ಬೈಕ್‌ಗಳ ಅಪಘಾತದಲ್ಲಿ ಸಾವು: ಚಾಮರಾಜನಗರ ತಾಲೂಕು ಕಾಗಲವಾಡಿ ನಿವಾಸಿ ಮಹದೇವಸ್ವಾಮಿ(27), ಸ್ನೇಹಿತ ಪ್ರದೀಪ್‌ಕುಮಾರ್(21) ಅವರೊಂದಿಗೆ ಬೈಕ್‌ನಲ್ಲಿ (ಕೆಎ 45–ಎಸ್ 953) ಗುಂಡ್ಲುಪೇಟೆಯಿಂದ ತೆರಕಣಾಂಬಿಗೆ ಜ.1ರಂದು ರಾತ್ರಿ 11.20ರ ವೇಳೆಯಲ್ಲಿ ಬರುತ್ತಿದ್ದಾಗ ಎದುರುಗಡೆಯಿಂದ ಹೋಂಡಾ ಯೂನಿಕಾರ್ನ್ ಬೈಕ್‌ನಲ್ಲಿ (ಕೆಎ 10–ಇಎ 4329) ವೇಗವಾಗಿ ಬರುತ್ತಿದ್ದ ಕೊತ್ತಲವಾಡಿ ಗ್ರಾಮದ ಮಹದೇವಸ್ವಾಮಿ ಇವರ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾರೆ. ಇದರ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ ಮಹದೇವಸ್ವಾಮಿ ಮತ್ತು ಪ್ರದೀಪ್‌ಕುಮಾರ್ ಅವರನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಕೊತ್ತಲವಾಡಿ ಮಹದೇವಸ್ವಾಮಿ ಅಂದು ರಾತ್ರಿ 12.50ರಲ್ಲಿ ಮೃತಪಟ್ಟಿದ್ದಾರೆ. ಈ ಸಂಬಂಧ ತೆರಕಣಾಂಬಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕ್ರೈಂ ಬಾಕ್ಸ್

ಇಬ್ಬರಿಗೆ ಗಾಯ: ಚನ್ನಪಟ್ಟಣ ತಾಲೂಕು ಸಾಮಂದಿಪುರ ಗ್ರಾಮದ ಜಿ.ಮಂಜು ಅಲಿಯಾಸ್ ಮಂಜುನಾಥ(28) ಎಂಬುವರು ತಮ್ಮ ಪರಿಚಯಸ್ಥರಾದ ಮಹದೇವ(17) ಮತ್ತು ಎನ್.ಪಿ.ಸಂದೀಪ್(20) ಎಂಬುವರೊಂದಿಗೆ ಜ.1ರಂದು ಮಧ್ಯರಾತ್ರಿ 12.15ರ ಸುಮಾರಿನಲ್ಲಿ ಮಳವಳ್ಳಿಯಿಂದ ಸ್ವಗ್ರಾಮಕ್ಕೆ ಬೈಕ್‌ನಲ್ಲಿ (ಕೆಎ 42–ಇಬಿ 0085) ತೆರಳುತ್ತಿದ್ದಾಗ ಮಠದಹೊನ್ನನಾಯಕನಹಳ್ಳಿ ಬಳಿ ಇವರ ನಿಯಂತ್ರಣ ತಪ್ಪಿ ಬೈಕ್ ಬಿದ್ದ ಪರಿಣಾಮ ಅವರು ಸಾವನ್ನಪ್ಪಿದ್ದಾರೆ. ಹಿಂಬದಿ ಸವಾರರಾಗಿದ್ದ ಇಬ್ಬರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಈ ಸಂಬಂಧ ಕೆಎಂ ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂಲತಃ ಗುಂಡ್ಲುಪೇಟೆ ತಾಲೂಕು ಆಲತ್ತೂರು ಗ್ರಾಮದವರಾಗಿದ್ದು, ಹಾಲಿ ಶ್ರೀರಂಗಪಟ್ಟಣ ತಾಲೂಕು ಪಿ.ಹೊಸಹಳ್ಳಿ ನಿವಾಸಿಯಾಗಿದ್ದ ಎ.ಬಿ. ಮೂರ್ತಿ(50) ಸ್ಕೂಟರ್‌ನಲ್ಲಿ (ಕೆಎ 09–ಹೆಚ್‌ಹೆಚ್ 9781) ಜ. 1ರಂದು ರಾತ್ರಿ 9.15ರ ಸುಮಾರಿನಲ್ಲಿ ಮೈಸೂರು ಕಡೆಯಿಂದ ಪಿ.ಹೊಸಹಳ್ಳಿಗೆ ತೆರಳುತ್ತಿದ್ದಾಗ ಕೆಆರ್‌ಎಸ್ ಪಂಪ್‌ಹೌಸ್ ಬಳಿ ಮುಖ್ಯರಸ್ತೆಯಲ್ಲಿ ವೇಗವಾಗಿ ಬಂದ ಮತ್ತೊಂದು ಸ್ಕೂಟರ್ (ಕೆಎ 09–ಇಕ್ಯೂ 5360) ಇವರ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಜ.2ರಂದು ಬೆಳಗ್ಗೆ 5.30ಕ್ಕೆ ಮೃತಪಟ್ಟಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಡ್ಯ ತಾಲೂಕಿನ ಬಿ. ಯರಹಳ್ಳಿ ಗ್ರಾಮದ ವೈ.ಎಸ್. ದಿಲೀಪ್‌ಕುಮಾರ್ (45) ಎಂಬುವರು ಹಳೇ ಬೂದನೂರು ಗ್ರಾಮದ ಮೈಸೂರು–ಬೆಂಗಳೂರು ಸರ್ವಿಸ್ ರಸ್ತೆಯಲ್ಲಿ ಬಜಾಜ್ ಡಿಸ್ಕವರಿ ಬೈಕ್‌ನಲ್ಲಿ (ಕೆಎ 51–ಇಎಫ್ 8530) ತೆರಳುತ್ತಿದ್ದಾಗ ಹಿಂಬದಿಯಿಂದ ಬಂದ ಕ್ರೇಟಾ ಕಾರು (ಕೆಎ 11–ಎನ್ 9949) ಇವರ ಬೈಕ್‌ಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿ ಹೊಡೆದ ರಭಸಕ್ಕೆ ದಿಲೀಪ್‌ಕುಮಾರ್ ಸರ್ವಿಸ್ ರಸ್ತೆಯ ಸಿಮೆಂಟ್ ಚರಂಡಿ ಮೇಲೆ ಬಿದ್ದು ನಂತರ ಪಕ್ಕದ ಹಳ್ಳಕ್ಕೆ ಉರುಳಿ ದ್ದಾರೆ. ಚಾಲಕ ಕಾರನ್ನು ನಿಲ್ಲಿಸಿ ದಿಲೀಪ್‌ಕುಮಾರ್ ಅವರನ್ನು ನೋಡಲಾಗಿ, ಅವರು ಮೃತಪಟ್ಟಿರುವುದು ತಿಳಿದ ತಕ್ಷಣ ಕಾರು ಹತ್ತಿ ಪರಾರಿಯಾಗಿದ್ದಾನೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರಕ್ಕೆ ಗರುಡ ಡಿಕ್ಕಿ: ಇಬ್ಬರು ಪೊಲೀಸರಿಗೆ ಗಾಯ

ಮೈಸೂರು,ಜ.3–ಗರುಡ ವಾಹನ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಪೊಲೀಸರು ಗಾಯಗೊಂಡ ಘಟನೆ ಮೈಸೂರು–ಬನ್ನೂರು ರಸ್ತೆಯ ಭುಗತಗಳ್ಳಿ ಗೇಟ್ ಬಳಿ ಜ.2ರಂದು ಮುಂಜಾನೆ ಸಂಭವಿಸಿದೆ.

ಆಲನಹಳ್ಳಿ ಠಾಣೆಯ ಎಎಸ್‌ಐ ಮಂಜುನಾಥ್(52) ಮತ್ತು ಕಾನ್ಸ್‌ಟೇಬಲ್ ರೇವಣ್ಣ(37) ಅಪಘಾತದಲ್ಲಿ ಗಾಯಗೊಂಡವರಾಗಿದ್ದು, ಇವರು ಜ.1ರಂದು ಗರುಡ ವಾಹನದಲ್ಲಿ (ಕೆಎ 55–ಜಿ 0239) ರಾತ್ರಿ ಗಸ್ತು ತಿರುಗುತ್ತಿದ್ದರು. ಕಾನ್ಸ್‌ಟೇಬಲ್ ರೇವಣ್ಣ ವಾಹನ ಚಾಲನೆ ಮಾಡುತ್ತಿದ್ದರು. ಜ.2ರಂದು ಮುಂಜಾನೆ 2.30ರ ಸುಮಾರಿನಲ್ಲಿ ಬನ್ನೂರು ರಸ್ತೆಯ ಭುಗತಗಳ್ಳಿ ಗೇಟ್ ಬಳಿ ಗರುಡ ವಾಹನ ಬರುತ್ತಿದ್ದಾಗ ಬಿಡಾಡಿ ದನವೊಂದು ಅಡ್ಡ ಬಂದಿದೆ. ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ರೇವಣ್ಣ ಪ್ರಯತ್ನಿಸಿದಾಗ ನಿಯಂತ್ರಣ ತಪ್ಪಿದ ಗರುಡ ವಾಹನ ಮರಕ್ಕೆ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ವಾಹನದ ಮುಂಭಾಗದ ಗ್ಲಾಸ್ ಜಖಂಗೊಂಡಿದ್ದು, ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ. ಎಎಸ್‌ಐ ಮಂಜುನಾಥ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕಾನ್ಸ್‌ಟೇಬಲ್ ರೇವಣ್ಣ ಚಿಕಿತ್ಸೆ ಪಡೆದಿದ್ದಾರೆ. ಈ ಸಂಬಂಧ ಮೈಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

• ಹಿಂದೂ ಕಾರ್ಯಕರ್ತರ ಬಂಧನ • ಪ್ರತಿಭಟನಾಕಾರರ ಆರೋಪ



ಮಂಡ್ಯ, ಜ.3– ರಾಜ್ಯ ಸರ್ಕಾರ 31 ವರ್ಷದ ಪ್ರಕರಣವನ್ನು ಕೆದಕಿ ಹಿಂದೂ ಕಾರ್ಯಕರ್ತನನ್ನು ಬಂಧಿಸಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಬುಧವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಬಿಜೆಪಿ ವಿಕಾಸ ಭವನದ ಬಳಿ ಜಮಾಯಿಸಿದ ಕಾರ್ಯಕರ್ತರು, ಬೆಂಗಳೂರು–ಮೈಸೂರು ಹೆದ್ದಾರಿ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದರು. ರಾಮಮಂದಿರ ಕರಸೇವೆ ಹೋರಾಟದಲ್ಲಿ ಭಾಗಿಯಾಗಿದ್ದ ಹಿಂದೂ ಕಾರ್ಯಕರ್ತ ಶ್ರೀಕಾಂತ್ ಪೂಜಾರಿ ಅವರ ಬಂಧಿಸಲಾಗಿದೆ. ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ದೇಶದ ಕೋಟ್ಯಂತರ ಜನರ ಅಯೋಧ್ಯೆ ರಾಮಮಂದಿರ ನಿರ್ಮಾಣದ ಸಂಕಲ್ಪವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಈಡೇರಿಸಿದ್ದಾರೆ. ರಾಮಮಂದಿರ ಉದ್ಘಾಟನೆಗೆ ದಿನ ನಿಗದಿಯಾಗಿರುವ ವೇಳೆ ರಾಜ್ಯ ಸರ್ಕಾರ ಸುಮಾರು 31 ವರ್ಷದ ಹಳೆಯ ಕೇಸುಗಳನ್ನು ತೆಗೆದು ಹಿಂದೂಗಳನ್ನು ಬಂಧಿಸುತ್ತಿದೆ. ಜ.22ರಂದು ಅಯೋಧ್ಯೆಯಲ್ಲಿ ಭಗವಾನ್ ಶ್ರೀರಾಮನ ಪ್ರತಿಷ್ಠಾಪನೆ ಆಗುವ ಶುಭ ಸಂದರ್ಭದಲ್ಲಿ ಇಡೀ ದೇಶದಾದ್ಯಂತ ಕೋಟ್ಯಂತರ ಹಿಂದೂ ಕಾರ್ಯಕರ್ತರು ಸಂತಸದಲ್ಲಿದ್ದಾರೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಿಂದೂ ವಿರೋಧಿ ಸರ್ಕಾರ ಎಂದು ತೋರಿಸಿಕೊಟ್ಟಿದ್ದಾರೆ ಎಂದು ಆರೋಪಿಸಿದರು.

ಪದೇ ಪದೇ ಅಲ್ಪಸಂಖ್ಯಾತರನ್ನು ಓಲೈಸುವ ಕಾಂಗ್ರೆಸ್, ಬರಗಾಲದ ಸಂದರ್ಭದಲ್ಲೂ ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುತ್ತಿದೆ. ಇಡೀ ದೇಶದಲ್ಲಿ ಸಂಭ್ರಮ ಇರುವಾಗ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಿಂದೂಗಳ ಭಾವನೆಗೆ ಧಕ್ಕೆ ತರುವ ರೀತಿ ನಡೆದುಕೊಳ್ಳುತ್ತಿದೆ. ಇದಕ್ಕೆ ಮುಂದಿನ ದಿನಗಳಲ್ಲಿ ಮತದಾರರು ತಕ್ಕ ಉತ್ತರ ನೀಡಲಿದ್ದಾರೆ. ಅಯೋಧ್ಯೆಯ ಮಂತ್ರಾಕ್ಷತೆಯನ್ನು ದೇಶಾದ್ಯಂತ ಪ್ರತಿ ಮನೆಗೂ ತಲುಪಿಸಲಾಗುತ್ತಿದೆ. ಆದರೆ, ಆಯಾ ರಾಜ್ಯಗಳ ಕಾಂಗ್ರೆಸ್ ಸರ್ಕಾರ ಅಡ್ಡಿ ಮಾಡುತ್ತಿದೆ ಎಂದು ದೂರಿದರು.

ರಾಷ್ಟ್ರಮಟ್ಟದ ಕಾರ್ಯಕ್ರಮಕ್ಕೆ ಯಾವ ಆಹ್ವಾನವೂ ಬೇಡ. ಸಿದ್ದರಾಮಯ್ಯನವರಿಗೆ ಬದ್ಧತೆ, ಹಿಂದುತ್ವದ ಬಗ್ಗೆ ನೈಜ ಕಳಕಳಿ ಇದ್ದರೆ, ಜ.22ರಂದು ರಾಜ್ಯದ ಎಲ್ಲಾ ಮುಜರಾಯಿ ದೇವಾಲಯಗಳಲ್ಲಿ ವಿಶೇಷ ಪೂಜೆಗೆ ಸೂಚಿಸಬೇಕು. 100 ದೇವಾಲಯಗಳಿಗೆ ತಲಾ 100 ಕೋಟಿ ರೂ. ಅನುದಾನವನ್ನು ನೀಡಲಿ ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಡಾ.ಇಂದ್ರೇಶ್, ಅಶೋಕ್ ಜಯರಾಂ, ಮುನಿರಾಜು, ಎಸ್.ಪಿ. ಸ್ವಾಮಿ, ಇಂಡುವಾಳು ಸಚ್ಚಿದಾನಂದ, ಎಚ್.ಆರ್.ಅರವಿಂದ್, ಅಶೋಕ್, ವಿವೇಕ್, ಪ.ನಾ.ಸುರೇಶ್, ಹೆಬ್ಬಣಿ ಬಸವರಾಜು, ಹರ್ಷ, ಕಾಂತರಾಜು, ಸಿ.ಟಿ.ಮಂಜುನಾಥ್, ನವನೀತ್‌ಗೌಡ, ಹೊಸಹಳ್ಳಿ ಶಿವು, ಪ್ರಸನ್ನಕುಮಾರ್, ಶಿವಕುಮಾರ್, ಕೆಂಪಯ್ಯ, ಚಂದ್ರು, ಹೇಮಾವತಿ, ನಾಗರತ್ನ ಭಾಗವಹಿಸಿದ್ದರು.

ಸಿರಿಧಾನ್ಯ ಮೇಳದಲ್ಲಿ 10 ಮುದ್ದೆ ಉಂಡ ಈರೇಗೌಡ!



ಮಂಡ್ಯ, ಜ.3– ಜಿಲ್ಲೆಯಲ್ಲಿ ವಿವಿಧ ಗ್ರಾಮದಲ್ಲಿ ಆಗಾಗ ಮುದ್ದೆ ಉಣ್ಣುವ ಸ್ಪರ್ಧೆ ನಡೆಯುತ್ತಿದ್ದು, ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಮಂಡ್ಯ ಕೃಷಿ ಇಲಾಖೆಯಿಂದ ನಡೆದ ಸಿರಿಧಾನ್ಯ ಮೇಳದಲ್ಲಿ ನಾಟಿ ಕೋಳಿ ಸಾರಿನೊಂದಿಗೆ ಮುದ್ದೆ ಉಣ್ಣುವ ಸ್ಪರ್ಧೆ ಆಯೋಜಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮದ ಈರೇಗೌಡ 2 ಕೆಜಿ 717 ಗ್ರಾಂ ತೂಕದ ಬರೋಬ್ಬರಿ 10 ಮುದ್ದೆ ಉಣ್ಣುವ ಮೂಲಕ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗಳಿಸಿದರು. ಉಳಿದಂತೆ 1 ಕೆಜಿ 652 ಗ್ರಾಂ ತೂಕದ 6 ಮುದ್ದೆ ತಿಂದ ದಿಲೀಪ್ ದ್ವಿತೀಯ ಸ್ಥಾನ, 1 ಕೆಜಿ 544 ಗ್ರಾಂ ತೂಕದ 6 ಮುದ್ದೆ ತಿಂದ ರವೀಂದ್ರ ತೃತೀಯ ಸ್ಥಾನ ಪಡೆದರು. ರಾಜ್ಯದ ವಿವಿಧೆಡೆ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ ಹಲವು ಬಹುಮಾನ ಗೆದ್ದಿರುವ ಈರೇಗೌಡ, ಮಂಡ್ಯದಲ್ಲಿ ನಡೆಯುವ ಭಾಗಶಃ ಮುದ್ದೆ ಉಣ್ಣುವ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನೇ ಪಡೆದಿದ್ದಾರೆ. ಸ್ಪರ್ಧೆಯಲ್ಲಿ ಕೃಷಿ ಜಂಟಿನಿರ್ದೇಶಕ ಅಶೋಕ್ ಅವರು 7 ಮುದ್ದೆ ತಿಂದು ಸ್ಪರ್ಧಾಳುಗಳನ್ನ ಹುರಿದುಂಬಿಸಿದರು. ಸಿರಿಧಾನ್ಯ ಹಬ್ಬದಲ್ಲಿ ನಾಟಿ ಕೋಳಿ ಸಾರಿನೊಂದಿಗೆ ರಾಗಿ ಮುದ್ದೆ ಊಟದ ಸ್ಪರ್ಧೆ ಗಮನ ಸೆಳೆಯಿತು.

ಮೈಲನಹಳ್ಳಿ ಗ್ರಾಮದಲ್ಲಿ ರೈತರ ಪ್ರತಿಭಟನೆ

ಬಲಾಢ್ಯರಿಂದ ದೇವಾಲಯ ಜಮೀನು ಪರಭಾರೆ ಆರೋಪ



ಕೆ.ಆರ್.ಪೇಟೆ, ಜ.3– ತಾಲೂಕಿನ ಶೀಳನೆರೆ ಹೋಬಳಿಯ ಮೈಲನಹಳ್ಳಿ ಗ್ರಾಮದ ಶ್ರೀ ಮೇಲುಕೋಟೆ ಚೆಲುವರಾಯಸ್ವಾಮಿ ದೇವಾಲಯ ಹೆಸರಿನ ಕೋಟ್ಯಾಂತರ ರೂ. ಬೆಲೆಬಾಳುವ ಜಮೀನನ್ನು ಬಲಾಢ್ಯರು ಸುಳ್ಳು ದಾಖಲೆ ಸೃಷ್ಟಿಸಿ ಪರಭಾರೆ ಮಾಡಿದ್ದಾರೆ ಎಂದು ಆರೋಪಿಸಿ ರೈತರು ಪ್ರತಿಭಟನೆ ನಡೆಸಿದರು.

ಮೇಲುಕೋಟೆ ಚೆಲುವರಾಯಸ್ವಾಮಿ ದೇವರ ಹೆಸರಿನಲ್ಲಿದ್ದ ಜಮೀನನ್ನು ಮೈಲನಹಳ್ಳಿ ಗ್ರಾಮದ ಅಣ್ಣೇಗೌಡ, ಕುಮಾರ, ಲಕ್ಷ್ಮಣಾಚಾರಿ, ಮಹಾದೇವೇಗೌಡ, ನಾಗರಾಜೇಗೌಡ, ಜವರೇಗೌಡ ಕುಟುಂಬದವರು ಅನಾದಿಕಾಲದಿಂದಲೂ ಉಳುಮೆ ಮಾಡುತ್ತಿದ್ದಾರೆ. ಆದರೆ, ಸದರಿ ಜಮೀನನ್ನು ನೀತಿಮಂಗಲದ ಕೆಲ ಬಲಾಢ್ಯರು ಕಂದಾಯ ಇಲಾಖೆಯ ಅಧಿಕಾರಿಗಳ ಸಹಕಾರದಿಂದ ಸುಳ್ಳು ದಾಖಲೆ ಸೃಷ್ಟಿಸಿ ಪರಭಾರೆ ಮಾಡಿದ್ದಾರೆ ಎಂದು ಆರೋಪಿಸಿದರು. ಮೇಲುಕೋಟೆ ಚೆಲುವರಾಯಸ್ವಾಮಿ ದೇವಸ್ಥಾನ ವಶಕ್ಕೆ ಈ ಜಮೀನನ್ನು ಪಡೆಬೇಕು. ಯಾವುದೇ ಕಾರಣಕ್ಕೂ ಸುಳ್ಳು ದಾಖಲೆ ಸೃಷ್ಟಿಸಿರುವ ವ್ಯಕ್ತಿಗಳಿಗೆ ಸೇರಬಾರದು. ಆದ್ದರಿಂದ ಜಿಲ್ಲಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಾಂಸ್ಕೃತಿಕ ಚಟುವಟಿಕೆಯಿಂದ ಮಾನವೀಯ ಮೌಲ್ಯ ವೃದ್ಧಿ



ಮಂಡ್ಯ, ಜ.3– ಕಲೆ, ಸಾಹಿತ್ಯ, ಸಂಸ್ಕೃತಿ ಕಡೆಗೆ ಮಕ್ಕಳನ್ನು ಸೆಳೆಯುವುದರಿಂದ ಅವರಲ್ಲಿ ಮಾನವೀಯ ಮೌಲ್ಯ ಹಾಗೂ ವೈಚಾರಿಕತೆ ಬೆಳೆಯಲು ಸಾಧ್ಯ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಅಭಿಪ್ರಾಯಪಟ್ಟರು.

ನಗರದ ಲಕ್ಷ್ಮೀ ಜನಾರ್ದನ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವದಲ್ಲಿ ಕೌಸ್ತುಭ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಮಾಜಮುಖಿ ವ್ಯಕ್ತಿತ್ವ ರೂಪಿಸಿಕೊಳ್ಳುವುದಕ್ಕೆ ಕೇವಲ ಹೆಚ್ಚು ಅಂಕ ಪಡೆದರೆ ಸಾಲದು. ಮೌಲ್ಯಗಳು, ಮಾನವೀಯತೆ, ವೈಚಾರಿಕತೆ, ವಿಚಾರವಂತಿಕೆಯನ್ನು ರೂಢಿಸಿಕೊಂಡಲ್ಲಿ ಮಾತ್ರ ಬದುಕು ಸಾರ್ಥಕತೆ ಪಡೆಯಲು ಸಾಧ್ಯ ಎಂದರು.

ಶಿಕ್ಷಕರಿಗೆ ತುಂಬಾ ತೊಂದರೆ ಇದೆ. ಹಲವಾರು ಸಮಸ್ಯೆಗಳು ಅವರನ್ನು ಕಾಡುತ್ತಿವೆ. ಈ ಬಗ್ಗೆ ಸರ್ಕಾರದ ಗಮನ ಸೆಳೆಯಲು ಹೋರಾಟ ಮಾಡುತ್ತಿದ್ದೇವೆ. ಸರ್ಕಾರ ಸ್ವಲ್ಪ ಮಟ್ಟಿಗೆ ಸಹಕಾರ ನೀಡುತ್ತಿದೆಯಾದರೂ, ಶಿಕ್ಷಕರ ಸಮಸ್ಯೆಗಳ ಬಗ್ಗೆ ನಾವು ನಿರಂತರ ಹೋರಾಟ ಮಾಡುತ್ತಲೇ ಇರುತ್ತವೆ. ಪಠ್ಯೇತರ ಚಟುವಟಿಕೆ, ಕ್ರೀಡೆ, ವೇದಿಕೆ ಕಾರ್ಯಕ್ರಮಗಳು, ಕಲೆ, ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಮಕ್ಕಳಿಗೆ ಚನ್ನಾಗಿ ಅರ್ಥಮಾಡಿಸಬೇಕು. ಅವರನ್ನು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಶಿಕ್ಷಕ ರವಿಕುಮಾರ್ ಅವರು ನೀಡಿದ ಲ್ಯಾಪ್‌ಟಾಪ್, ಕಂಪ್ಯೂಟರ್ ಅನ್ನು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಶಾಸಕ ಗಣಿಗ ರವಿಕುಮಾರ್ ಸಮಾರಂಭ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷೆ ಅಂಜನಾ ಶ್ರೀಕಾಂತ್ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ. ಚಲುವಯ್ಯ, ಸಂಸ್ಥೆಯ ಡಾ.ಬಿ.ಕೆ.ಸುರೇಶ್, ಶಕಿಲಾ ಪ್ರಕಾಶ್, ಮಂಜುನಾಥ್, ಅಶೋಕ್, ಕಸ್ತೂರಿ, ಕಾಲೇಜಿನ ಪ್ರಾಂಶುಪಾಲೆ ಎನ್.ಜಿ.ಲತಾ, ಪ್ರೌಢಶಾಲಾ ಮುಖ್ಯ ಶಿಕ್ಷಕ ಎಚ್.ವಿ.ಧನಲಕ್ಷ್ಮಿ ಇತರರು ಇದ್ದರು.

ಪಾಂಡವಪುರ: ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಡಿಸಿ ಭೇಟಿ

ಮಂಡ್ಯ, ಜ.3– ಪಾಂಡವಪುರ ಪಟ್ಟಣದ ಡಿ.ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ ಹಾಗೂ ತಾಲೂಕಿನ ಕಟ್ಟೇರಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಜಿಲ್ಲಾಧಿಕಾರಿ ಕುಮಾರ್ ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಇದೇ ವೇಳೆ ಹಾಸ್ಟೆಲ್‌ನಲ್ಲಿ ದೊರಕುತ್ತಿರುವ ಸೌಲಭ್ಯಗಳ ಬಗ್ಗೆ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದರು. ಸರ್ಕಾರದ ಸೌಲಭ್ಯ ಬಳಸಿಕೊಂಡು, ದೇಶಕ್ಕೆ ಉತ್ತಮ ಪ್ರಜೆಗಳಾಗಿ ಉನ್ನತ ಹುದ್ದೆ ಪಡೆಯಲು ವಿದ್ಯಾಭ್ಯಾಸ ನಡೆಸಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ನಂತರ ಕಟ್ಟೇರಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ, ಮಕ್ಕಳಿಗೆ ನೀಡುವ ಆಹಾರ ಪದಾರ್ಥಗಳು ಗುಣಮಟ್ಟದಿಂದಿರಬೇಕು. ಮಕ್ಕಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಗೆ ತಿಳಿಸಿದರು. ಇದೇ ವೇಳೆ ಎಡಿಸಿ ಡಾ.ಹೆಚ್.ಎಲ್.ನಾಗರಾಜು ಮತ್ತಿತರರಿದ್ದರು.

ಗ್ರಾಪಂ ಅಧ್ಯಕ್ಷರಾಗಿ ಕಠಾರಿ ಶಂಕರ ಅವಿರೋಧ ಆಯ್ಕೆ



ಪಾಂಡವಪುರ, ಜ.3–ತಾಲೂಕಿನ ದೊಡ್ಡಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಕಠಾರಿ ಶಂಕರ ಬುಧವಾರ ಅವಿರೋಧವಾಗಿ ಆಯ್ಕೆಯಾದರು.

ಪ್ರಸನ್ನ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಕಠಾರಿ ಶಂಕರ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾದ ತಹಶೀಲ್ದಾರ್ ಶ್ರೇಯಸ್ ಅವಿರೋಧ ಆಯ್ಕೆ ಘೋಷಿಸಿದರು.

ನಂತರ ಅಧ್ಯಕ್ಷ ಕಠಾರಿ ಶಂಕರ್ ಮಾತನಾಡಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಆಶೀರ್ವಾದ ಹಾಗೂ ಪಂಚಾಯಿತಿಯ ಎಲ್ಲಾ ಸದಸ್ಯರ ಸಹಕಾರದಿಂದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಹಳ್ಳಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಶ್ರಮಿಸಲಾಗುವುದು ಎಂದರು. ಸಂದರ್ಭದಲ್ಲಿ ಉಪಾಧ್ಯಕ್ಷೆ ಕುಮಾರಿ, ಸದಸ್ಯರಾದ ನಿಂಗರಾಜು, ಕೆ.ಎಸ್.ಶಿಲ್ಪಾ, ಪವಿತ್ರ, ಕೆ.ಮನು, ಮಂಜುಳಾ, ಎಸ್. ಆನಂದ್, ಕೆ.ರವಿರಾಜ್, ಮಹದೇವಮ್ಮ, ಭಾರತಿ, ಮಂಗಳಮ್ಮ, ಶಿವಲಿಂಗ, ಬಿ.ಕೆ. ಶಕುಂತಲಾ, ಮಾಜಿ ಅಧ್ಯಕ್ಷ ಡಿ.ಎನ್.ರವಿ, ನಿಂಗೇಗೌಡ, ಅಣ್ಣೇಗೌಡ, ಕಾಳೇಗೌಡ, ಡಿ.ಟಿ.ಧರ್ಮ, ಟಿ.ಸಿ.ಧರ್ಮ, ಪರಮೇಶ್, ಸಿ.ಎ.ನಿಂಗೇಗೌಡ, ಸಿ.ಎನ್.ಚೇತನ್, ಸಿ.ಎನ್.ಚಂದನ್, ಹನುಮಂತು, ಕೆಂಪೇಗೌಡ, ಟಿ.ಸಿ.ಶಂಕರೇಗೌಡ, ಕೃಷ್ಣೇಗೌಡ, ಮಹದೇವಪ್ಪ, ಡಿ.ಕೆ. ರವಿ, ಶಾಲಿನಿ, ಪೃಥ್ವಿಶಂಕರ್ ಹಾಜರಿದ್ದರು.



ಮೈಸೂರಿನ ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ನಿರ್ದೇಶಕ ಸ್ಥಾನಕ್ಕೆ (ಕುಳಿತಿರುವವರು–ಎಡದಿಂದ ಬಲಕ್ಕೆ) ಎಂ.ಎಸ್. ಚಂದ್ರಶೇಖರ್, ಬಸವಣ್ಣ, ಬಿ.ಕೆ. ಶೇಷಾದ್ರಿ, ಎನ್.ನಾಗಚಂದ್ರ, ಶ್ರೀಮತಿ ಎಂ.ಜಿ. ಕೃಷ್ಣವೇಣಿ, ಶ್ರೀಮತಿ ಎಸ್. ಶ್ಯಾಮಲಾ, ಶ್ರೀಮತಿ ಎಸ್. ಲಕ್ಷ್ಮೀದೇವಿ (ಅವಿರೋಧ ಆಯ್ಕೆ) (ನಿಂತಿರುವವರು–ಎಡದಿಂದ ಬಲಕ್ಕೆ) ಎಂ.ಹನುಮಂತಯ್ಯ, ಎಂ.ಎಸ್. ರಂಗನಾಥನ್, ಟಿ.ಎಸ್. ಶೇಷಾದ್ರಿ, ಎಸ್. ರಾಜಕುಮಾರ್, ಹೆಚ್.ವಿ. ಸುಬ್ಬಣ್ಣ, ಜಿ. ಕೀರ್ತಿಪ್ರಕಾಶ್, ಮುತ್ತುರಾಜ್ (ಅವಿರೋಧ ಆಯ್ಕೆ) ಹಾಗೂ ಎಂ.ಎಸ್. ಗುರುರಾಜ್ ಆಯ್ಕೆಯಾಗಿದ್ದಾರೆ.

ಕೋವಿಡ್ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮ ಅಗತ್ಯ

ಸರಗೂರು ತಾಲೂಕು ಟಾಸ್ಕ್ ಪೋರ್ಸ್ ಸಭೆಯಲ್ಲಿ ಚರ್ಚೆ



ಸರಗೂರು, ಜ.3– ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಕೋವಿಡ್–19 ಸೋಂಕು ತಡೆಯಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ನಿರ್ಧಾರವನ್ನು ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಕೈಗೊಳ್ಳಲಾಯಿತು.

ಇಂದು ಸರಗೂರು ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆಯನ್ನು ತಾಲೂಕು ದಂಡಾಧಿಕಾರಿ ಶ್ರೀಮತಿ ರೋಕಿಯಾ ಬೇಗಂ ಮತ್ತು ತಾಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸುಷ್ಮಾ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಕೋವಿಡ್–19 ಸೋಂಕು ಹರಡದಂತೆ ತಾಲೂಕಿನಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು, ಯಾವ ರೀತಿಯ ಮುಂಜಾಗ್ರತೆ ಕ್ರಮವಹಿಸಬೇಕು ಎಂದು ಚರ್ಚಿಸಲಾಯಿತು. ಸರ್ಕಾರದ ಸುತ್ತೋಲೆಯಲ್ಲಿ, ಸೂಚಿಸಿರುವಂತೆ, 60 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಮತ್ತು ಜನರು ಓಡಾಡುವ ಸ್ಥಳದಲ್ಲಿ, ಹಬ್ಬ ಜಾತ್ರೆಗಳಲ್ಲಿ ಹೆಚ್ಚುಜಾಗೃತಿ ಮೂಡಿಸಬೇಕು, ಇದಲ್ಲದೆ ಸಾಮಾನ್ಯ ಜನರಲ್ಲಿ, ಜ್ವರ, ಕೆಮ್ಮು ಗಂಟಲು ನೋವು, ನೆಗಡಿ,ಉಸಿರಾಟದ ತೊಂದರೆ ಕಂಡುಬಂದಲ್ಲಿ ಪರೀಕ್ಷೆಗೆ ಒಳಪಡಿಸಬೇಕು. ಸ್ವಚ್ಛತೆ ಬಗ್ಗೆ ಹೆಚ್ಚು ಗಮನಹರಿಸಬೇಕು, ದೈಹಿಕ ಅಂತರ ಕಾಪಾಡಿಕೊಳ್ಳಬೇಕು ಎಂದು ಸಭೆಯಲ್ಲಿ ಸೂಚಿಸಲಾಯಿತು.

ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿದ್ದರೆ, ಅವರಲ್ಲಿ ಈ ರೋಗ ಲಕ್ಷಣಗಳು, ಇರಲಿ ಅಥವಾ ಇಲ್ಲದಿರಲಿ 7 ದಿನ ಪ್ರತ್ಯೇಕವಾಗಿ ಮನೆಯಲ್ಲಿ ಇರತಕ್ಕದ್ದು, ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಎಲ್ಲಾ ಆಸ್ಪತ್ರೆಗಳಲ್ಲಿ,ತುರ್ತು ಅಗತ್ಯ ಔಷಧಿಗಳನ್ನು ಇಟ್ಟುಕೊಳ್ಳುವುದು, ಕೋವಿಡ್ ಪರೀಕ್ಷೆಯ ಎಲ್ಲಾ ಪರಿಕರಣಗಳನ್ನು, ಇಟ್ಟುಕೊಳ್ಳುವುದು ಹಾಗೂ ಆಕ್ಸಿಜನ್ ಪೂರೈಕೆ ಇರುವ ಹಾಸಿಗೆಗಳು, ಆಕ್ಸಿಜನ್ ಪ್ಲಾಂಟ್‌ಗಳನ್ನು, ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದು, ಎಲ್ಲಾ ಆರೋಗ್ಯ ಕಾರ್ಯಕರ್ತರು ಅಂದರೆ ಆಶಾ ಅಂಗನವಾಡಿ ಮತ್ತು ಕೋವಿಡ್ 19 ಕರಪತ್ರಗಳನ್ನು, ಸಾರ್ವಜನಿಕರಿಗೆ ನೀಡಿ ಹೆಚ್ಚಿನ ಆರೋಗ್ಯ ಜಾಗೃತಿ ಮೂಡಿಸಲು ಸೂಚಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಮಂಜುನಾಥ್, ಸಬ್‌ಇನ್ಸ್‌ಪೆಕ್ಟರ್ ನಂದೀಶ್, ಪಶು ಆರೋಗ್ಯ ಆರೋಗ್ಯಾಧಿಕಾರಿ ಡಾ.ವೈ.ಡಿ. ರಾಜಣ್ಣ , ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಾಗರಾಜು, ಬಿಕೆ ಬೋರಯ್ಯ, ಹಾಗೂ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಹಾಜರಿದ್ದರು.

ಮಹದೇಶ್ವರಬೆಟ್ಟದ ದೇವಸ್ಥಾನ ಹುಂಡಿಯಲ್ಲಿ 2.90 ಕೋಟಿ ರೂ. ಸಂಗ್ರಹ

ಹನೂರು, ಜ.3– ಪ್ರಸಿದ್ಧ ಯಾತ್ರಾಸ್ಥಳ ಮಲೆಮಹದೇಶ್ವರಬೆಟ್ಟದ ದೇವಸ್ಥಾನದ ಹುಂಡಿ ಹಣವನ್ನು ಬುಧವಾರ ಎಣಿಕೆ ಮಾಡಲಾಗಿದ್ದು, ಕಳೆದ 33 ದಿನಗಳಲ್ಲಿ 2,90,00,732 ರೂ. ಸಂಗ್ರಹವಾಗಿದೆ.

ಹೊಸವರ್ಷ ಆಚರಣೆ ಸೇರಿದಂತೆ ಅಮಾವಾಸ್ಯೆ, ಹುಣ್ಣಿಮೆ ಪೂಜೆ ಸೇರಿದಂತೆ ವಿಶೇಷ ದಿನಗಳಲ್ಲಿ ಹೆಚ್ಚಿನ ಭಕ್ತರು ದೇವಸ್ಥಾನಕ್ಕೆ ಆಗಮಿಸಿದ್ದರಿಂದ ಹುಂಡಿಯಲ್ಲಿ ಹೆಚ್ಚಿನ ಹಣ ಸಂಗ್ರಹವಾಗಿದ್ದರಿಂದ ಬುಧವಾರ ಎಣಿಕೆ ಮಾಡಲಾಯಿತು. ಎಣಿಕೆ ವೇಳೆ ಹುಂಡಿಯಲ್ಲಿ 102 ಗ್ರಾಂ ಚಿನ್ನಾಭರಣ ಹಾಗೂ 3 ಕೆಜಿ 355 ಗ್ರಾಂ ಬೆಳ್ಳಿ ಪದಾರ್ಥ ಸೇರಿದಂತೆ 2,90,00,732 ರೂ. ದೊರೆತಿದೆ. ಎಣಿಕೆ ಕಾರ್ಯದಲ್ಲಿ ಮಲೆಮಹದೇಶ್ವರ ಸ್ವಾಮಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರ ಹಾಗೂ ಬ್ಯಾಂಕ್‌ನ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ಮೈಸೂರು ಸೇರಿ ನೆರೆ ಜಿಲ್ಲೆಗಳಲ್ಲಿ ಜ.7ರವರೆಗೆ ಸಾಧಾರಣ ಮಳೆ ಸಾಧ್ಯತೆ



ಮೈಸೂರು, ಜ.3(ಪಿಎಂ)– ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮೈಸೂರು, ಚಾಮರಾಜನಗರ, ಕೊಡಗು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಜ.7ರವರೆಗೆ ಮೋಡ ಕವಿದ ವಾತಾವರಣದೊಂದಿಗೆ ಹಗುರ ಮಳೆಯಾಗುವ ಸಂಭವವಿದೆ ಎಂದು ನಾಗನಹಳ್ಳಿ ಕೃಷ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜ.3ರಿಂದ 7ರವರೆಗೆ ಗರಿಷ್ಠ ಉಷ್ಣಾಂಶ 28ರಿಂದ 30 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 17ರಿಂದ 18 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.87ರಿಂದ 90ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.82ರಿಂದ 85ರವರೆಗೆ ಇರಬಹುದಾಗಿದ್ದು, ಗಾಳಿಯು ಗಂಟೆಗೆ 1ರಿಂದ 3 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆ ಇದೆ ಕೊಡಗು ಜಿಲ್ಲೆಯಲ್ಲಿ ಜ.3ರಿಂದ 7ರವರೆಗೆ ಗರಿಷ್ಠ ಉಷ್ಣಾಂಶ 31 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 16 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆ ಇದೆ. ಬೆಳಗಿನ ಗಾಳಿಯ ತೇವಾಂಶ ಶೇ.98ರಿಂದ 99ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.84ರಿಂದ 86ರವರೆಗೆ ಇರಬಹುದಿದ್ದು, ಗಾಳಿಯು ಗಂಟೆಗೆ 5ರಿಂದ 7 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ.

ಮಂಡ್ಯ ಜಿಲ್ಲೆಯಲ್ಲಿ ಜ.3ರಿಂದ 7ರವರೆಗೆ ಗರಿಷ್ಠ ಉಷ್ಣಾಂಶ 29ರಿಂದ 30 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 17ರಿಂದ 18 ಡಿಗ್ರಿ ಸೆಲ್ಸಿಯಸ್ ದಾಖಲಾಗಬಹುದು. ಬೆಳಗಿನ ಗಾಳಿಯ ತೇವಾಂಶ ಶೇ.86ರಿಂದ 89ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.53ರಿಂದ 55ರವರೆಗೆ ಇರುವ ಸಾಧ್ಯತೆ ಇದೆ. ಗಾಳಿಯು ಗಂಟೆಗೆ 1ರಿಂದ 3 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ.

ಬಸ್‌ಪಾಸ್‌ಗೆ ಅರ್ಜಿ ಆಹ್ವಾನ

ಮಂಡ್ಯ, ಜ.3– ಬಸ್‌ಪಾಸ್ ಪಡೆಯಲು ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ. ಜ.17 ರಿಂದ 29ರೊಳಗೆ ಆಯಾ ತಾಲೂಕಿನ ಬಸ್ ನಿಲ್ದಾಣ, ಘಟಕಗಳಲ್ಲಿ ವಿಕಲಚೇತನರ ಬಸ್‌ಪಾಸ್ ನವೀಕರಣ ಮಾಡಿಸಬಹುದು. ವಿಕಲಚೇತನರ ಪಾಸ್, ಯುಡಿಐಡಿ ಕಾರ್ಡ್, ಅಂಗವೈಕಲ್ಯ ದೃಢೀಕರಣ, ಆಧಾರ್ ಕಾರ್ಡ್‌ನೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಡ್ಯ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಪ್ರಿಯಕರನೊಡಗೂಡಿ ಪತಿಯನ್ನು ಹತ್ಯೆ ಮಾಡಿದ್ದ ಮೈಸೂರಿನ ಯುವತಿ ಸೆರೆ

ಮೈಸೂರು, ಜ.4–ಸುಪಾರಿ ನೀಡಿ ಪತಿಯನ್ನು ಹತ್ಯೆ ಮಾಡಿದ ಆರೋಪದ ಮೇರೆಗೆ ಮೈಸೂರಿನ ಆಂಕರ್ ಮತ್ತು ಆಕೆಯ ಪ್ರಿಯತಮ ಬಂಧನಕ್ಕೊಳಗಾಗಿದ್ದಾರೆ.

ಮೈಸೂರಿನವನೇ ಆದ ಪ್ರಗತಿಪರ ರೈತ ಅಮಿತ್(35) ಹತ್ಯೆಗೊಳಗಾದವರಾಗಿದ್ದು, ಇವರ ಕುಟುಂಬದವರು ಮೂಲತಃ ಬೀದರ್ ಜಿಲ್ಲೆಯವರು. ಆದರೆ ಇವರ ತಂದೆ ಸೇರಿದಂತೆ ಕುಟುಂಬದವರೆಲ್ಲಾ ಮೈಸೂರಿನ ಜೆ.ಪಿ.ನಗರದಲ್ಲಿ ವಾಸವಿದ್ದಾರೆ. ಕಳೆದ 10 ವರ್ಷದ ಹಿಂದೆ ಚೈತ್ರ ಎಂಬಾಕೆಯನ್ನು ಅಮಿತ್ ಮದುವೆಯಾಗಿದ್ದರು. ಪತ್ನಿ ಸೇರಿದಂತೆ ಕುಟುಂಬದವರು ಮೈಸೂರಲ್ಲೇ ವಾಸವಿದ್ದರೂ ಕೃಷಿ ಮೇಲಿನ ಆಸಕ್ತಿಯಿಂದಾಗಿ ಅಮಿತ್ ಬೀದರ್‌ನಲ್ಲಿರುವ ತನ್ನ ತಂದೆಯ 35 ಎಕರೆ ಜಮೀನಿನಲ್ಲಿ ಕೊರೊನಾ ಸಾಂಕ್ರಾಮಿಕದ ನಂತರ ಕೃಷಿ ಮಾಡುತ್ತಿದ್ದರು.

ಕಳೆದ ನ.11ರಂದು ಇವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿ ಅಪಘಾತವಾದಂತೆ ಬಿಂಬಿಸಿದ್ದರು. ಈ ಸಂಬಂಧ ಇವರ ಪತ್ನಿ ಚೈತ್ರಳೇ ಅಲ್ಲಿನ ಪೊಲೀಸರಿಗೆ ದೂರು ನೀಡಿದ್ದರು. ತನಿಖೆ ವೇಳೆ ಈಕೆ ತನ್ನ ಪ್ರಿಯತಮ ರವಿಪಾಟೀಲ್ ಸೇರಿ ಪತಿಯನ್ನು ಹತ್ಯೆ ಮಾಡಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯ ಜನವಾಡ ಠಾಣೆ ಪೊಲೀಸರು ಚೈತ್ರ ಹಾಗೂ ಆಕೆಯ ಪ್ರಿಯತಮ ಸೇರಿದಂತೆ ಸುಪಾರಿ ಕಿಲ್ಲರ್‌ಗಳನ್ನು ಬಂಧಿಸಿದ್ದಾರೆ.

ವ್ಯಾಸರಾಜಪುರ ಡೇರಿಗೆ ರಂಗಸ್ವಾಮಿ ಅಧ್ಯಕ್ಷ




ತಿ.ನರಸೀಪುರ, ಜ.3– ವ್ಯಾಸರಾಜಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ವ್ಯಾಸರಾಜಪುರ ಗ್ರಾಮದ ರಂಗಸ್ವಾಮಿ(ರಂಗಪ್ಪ), ಉಪಾಧ್ಯಕ್ಷರಾಗಿ ಸಿದ್ದಪ್ಪಾಜಿ ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ವಿಶೇಷ ಸಭೆಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ರಂಗಸ್ವಾಮಿ ಹಾಗೂ ಸಿದ್ದಪ್ಪಾಜಿ ಇಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಇವರಿಬ್ಬರ ಅವಿರೋಧ ಆಯ್ಕೆಯನ್ನು ಸಹಕಾರ ಸಂಘದ ಚುನಾವಣಾಧಿಕಾರಿ ಬಿ.ಡಿ.ಸುಮಲತಾ ಪ್ರಕಟಿಸಿದರು.

ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರಾದ ಶಂಕರ, ಪುಟ್ಟಸ್ವಾಮಿ, ನಾಗ,ಮುದ್ದಯ್ಯ, ಮಾರನಾಯ್ಕ, ಗಂಗಾಧರ, ಎಸ್.ರಾಧ, ಚಿಕ್ಕತಾಯಮ್ಮ, ಸಿದ್ದೇಗೌಡ ಹಾಗೂ ರಾಜಣ್ಣ ಚುನಾವಣೆಗೆ ಹಾಜರಾಗಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಅಧ್ಯಕ್ಷ–ಉಪಾಧ್ಯಕ್ಷರ ಘೋಷಣೆಯಾಗುತ್ತಿದ್ದಂತೆ ಸಹಕಾರ ಸಂಘದ ಮುಂದೆ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ,ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ಡೈರಿಯ ನೂತನ ಅಧ್ಯಕ್ಷ ರಂಗಸ್ವಾಮಿ, ವ್ಯಾಸರಾಜಪುರ ಹಾಲು ಉತ್ಪಾದಕರ ಸಹಕಾರ ಸಂಘವನ್ನು ತಾಲೂಕಿನಲ್ಲಿಯೇ ಮಾದರಿ ಸಂಘ ಮಾಡಬೇಕೆಂಬ ಅಭಿಲಾಷೆ ನನ್ನದಾಗಿದೆ. ಸಂಘದ ನಿರ್ದೇಶಕರು ನನ್ನ ಆಶಯಕ್ಕೆ ಕೈ ಜೋಡಿಸಿ ಸರ್ಕಾರದಿಂದ ಡೈರಿಗೆ ದೊರಕಬಹುದಾದ ಎಲ್ಲ ಸವಲತ್ತುಗಳನ್ನು ತರಲು ನನ್ನೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು. ಜಿ.ಪಂ ಮಾಜಿ ಸದಸ್ಯ ಹೊನ್ನನಾಯ್ಕ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿ ಶುಭ ಕೋರಿದರು. ಡೈರಿ ಕಾರ್ಯದರ್ಶಿ ಎಸ್.ಅಂದಾನಿಗೌಡ, ತಾ.ಪಂ ಮಾಜಿ ಅಧ್ಯಕ್ಷ ಕೆಬ್ಬೇ ಶಿವಸ್ವಾಮಿ, ವಕೀಲ ಜ್ಞಾನೇಂದ್ರ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸುಂದರ ನಾಯಕ್, ಎಚ್. ರಮೇಶ್, ಜಯರಂಗಸ್ವಾಮಿ, ಕೆಬ್ಬೇಹುಂಡಿ ಮಹದೇವ, ಜಯರಾಂ, ಸುರೇಶ್, ಸಿ.ಕುಮಾರ್, ಸಿದ್ದುಂಡಿ ನಟರಾಜು, ರಂಗಸ್ವಾಮಿ, ಸೋಮಣ್ಣ ಸೇರಿದಂತೆ ಗ್ರಾಮಸ್ಥರು ಯಜಮಾನರು ಹಾಜರಿದ್ದರು.



ಮೈಸೂರಿನ ಅಗ್ರಹಾರದ ಚಿಕ್ಕ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮ ಮಂತ್ರಾಕ್ಷತೆ ಹಾಗೂ ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ರಾಮಮಂದಿರದ ಕರಪತ್ರವನ್ನು ದೇವಸ್ಥಾನದ ಅರ್ಚಕರಿಗೆ ಸಲ್ಲಿಸುವ ಮೂಲಕ ನಗರಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್ ಮಂತ್ರಾಕ್ಷತೆ ವಿತರಿಸುವ ಅಭಿಯಾನಕ್ಕೆ ಚಾಲನೆ ನೀಡಿದರು. ಈ ವೇಳೆ ನೈರುತ್ಯ ರೈಲ್ವೆ ಸದಸ್ಯ ಶಿವರಾಜ್, ಭಾನುಪ್ರಕಾಶ್, ಉದಯ್, ರವಿ, ಶಿವ, ಪ್ರೇರಣಾ, ಶಂಕರ್ ಸಿಂಗ್, ನಂದೀಶ್, ಸುರೇಶ್, ವೀರಾಜ್ ಅರಸ್ ಇತರರು ಉಪಸ್ಥಿತರಿದ್ದಾರೆ.



ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹಿರೀಕ್ಯಾತನಹಳ್ಳಿ ಗ್ರಾಮದ ಅನುದಾನಿತ ವೇಣುಗೋಪಾಲ ವಿದ್ಯಾಸಂಸ್ಥೆಯಲ್ಲಿ ದಿನದರ್ಶಿಕೆಯನ್ನು ಬಿಡುಗಡೆ ಮಾಡಲಾಯಿತು. ಸಂಸ್ಥೆಯ ಅಧ್ಯಕ್ಷ ವಿಶ್ವೇಶ್ವರಯ್ಯ, ಕಾರ್ಯದರ್ಶಿ ಮಹೇಶ್, ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಸರಳ, ಸಂಸ್ಥೆಯ ಮುಖ್ಯ ಶಿಕ್ಷಕ ವೇಣುಗೋಪಾಲ್, ನಿರ್ದೇಶಕ ಸುರೇಶ್, ಹಿರಿಯ ಶಿಕ್ಷಕಿ ಸರ್ವಮಂಗಳ, ಸಂಸ್ಥೆಯ ಎಲ್ಲಾ ಶಿಕ್ಷಕರು ಹಾಜರಿದ್ದರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ಸರಿಗಟ್ಟುವ ನಾಯಕ ಯಾರೂ ಇಲ್ಲ

ಮೋದಿ ಅವರ ನೇತೃತ್ವ ಬೇಕಷ್ಟೆ. ಅದಕ್ಕಾಗಿ ನಮಗೆ ಇಷ್ಟೇ ಸೀಟು ಬೇಕು, ಇಂಥದ್ದೇ ಕ್ಷೇತ್ರ ಬೇಕೆಂಬ ಬೇಡಿಕೆ ಇಟ್ಟಿಲ್ಲ. ಈಗಾಗಲೇ ರಾಜ್ಯದಲ್ಲಿ ಜೆಡಿಎಸ್‌ಗೆ 5 ಕ್ಷೇತ್ರಗಳನ್ನು ಬಿಟ್ಟು ಕೊಡಲು ಬಿಜೆಪಿಯವರು ಒಪ್ಪಿಗೆ ಸೂಚಿಸಿದ್ದಾರೆ. ನಮ್ಮ ಪಕ್ಷ ಎಲ್ಲೆಲ್ಲಿ ಶಕ್ತಿಯುತವಾಗಿದೆಯೋ ಅಲ್ಲಿ ಮಾತ್ರ ನಾವು ಸ್ಪರ್ಧೆ ಮಾಡುತ್ತೇವೆ. ಗೆಲ್ಲುವ ಪ್ರಯತ್ನ ಮಾಡಿ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ದೇಶದ ಪ್ರಧಾನಿ ಮಾಡುವುದಷ್ಟೇ ನಮ್ಮ ಏಕೈಕ ಗುರಿ ಎಂದರು. ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್ ಜಾತ್ಯಾತೀತವಾಗಿ ಉಳಿದಿಲ್ಲ ಎಂಬ ಕಾಂಗ್ರೆಸ್ ನಾಯಕರ ಟೀಕೆಗಳಿಗೆ ತಿರುಗೇಟು ನೀಡಿದ ಜಿ.ಟಿ. ದೇವೇಗೌಡರು, ಜಾತ್ಯಾತೀತ ಎಂದರೇನು ಎಂದು ಮೊದಲು ಹೇಳಿ ಸಿದ್ದರಾಮಯ್ಯ ಜೊತೆ ಕುರುಬರು ಮಾತ್ರ ಇರೋದು, ಮಲ್ಲಿಕಾರ್ಜುನ ಖರ್ಗೆ ಜೊತೆ ದಲಿತರು ಮಾತ್ರ ಇರೋದು ಅಂದ್ರೆ ಅದು ಜಾತ್ಯಾತೀತನಾ? ಎಂದು ಜಿಟಿಡಿ ಪ್ರಶ್ನಿಸಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯ್ದ ಅವರು, ರಾಜ್ಯದಲ್ಲಿ ಬರ ಪರಿಹಾರ ಕೊಡುವಲ್ಲಿ ಸರ್ಕಾರ ವಿಫಲವಾಗಿದೆ. ಇತ್ತ ಅವರ ಗ್ಯಾರಂಟಿ ಯೋಜನೆಗಳು ಜನರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ. ಜನ ಹಿಡಿಶಾಪ ಹಾಕುತ್ತಿದ್ದಾರೆ. ಇದನ್ನು ಸರ್ಕಾರ ಅಂತ ಕರೆಯಲು ಸಾಧ್ಯವೇ ಎಂದು ಪ್ರಶ್ನಿಸಿದರು. ಬರಗಾಲದಿಂದ ಈಗಾಗಲೇ 48 ಲಕ್ಷ ಹೆಕ್ಟೇರ್ ಬೆಳೆ ನಷ್ಟವಾಗಿದೆ. 38 ಸಾವಿರ ಕೋಟಿ ರೂ. ಬೆಳೆ ಪರಿಹಾರ ನೀಡಬೇಕೆಂದು ಹೇಳುತ್ತಾರೆ. ರೈತರಿಗೆ ಮೊದಲ ಹಂತದಲ್ಲಿ 2 ಸಾವಿರ ಕೊಡುತ್ತೇವೆಂದು ಹೇಳಿದ ಸರ್ಕಾರ, ಈಗ ತಂತ್ರಾಂಶದ ಸಮಸ್ಯೆ ಇದೆ ಎಂದು ಸಬೂಬು ಹೇಳುತ್ತಿದೆ ಎಂದು ಸಿದ್ದರಾಮಯ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬ್ಯಾಂಕ್ ಚುನಾವಣೆ ಮುಂದೂಡುವ ತಂತ್ರ

ಮಾಡಿಲ್ಲ. ಆದರೂ, ನಮ್ಮ ಬೆಂಬಲಿಗರು ಹೆಚ್ಚಿನ ಕ್ಷೇತ್ರಗಳಲ್ಲಿ ಗೆದ್ದಿದ್ದಾರೆ. ಕಾಂಗ್ರೆಸ್‌ನವರು ಸೋಲಿನ ಭೀತಿಯಿಂದ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಚುನಾವಣೆಯನ್ನು ಮುಂದೂಡಿದ್ದರು ಎಂದು ಅವರು ದೂರಿದರು.

ಈ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆ ನಡೆದಾಗಲೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸೂಚನೆ ಮೇರೆಗೆ ಅಡ್ವೊಕೇಟ್ ಜನರಲ್, ಸರ್ಕಾರದ ಪರ ವಕೀಲರು ತಪ್ಪದೇ ಹಾಜರಾಗುತ್ತಿದ್ದರು. ಅಷ್ಟರ ಮಟ್ಟಿಗೆ ಸಿದ್ದರಾಮಯ್ಯ ಚುನಾವಣೆ ಮುಂದೂಡಲು ಪ್ರಯತ್ನಿಸಿದ್ದರು. ಆದರೆ, ಇದೀಗ ನ್ಯಾಯಾಲಯವೇ ಬ್ಯಾಂಕ್ ಚುನಾವಣೆ ನಡೆಸುವಂತೆ ಸೂಚನೆ ನೀಡಿದೆ. ಏನೇ ಷಡ್ಯಂತರ ನಡೆಸಿದರೂ ಚುನಾವಣೆಯಲ್ಲಿ ನಮ್ಮ ಬೆಂಬಲಿಗರೇ ಜಯ ಸಾಧಿಸಲಿದ್ದಾರೆ ಎಂದರು.

ಲೇಸರ್ ಲೈಟ್ ಬಿಡುತ್ತಿರುವ ಕಿಡಿಗೇಡಿಗಳು

ಕಣ್ಣಿಗೆ ಬಿಟ್ಟಾಗ ಕಣ್ಣು ಮಂಜಾಗುತ್ತಿದ್ದು, ವಿಮಾನ ಇಳಿಸಲು ಮತ್ತು ಟೇಕ್ ಆಫ್ ಆಗುವಾಗ ತೀವ್ರ ತೊಂದರೆ ಉಂಟಾಗುತ್ತಿದೆ ಎಂದು ಏರ್‌ಕ್ರಾಫ್ಟ್ ಆಪರೇಟರ್‌ಗಳು ತಿಳಿಸಿದ್ದಾರೆ. ಲೇಸರ್ ಬೀಮ್ ಘಟನೆಗಳಿಂದ ಸಂಭವಿಸುವ ಅಪಾಯ ತಪ್ಪಿಸಲು ಸಿವಿಲ್ ಏವಿಯೇಷನ್ ಸೇಫ್ಟಿ ರೆಗ್ಯುಲೇಟರಿ ಅಥಾರಿಟಿಯು ಮೈಸೂರು ವಿಮಾನದ ಸುತ್ತಲಿನ 25 ಕಿ.ಮೀ. ವ್ಯಾಪ್ತಿ ಪ್ರದೇಶದಲ್ಲಿ ಲೇಸರ್ ಬೀಮ್ ಸಂರಕ್ಷಿತ ವಿಮಾನ ವಲಯವನ್ನಾಗಿ ನಿರ್ವಹಿಸುವುದನ್ನು ಮಾನದಂಡವಾಗಿಸಿದೆ ಎಂದು ನಿರ್ದೇಶಕರು ತಿಳಿಸಿದರು. ಏರ್‌ಕ್ರಾಫ್ಟ್ ನಿಯಮಗಳು 1937ರಡಿ ವಿಮಾನಗಳತ್ತ ಲೈಟ್, ಲೇಸರ್ ಲೈಟ್‌ಗಳನ್ನು ಬಿಡುವುದು ಅಪರಾಧವಾಗಿದೆ. ಈ ಘಟನೆಯನ್ನು ಹುಡುಗರು ಮನರಂಜನೆಗಾಗಿ ಅಥವಾ ಉದ್ದೇಶಪೂರ್ವಕವಾಗಿ ವಿಮಾನಗಳ ಪೈಲಟ್ ಕಣ್ಣಿಗೆ ಲೇಸರ್ ಲೈಟ್ ಬಿಡುತ್ತಿದ್ದಾರೋ ಎಂಬುದರ ಬಗ್ಗೆ ವಿಮಾನ ನಿಲ್ದಾಣದ ಪೊಲೀಸ್ ಅಧಿಕಾರಿಗಳು ಶೋಧ ನಡೆಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಇಂತಹ ಕೃತ್ಯ ನಡೆಸುತ್ತಿರುವುದು ಕಂಡು ಬಂದಲ್ಲಿ ಸಾರ್ವಜನಿಕರು ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಅಥವಾ ಪೊಲೀಸರಿಗೆ ಮಾಹಿತಿ ನೀಡಿ ಸಹಕರಿಸುವಂತೆ ನಿರ್ದೇಶಕರು ಮನವಿ ಮಾಡಿದ್ದಾರೆ.

ಪ್ರವೇಶಪತ್ರ ಡೌನ್ಲೋಡ್‌ಗೆ ಸೂಚನೆ

ಅಭ್ಯರ್ಥಿಗಳೇನಾದರೂ ತಮ್ಮ ನೋಂದಣಿ ಸಂಖ್ಯೆ, ವಿಷಯದ ಕೋಡ್ ಮತ್ತು ಪರೀಕ್ಷಾ ಕೇಂದ್ರದ ಕೋಡ್ ಅನ್ನು ತಪ್ಪಾಗಿ ನಮೂದಿಸಿದಲ್ಲಿ ಅಂಥವರ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ ಎಂದು ಹೇಳಿದ್ದಾರೆ. ವಸ್ತ್ರಸಂಹಿತೆ ಕಡ್ಡಾಯ: ಕೆ–ಸೆಟ್ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಪರೀಕ್ಷಾ ಪ್ರಾಧಿಕಾರವು ಕಟ್ಟುನಿಟ್ಟಿನ ವಸ್ತ್ರ ಸಂಹಿತೆಯನ್ನು ಜಾರಿಗೊಳಿಸಿದೆ. ಯಾವುದೇ ಅಕ್ರಮಗಳಿಗೆ ಅವಕಾಶ ನೀಡದಿರಲು ಈ ಕ್ರಮ ಅನುಸರಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಇದರಂತೆ, ಪುರುಷ ಅಭ್ಯರ್ಥಿಗಳು ಅರೆತೋಳಿನ ಅಂಗಿ, ಹೆಚ್ಚಿನ ಜೇಬುಗಳಿಲ್ಲದ ಸರಳ ಪ್ಯಾಂಟ್ ಕಡ್ಡಾಯವಾಗಿದೆ. ಇದರ ಭಾಗವಾಗಿ ಜಿಪ್ ಪಾಕೆಟ್, ದೊಡ್ಡ ಬಟನ್ಸ್ ಮತ್ತು ವಿಸ್ತಾರ ಕಸೂತಿ ಇರುವ ಉಡುಪು ಮತ್ತು ಶೂಗಳನ್ನು ನಿಷೇಧಿಸಲಾಗಿದೆ. ಜೊತೆಗೆ, ಅಭ್ಯರ್ಥಿಗಳು ಯಾವುದೇ ಕಂಠಾಭರಣ, ಕಿವಿಯೋಲೆ, ಉಂಗುರ ಮತ್ತು ಕಡಗಗಳನ್ನು ಧರಿಸಿಕೊಂಡು ಬರಬಾರದು ಎಂದು ಪ್ರಾಧಿಕಾರ ಮಾಹಿತಿ ನೀಡಿದೆ.

ಮಹಿಳಾ ಅಭ್ಯರ್ಥಿಗಳಿಗೆ ವಿಪರೀತ ಕಸೂತಿ, ಹೂಗಳು, ಬ್ರೂಚ್, ಬಟನ್, ಪೂರ್ಣ ತೋಳಿನ ರವಿಕೆ/ವಸ್ತ್ರ ಇರುವ ಉಡುಪು ಮತ್ತು ಜೀನ್ಸ್ ಪ್ಯಾಂಟ್ ಹಾಗೂ ದಪ್ಪನೆ ಅಡಿಭಾಗವಿರುವ ಚಪ್ಪಲಿ, ಶೂಗಳನ್ನು ಧರಿಸಿಕೊಂಡು ಬರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ, ಬೇರಾವುದೇ ಆಭರಣಗಳನ್ನು ಹಾಕಿಕೊಂಡು ಪರೀಕ್ಷಾ ಕೇಂದ್ರಕ್ಕೆ ಬರುವಂತಿಲ್ಲ ಎಂದು ರಮ್ಯಾ ತಿಳಿಸಿದ್ದಾರೆ.

ನಿಷೇಧಿತ ವಸ್ತುಗಳ ಪಟ್ಟಿ: ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಪಣ ತೊಟ್ಟಿರುವ ಪರೀಕ್ಷಾ ಪ್ರಾಧಿಕಾರವು, ಯಾವುದೇ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಬ್ಲೂಟೂತ್, ಮೊಬೈಲ್ ಫೋನ್, ಎಲೆಕ್ಟ್ರಾನಿಕ್ ವಸ್ತುಗಳು, ಪೆನ್‌ಡ್ರೈವ್, ಇಯರ್ ಫೋನ್, ಕೈ ಗಡಿಯಾರ, ಮೈಕ್ರೋಫೋನ್, ಪೆನ್ಸಿಲ್, ಎರೇಸರ್, ಜಾಮೆಟ್ರಿ ಪೆಟ್ಟಿಗೆ ಮತ್ತು ಲಾಗ್ ಟೇಬಲ್ ಇತ್ಯಾದಿಗಳನ್ನು ತರುವಂತಿಲ್ಲ. ಜೊತೆಗೆ ಟೋಪಿ, ಮಾಸ್ಕ್ ಹಾಕಿಕೊಂಡು ಬರುವಂತಿಲ್ಲ ಎಂದು ಸೂಚನೆ ನೀಡಿದೆ.

ಶಾಲಾ ಮಕ್ಕಳ ಪ್ರಾಣ, ಭವಿಷ್ಯಕ್ಕಿಲ್ಲ ಗ್ಯಾರಂಟಿ

ರಾತ್ರಿಯಾದರೂ ಮನೆ ತಲುಪುತ್ತಿಲ್ಲ ಎನ್ನುವ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದನ್ನು ಕಂಡು ಆಘಾತವಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಿಕ ಸಾರಿಗೆ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸಿ, ಶಾಲಾ ಮಕ್ಕಳು ಹಾಗೂ ಹೆಣ್ಣು ಮಕ್ಕಳ ಪರಿಸ್ಥಿತಿ ಅಪಾಯ ಹಾಗೂ ಆತಂಕಕ್ಕೆ ಸಿಲುಕಿದೆ. ಪರೀಕ್ಷೆ ಸಮಯದಲ್ಲಂತೂ ಈ ಶಾಲಾ ಮಕ್ಕಳ ಸಂಕಷ್ಟ ಹೇಳಲಸಾಧ್ಯ. ಶಕ್ತಿ ಯೋಜನೆ ಬಗ್ಗೆ ತಮ್ಮ ತಕರಾರು ಇಲ್ಲ, ಆದರೆ, ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಬಸ್ ಸೌಲಭ್ಯ ಕಲ್ಪಿಸಬೇಕು ಎನ್ನುವ ಬೇಡಿಕೆಗೆ ಸಂಪೂರ್ಣ ಬೆಂಬಲವಿದೆ. ರಾಜ್ಯ ಸರಕಾರ ಕೂಡಲೇ ಈ ಬಗ್ಗೆ ತುರ್ತು ಕ್ರಮ ವಹಿಸಿ, ಶಾಲಾ ಮಕ್ಕಳಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಬಿಡುಗಡೆಗೆ 48 ಗಂಟೆಗಳ ಗಡುವು

ರಾಜ್ಯ, ದೇಶದಲ್ಲಿ ಹಬ್ಬದ ವಾತಾವರಣವಿದೆ. ಇಂಥ ಸಂದರ್ಭದಲ್ಲಿ ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರ, ಪ್ರಭು ಶ್ರೀರಾಮಚಂದ್ರ ವಿರೋಧಿ ಸರ್ಕಾರವು ಮಂತ್ರಾಕ್ಷತೆ ಕೊಡುವುದನ್ನು ತಡೆಯುವ ಕೆಲಸ ಮಾಡುತ್ತಿದೆ ಎಂದು ಟೀಕಿಸಿದರು. ಹಿಂದೂಗಳ ಮನಸ್ಸಿಗೆ ನೋವಾಗುವ ಹೇಳಿಕೆ ಕೊಡುತ್ತಿದ್ದಾರೆ. ಹುಬ್ಬಳ್ಳಿಯ ಕರಸೇವಕ ಶ್ರೀಕಾಂತ್ ಪೂಜಾರಿಯವರ ಬಂಧನದ ದುಸ್ಸಾಹಸಕ್ಕೆ ಕಾಂಗ್ರೆಸ್ ಸರ್ಕಾರ ಕೈಹಾಕಿದೆ. 31 ವರ್ಷಗಳ ಹಿಂದಿನ ಕೇಸು ಇದಾಗಿದೆ. ಈ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕಿದೆ ಎಂದು ತಿಳಿಸಿದರು. ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ಅವರು ಮಾತನಾಡಿ, ಹೆಸರಿನಲ್ಲಿ ರಾಮ ಇದ್ದರೆ ಸಾಕೇ? ನಿಮ್ಮ ಮನಸ್ಸಿನಲ್ಲಿ ರಾಮ ಇರಬೇಕಿತ್ತು ಎಂದು ಮುಖ್ಯಮಂತ್ರಿಗಳ ಕ್ರಮವನ್ನು ಟೀಕಿಸಿದರು. ಶ್ರೀಕಾಂತ್ ಪೂಜಾರಿಯವರ ಬಿಡುಗಡೆ ಆಗುವವರೆಗೆ ನಮ್ಮ ಹೋರಾಟ ಮುಂದುವರಿಯುತ್ತದೆ ಎಂದು ತಿಳಿಸಿದರು. ಓಲೈಕೆ ರಾಜ ಕಾರಣ ನಿಮ್ಮದಲ್ಲವೇ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ನೀತಿ ಕುಲಗೆಟ್ಟಿದ್ದು: ಕಾಂಗ್ರೆಸ್ ಪಕ್ಷದ ನೀತಿ ಕುಲಗೆಟ್ಟಿದ್ದು. ಹಿಜಾಬ್ ಪರ, ಶ್ರೀರಾಮನ ವಿರುದ್ಧ ನೀತಿಯಿಂದ ಜನತೆ ರಾಜ್ಯ ಸರ್ಕಾರದ ವಿರುದ್ಧ ಒಗ್ಗಟ್ಟಾಗಿದ್ದಾರೆ ಎಂದು ಮಾಜಿ ಸಿಎಂ, ಸಂಸದ ಡಿ.ವಿ.ಸದಾನಂದಗೌಡ ಅವರು ನುಡಿದರು. ಹಿಂದೂಗಳು ತೂಕಡಿಕೆ ಬಿಡಬೇಕು. ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳನ್ನು ರಕ್ಷಿಸಲು ನಾವು ಕಟಿಬದ್ಧರಾಗಬೇಕು ಎಂದು ತಿಳಿಸಿದರು. ಸಿದ್ದರಾಮಯ್ಯನವರ ಸರ್ಕಾರವು ತಮ್ಮ ಕೀಳುಮಟ್ಟದ ರಾಜಕಾರಣವನ್ನು ಬಿಡಬೇಕು ಎಂದು ಒತ್ತಾಯಿಸಿದರು.ಬದಲಾಗಿ ಬಂಧಿಸುವ ಕಾರ್ಯ ನಡೆದಿದೆ ಎಂದು ಟೀಕಿಸಿದರು.

ಅಯೋಧ್ಯೆಗೆ ಹೋಗುವವರಿಗೆ ಭದ್ರತೆ ಕಲ್ಪಿಸಬೇಕು

ಗೋಧ್ರಾ ದುರಂತದ ರೀತಿ ಮತ್ತೊಮ್ಮೆ ಏನಾದರು ಅಹಿತಕರ ಘಟನೆ ಕರ್ನಾಟಕದಲ್ಲಿ ಆಗಬಹುದು. ನನಗೆ ಈ ಬಗ್ಗೆ ಮಾಹಿತಿ ಸಿಗುತ್ತಿದೆ ಎಂದು ಹೇಳಿದ್ದಾರೆ. ಈ ಹಿಂದೆ ಕರಸೇವಕರು ಅಯೋಧ್ಯೆಯಿಂದ ಹಿಂತಿರುಗುವಾಗ ಗುಜರಾತ್‌ನಲ್ಲಿ ಗೋಧ್ರಾ ದುರಂತ ನಡೆದಿತ್ತು. ಈ ಬಾರಿ ಅಯೋಧ್ಯೆಗೆ ತೆರಳುವ ಭಕ್ತರಿಗೆ ಸರ್ಕಾರ ರಕ್ಷಣೆ ನೀಡಬೇಕು. ಈ ಬಗ್ಗೆ ಮಾಹಿತಿ ಸಿಕ್ಕಿಯೇ ನಾನು ಹೇಳುತ್ತಿದ್ದೇನೆ ಎಂದು ಹರಿಪ್ರಸಾದ್ ಹೇಳಿದ್ದಾರೆ.

ರಾಜಕೀಯ ಕಾರ್ಯಕ್ರಮ: ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಕಾರ್ಯಕ್ರಮ ಕುರಿತು ಮಾತನಾಡಿದ ಅವರು, ರಾಮಮಂದಿರ ಉದ್ಘಾಟನೆ ಧಾರ್ಮಿಕ ಕಾರ್ಯಕ್ರಮ ಅಲ್ಲ. ಇದೊಂದು ರಾಜಕೀಯ ಕಾರ್ಯಕ್ರಮವಾಗಿ ಬದಲಾಗುತ್ತಿದೆ. ಧಾರ್ಮಿಕ ಕಾರ್ಯಕ್ರಮ ಆಗಿದ್ದರೆ ನಾವೆಲ್ಲರೂ ಹೋಗುತ್ತಿದ್ದೆವು. ಧಾರ್ಮಿಕ ಕಾರ್ಯಕ್ರಮ ಆಗಿದ್ದರೆ ಧಾರ್ಮಿಕ ಮುಖಂಡರು ಭಾಗಿ ಆಗಬೇಕಿತ್ತು. ಶಂಕರಾಚಾರ್ಯರು ಮೂಲ ಗುರುಗಳು. ಅದೇ ರೀತಿ ಧರ್ಮ ಗುರುಗಳು ನಡೆಸಿಕೊಟ್ಟಿದ್ದರೆ ಅದು ಧಾರ್ಮಿಕ ಕಾರ್ಯಕ್ರಮ ಆಗುತ್ತಿತ್ತು, ಆದರೆ ರಾಮಮಂದಿರ ಉದ್ಘಾಟನೆ ಹಾಗೆ ಆಗುತ್ತಿಲ್ಲ ಎಂದು ಹೇಳಿದ್ದಾರೆ.

ಹುಬ್ಬಳ್ಳಿ ಕರಸೇವಕರ ಬಂಧನ ವಿರುದ್ಧ ಬಿಜೆಪಿ ಪ್ರತಿಭಟನೆ

ನಾನೂ ಕರ ಸೇವಕ, ನನ್ನನ್ನೂ ಬಂಧಿಸಿ: ಶಾಸಕ ಟಿ.ಎಸ್.ಶ್ರೀವತ್ಸ ಸವಾಲು



ಮೈಸೂರು,ಜ.3(ಎಂಟಿವೈ)– ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಪಾಲ್ಗೊಂಡಿದ್ದ ಹುಬ್ಬಳ್ಳಿಯಲ್ಲಿ ಕರಸೇವಕರ ಬಂಧನ ಖಂಡಿಸಿ ಮೈಸೂರಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ನಗರ ಮತ್ತು ಜಿಲ್ಲಾ ಬಿಜೆಪಿ ಘಟಕ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ನೂರಾರು ಕಾರ್ಯಕರ್ತರು 'ನಾವೂ ಕರ ಸೇವಕರು ನಮ್ಮನ್ನೂ ಬಂಧಿಸಿ' ಎಂದು ಘೋಷಣೆ ಕೂಗಿದರು.

ಹುಬ್ಬಳಿಯಲ್ಲಿ 31 ವರ್ಷದ ಹಳೆಯ ಪ್ರಕರಣದಲ್ಲಿ ಹಿಂದೂ ಸಂಘಟನೆ ಕಾರ್ಯಕರ್ತ ಶ್ರೀಕಾಂತ್ ಪೂಜಾರಿ ಎಂಬುವವರನ್ನು ಬಂಧಿಸಿರುವುದು ಖಂಡನೀಯ. ಕರಸೇವಕರನ್ನು ಬಂಧಿಸುವುದಾದರೆ ನಮ್ಮನ್ನೂ ಬಂಧಿಸಿ. ರಾಮಮಂದಿರ ಉದ್ಘಾಟನೆಗೆ ತೆರಳದಂತೆ ರಾಮ ಭಕ್ತರನ್ನು ತಡೆಯಲು ಕಾಂಗ್ರೆಸ್ ಸರ್ಕಾರದ ಹುನ್ನಾರ ನಡೆಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾನು ಹೋರಾಟದಲ್ಲಿ ಪಾಲ್ಗೊಂಡಿದ್ದೆ: ಇದೇ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಅಯೋಧ್ಯೆಯಲ್ಲಿ ರಾಮ ಜನ್ಮಭೂಮಿ ರಕ್ಷಣೆಗಾಗಿ 31 ವರ್ಷದ ಹಿಂದೆ ನಡೆದ ಹೋರಾಟದಲ್ಲಿ ನಾನು ಪಾಲ್ಗೊಂಡಿದ್ದೆ. ಹಳೆಯ ಪ್ರಕರಣಕ್ಕೆ ಕಾಂಗ್ರೆಸ್ ಸರ್ಕಾರ ಜೀವ ಕೊಡುತ್ತಿರುವ ಉದ್ದೇಶವೇನು? ಅಯೋಧ್ಯೆಗೆ ತೆರಳಲು ಸಿದ್ಧತೆ ನಡೆಸುತ್ತಿರುವ ಸಂದರ್ಭದಲ್ಲಿ ಹಳೆಯ ಪ್ರಕರಣಕ್ಕೆ ಪುನರ್ ಜೀವ ನೀಡಿ ರಾಮ ಭಕ್ತರನ್ನು ಹೆದರಿಸಲಾಗುತ್ತಿದೆ. 1992ರಲ್ಲಿ ರಾಮ ಜನ್ಮ ಭೂಮಿ ಹೋರಾಟದಲ್ಲಿ ಭಾಗಿಯಾಗಿದ್ದ ನನ್ನನ್ನೂ ಬಂಧಿಸಿ. ನಾವು ಜೈಲಿನ ಒಳಗಡೆ ಇರುತ್ತೇವೆ. ಕಾಂಗ್ರೆಸಿಗರು ರಾಮಮಂದಿರದ ಮಂತ್ರಾಕ್ಷತೆ ಮನೆ ಮನೆಗೆ ತಲುಪಿಸುವ ಕೆಲಸ ಮಾಡಲಿ ಎಂದು ಕಿಡಿಕಾರಿದರು.

ಕಾಂಗ್ರೆಸ್‌ಗೆ ಸಹಿಸಲು ಆಗುತ್ತಿಲ್ಲ: ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಯನ್ನು ಸಹಿಸಲಾಗದೇ ಕಾಂಗ್ರೆಸ್ ಸರ್ಕಾರ ಹಳೆಯ ಪ್ರಕರಣಗಳಿಗೆ ಮರುಜೀವ ನೀಡುತ್ತಿದೆ. ರಾಮಮಂದಿರ ಉದ್ಘಾಟನೆಗೆ ತೆರಳುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಜನಸಂಘ ಅಸ್ತಿತ್ವಕ್ಕೆ ಬಂದಾಗಿನಿಂದಲೂ ರಾಮ ಮಂದಿರ ನಿರ್ಮಾಣ ವಾಗ್ದಾನವನ್ನು ಪ್ರಣಾಳಿಕೆಯಲ್ಲಿ ನೀಡಲಾಗುತ್ತಿತ್ತು. ನ್ಯಾಯಾಲಯದ ಆದೇಶದಂತೆ ಇದೀಗ ರಾಮ ಮಂದಿರ ನಿರ್ಮಿಸಿ ಬಿಜೆಪಿಯು ತನ್ನ ಭರವಸೆಯನ್ನು ಈಡೇರಿಸುತ್ತಿದ್ದು, ಇಡೀ ದೇಶವೇ ಸಂತೋಷ ಪಡುತ್ತಿದೆ. ಆದರೆ, ಕಾಂಗ್ರೆಸಿಗರಿಗೆ ಸಹಿಸಲು ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಸಿ.ಹೆಚ್.ವಿಜಯಶಂಕರ್, ಹರ್ಷವರ್ಧನ್, ಸಿದ್ದರಾಜು, ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮಾಜಿ ಮೇಯರ್‌ಗಳಾದ ಸಂದೇಶ್‌ಸ್ವಾಮಿ, ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಹೇಮಂತ್ ಕುಮಾರ್, ಮಿರ್ಲೆ ಶ್ರೀನಿವಾಸ್‌ಗೌಡ, ಹೆಚ್.ಜಿ.ಗಿರಿಧರ್, ಬಿಜೆಪಿ ಹಿಂದುಳಿದ ಮೋರ್ಚಾದ ನಗರಾಧ್ಯಕ್ಷ ಜೋಗಿ ಮಂಜು, ಮಹಿಳಾ ಘಟಕದ ನಗರಾಧ್ಯಕ್ಷೆ ಹೇಮಾ ನಂದೀಶ್, ನಗರಪಾಲಿಕೆ ಮಾಜಿ ಸದಸ್ಯರಾದ ವೇದವತಿ, ಬಿ.ವಿ.ಮಂಜುನಾಥ್, ಪ್ರಮೀಳಾ ಭರತ್, ಕಾರ್ಯಕರ್ತರಾದ ಲಕ್ಷ್ಮಿದೇವಿ, ಕಾವೇರಿ, ಜ್ಯೋತಿ, ಜಯಂತಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ನಾವು ರಾಜ್ಯವನ್ನು ಬಿಜೆಪಿ ಮುಕ್ತ ಮಾಡಲ್ಲ; ಆದರೆ, ಸದಾ ವಿರೋಧ ಪಕ್ಷದಲ್ಲಿ ಕೂರಿಸ್ತೇವೆ!

● ಮುಖ್ಯಮಂತ್ರಿ ಸಿದ್ದರಾಮಯ್ಯ ಎದಿರೇಟು ● ಹುಬ್ಬಳ್ಳಿಯ ಆರೋಪಿ ಬಂಧನ ಮುಂದಿಟ್ಟುಕೊಂಡು ಹೋರಾಟಕ್ಕೆ ಖಂಡನೆ



ಬೆಂಗಳೂರು, ಜ.3(ಕೆಎಂಶಿ)– ದೇವರು–ಧರ್ಮದ ಹೆಸರಲ್ಲಿ ಕ್ಷುಲಕ ರಾಜಕೀಯ ಮಾಡುವುದನ್ನು ಬಿಟ್ಟು ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುವ ಪ್ರಯತ್ನ ಮಾಡಿ ಎಂದು ಪ್ರತಿಭಟನಾನಿರತ ರಾಜ್ಯ ಬಿಜೆಪಿ ನಾಯಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕಿವಿಮಾತು ಹೇಳಿದ್ದಾರೆ.

ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಅವರು, ದೇಶವನ್ನು ಕಾಂಗ್ರೆಸ್ ಮುಕ್ತ ಮಾಡುತ್ತೇವೆ ಎಂದು ಬಿಜೆಪಿ ರೀತಿ ನಾವು ರಾಜ್ಯವನ್ನು ಬಿಜೆಪಿ ಮುಕ್ತ ಮಾಡುತ್ತೇವೆ ಎಂಬ ಸೊಕ್ಕಿನ ಹೇಳಿಕೆಗಳನ್ನು ನೀಡುವುದಿಲ್ಲ. ಆದರೆ ರಾಜ್ಯದಲ್ಲಿ ಬಿಜೆಪಿಯನ್ನು ಶಾಶ್ವತವಾಗಿ ವಿರೋಧಪಕ್ಷದ ಸ್ಥಾನದಲ್ಲಿ ಕೂರಿಸಬೇಕೆಂಬುದು ನನ್ನ ಗುರಿ. ಇದಕ್ಕೆ ಆ ಪಕ್ಷದ ನಾಯಕರ ಇತ್ತೀಚಿನ ಅವಾಂತರಗಳನ್ನು ಗಮನಿಸಿದರೆ ಗುರಿ ಸಾಧನೆಗೆ ಅವರೇ ಸಹಕಾರ ನೀಡುತ್ತಿರುವಂತೆ ಕಾಣುತ್ತಿದೆ ಎಂದಿದ್ದಾರೆ. ನಾಲ್ಕೂವರೆ ವರ್ಷಗಳ ಕಾಲ ದುರಾಡಳಿತ ಮತ್ತು ಭ್ರಷ್ಟಾಚಾರದ ಹಗರಣಗಳಲ್ಲಿಯೇ ಕಾಲ ಕಳೆದಿದ್ದ ಭಾರತೀಯ ಜನತಾ ಪಕ್ಷಕ್ಕೆ ಕಾಂಗ್ರೆಸ್ ಸರ್ಕಾರದ ಸಾಧನೆಗಳಿಗೆ ವ್ಯಕ್ತವಾಗುತ್ತಿರುವ ಜನಸ್ಪಂದನ ದಿಗಿಲು ಹುಟ್ಟಿಸಿದೆ, ಇದರಿಂದ ಹುಬ್ಬಳ್ಳಿಯ ಆರೋಪಿಯೊಬ್ಬನ ಬಂಧನದ ವಿಷಯ ಹಿಡಿದುಕೊಂಡು ಹೋರಾಡುತ್ತಿದ್ದಾರೆ.

ಯಡಿಯೂರಪ್ಪ ಹಿಂದೂ ಅಲ್ವಾ: ಅಪರಾಧಿಗಳಿಗೆ ಜಾತಿ, ಧರ್ಮಗಳ ಬಣ್ಣ ಹಚ್ಚುವುದು ಅತ್ಯಂತ ಅಪಾಯಕಾರಿ ಎನ್ನುವುದನ್ನು ಬಿಜೆಪಿ ನಾಯಕರು ಅರ್ಥಮಾಡಿಕೊಳ್ಳಬೇಕು. ರಾಜ್ಯದಲ್ಲಿ ಹಿಂದೆ ಬಿಜೆಪಿ ಸರ್ಕಾರ ಇದ್ದಾಗಲೇ ಲೋಕಾಯುಕ್ತ ಪೊಲೀಸರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಬಂಧಿಸಿದ್ದರು, ಯಡಿಯೂರಪ್ಪ ಅವರಿಗಿಂತ ದೊಡ್ಡ ಹಿಂದೂ, ರಾಮ ಭಕ್ತ ಯಾರಿದ್ದಾರೆ, ಹಾಗಿದ್ದರೆ ಆಗಿನ ಸರ್ಕಾರ ಹಿಂದೂ ವಿರೋಧಿಯೇ, ಪರಿವಾರದ ನಾಯಕರು ಕೂಡಾ ಯಡಿಯೂರಪ್ಪ ಅವರನ್ನು ಬಂಧಿಸಿದ ಸರ್ಕಾರ ಹಿಂದೂ ವಿರೋಧಿ ಎಂದು ಕೂಗಾಡಲಿಲ್ಲ, ಈಗ ಏಕೆ ಈ ಕೂಗಾಟ ಎಂದು ಟೀಕಿಸಿದ್ದಾರೆ. ರಾಜ್ಯದ ಬಿಜೆಪಿಯ ಸ್ಥಿತಿ ಒಂದು ಮನೆ ನೂರು ಬಾಗಿಲು ಎಂಬಂತಾಗಿದೆ, ಆ ಪಕ್ಷದ ರಾಜ್ಯಾಧ್ಯಕ್ಷರನ್ನು ಅದೇ ಪಕ್ಷದ ಹಿರಿಯ ನಾಯಕರು ಈಗಲೂ ಒಪ್ಪಿಕೊಂಡಿಲ್ಲ, ವಿರೋಧ ಪಕ್ಷದ ನಾಯಕರ ಮಾತಿಗೆ ಸದನದಲ್ಲಿಯೇ ಸದಸ್ಯರು ಬೆಲೆ ಕೊಟ್ಟಿಲ್ಲ.

ಯತ್ನಾಳ್‌ಗೆ ಕನಿಷ್ಠ ನೋಟಿಸ್ ನೀಡಲಾಗುತ್ತಿಲ್ಲ : ಯಡಿಯೂರಪ್ಪ ಮತ್ತು ಅವರ ಮಕ್ಕಳ ವಿರುದ್ಧ ದಿನಕ್ಕೊಂದು ಗಂಭೀರ ಸ್ವರೂಪದ ಆರೋಪ ಮಾಡುತ್ತಿರುವ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಅವರಿಗೆ ಕನಿಷ್ಠ ಒಂದು ಎಚ್ಚರಿಕೆಯ ನೋಟಿಸ್ ನೀಡಲಾಗದಷ್ಟು ಪಕ್ಷ ದುರ್ಬಲವಾಗಿದೆ. ಕಾಂಗ್ರೆಸ್ ಸರ್ಕಾರ ದಿನದಿಂದ ದಿನಕ್ಕೆ ಜನಾನುರಾಗಿಯಾಗುತ್ತಿದೆ. ಈ ಹತಾಶೆಯಿಂದ ಹೊರ ಬರಲು ಒಬ್ಬ ಆರೋಪಿಯನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರು ಹೋರಾಡುತ್ತಿದ್ದಾರೆ.

ಹಿಂದೂ ಧರ್ಮಕ್ಕೂ ಬಿಜೆಪಿ ನಾಯಕರು ಅವಮಾನ ಮಾಡುತ್ತಿದ್ದಾರೆ. ಇದು ಧರ್ಮ ದ್ರೋಹದ ನಡೆ, ರಾಜ್ಯ ಬಿಜೆಪಿ ನಾಯಕರಲ್ಲಿ ನಾನು ವಿನಂತಿ ಮಾಡುತ್ತೇನೆ ಕಾನೂನಿಗೆ ತನ್ನ ಕೆಲಸ ಮಾಡಲು ಬಿಡಿ ಎಂದಿದ್ದಾರೆ.

ಬೆಂಗಳೂರಲ್ಲೂ ಬಿಜೆಪಿ ಭಾರೀ ಪ್ರತಿಭಟನೆ



ಬೆಂಗಳೂರು: 1992ರಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ನಡೆದ ಆಂದೋಲನದ ವೇಳೆ ಉಂಟಾದ ಗಲಭೆಗೆ ಸಂಬಂಧಿಸಿದಂತೆ ಹಿಂದೂ ಕಾರ್ಯಕರ್ತನ ಬಂಧನವನ್ನು ಖಂಡಿಸಿ ಕರ್ನಾಟಕ ಬಿಜೆಪಿ ಬುಧವಾರ ರಾಜ್ಯದ ಹಲವು ಭಾಗಗಳಲ್ಲಿ ಬೃಹತ್ ಪ್ರತಿಭಟನೆ ನಡೆಸಿದೆ.

ಕರ್ನಾಟಕದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪದೇ ಪದೆ ಹಿಂದೂಗಳ ಭಾವನೆಗಳಿಗೆ ಧಕ್ಕೆ ತರುತ್ತಿದೆ ಎಂದು ಆರೋಪಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಮಂಗಳವಾರ ಪ್ರತಿಭಟನೆಗೆ ಕರೆ ನೀಡಿದ್ದರು. ಬಂಧನವನ್ನು ಖಂಡಿಸಿದ ವಿಜಯೇಂದ್ರ, ಉತ್ತರಪ್ರದೇಶದ ಅಯೋಧ್ಯೆಯಲ್ಲಿ ರಾಮಮಂದಿರದ ಶಂಕುಸ್ಥಾಪನೆಗೆ ಕೆಲವೇ ದಿನಗಳ ಮೊದಲು 31 ವರ್ಷಗಳ ಹಿಂದಿನ ಪ್ರಕರಣವನ್ನು ಪುನಃ ತೆರೆಯುವುದರ ಹಿಂದಿನ ರಾಜ್ಯ ಸರ್ಕಾರದ ಉದ್ದೇಶವನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಕರ್ನಾಟಕ ಮತ್ತು ದೇಶದ ಜನರ ಮುಂದೆ ಬಿಜೆಪಿ ಕಾಂಗ್ರೆಸ್ ಸರ್ಕಾರವನ್ನು ಬಯಲಿಗೆಳೆಯಲಿದೆ ಎಂದರು.

ಹುಬ್ಬಳ್ಳಿಯಲ್ಲಿ ಬಿಜೆಪಿ ವತಿಯಿಂದ ಶ್ರೀಕಾಂತ್ ಪೂಜಾರಿ ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿ ಪಕ್ಷದ ಬಾವುಟ, ಪೋಸ್ಟರ್, ಬ್ಯಾನರ್ ಹಿಡಿದು ಮೆರವಣಿಗೆ ನಡೆಸಲಾಯಿತು. ಬೆಂಗಳೂರಿನಲ್ಲಿ ಪಕ್ಷದ ಮುಖಂಡರು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಸಂಸದರು, ಮಾಜಿ ಸಚಿವರಾದ ಡಾ.ಸಿ.ಎನ್.ಅಶ್ವಥ್ ನಾರಾಯಣ್, ಬೈರತಿ ಬಸವರಾಜ್, ಕೆ. ಗೋಪಾಲಯ್ಯ, ಸಂಸದ ಪಿ.ಸಿ.ಮೋಹನ್ ಹಾಗೂ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ನಾವು ದ್ವೇಷ ರಾಜಕಾರಣ ಮಾಡುತ್ತಿಲ್ಲ: ಶಾಂತಿ ಕದಡುವವರ ವಿರುದ್ಧ ಕಾನೂನು ಕ್ರಮ

ಬೆಂಗಳೂರು: ನಾವು ದ್ವೇಷ ರಾಜಕಾರಣ ಮಾಡುತ್ತಿಲ್ಲ. ಸರ್ಕಾರ, ಶಾಂತಿ ಕದಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಬುಧವಾರ ಹೇಳಿದ್ದಾರೆ.

ಹುಬ್ಬಳ್ಳಿಯಲ್ಲಿ ಕರಸೇವಕರ ಬಂಧನ ವಿಚಾರವಾಗಿ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಬಿಜೆಪಿ ಈ ವಿಚಾರದಲ್ಲಿ ರಾಜಕೀಯ ಸ್ಟಂಟ್ ಮಾಡುತ್ತಿದೆ. ಬಾಕಿ ಪ್ರಕರಣಗಳ ವಿಲೇವಾರಿಗೆ ಸರ್ಕಾರ ಮುಂದಾಗಿರುವುದಾಗಿ ಗೃಹ ಸಚಿವರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ರಾಜ್ಯಕ್ಕೆ ಅಗೌರವ ತೋರಿದವರ, ಕಾನೂನು ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ಬಿಜೆಪಿಯವರಿಗೆ 7 ತಿಂಗಳ ಕಾಲ ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲು ಸಾಧ್ಯವಾಗಿರಲಿಲ್ಲ. ಈಗ ಚುನಾವಣೆ ಸಮೀಪಿಸುತ್ತಿದೆ. ಹೀಗಾಗಿ ತಾವು ರಾಜಕೀಯವಾಗಿ ಬದುಕಿದ್ದೇವೆ ಎಂದು ತೋರಿಸಿಕೊಳ್ಳಲು ಹೀಗೆ ಮಾತನಾಡುತ್ತಿದ್ದಾರೆ ಎಂದು ತಿಳಿಸಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಹಾಗೂ ಜನ ಇದಕ್ಕೆ ಉತ್ತರ ನೀಡುತ್ತೇವೆ. ನಾವು ಅವರಂತೆ ಅಧಿಕಾರ ದುರ್ಬಳಕೆ ಮಾಡಿಕೊಂಡು, ಅನ್ಯ ಪಕ್ಷದ ಕಾರ್ಯಕರ್ತರ ಮೇಲೆ ಕೇಸ್ ಹಾಕುತ್ತಿಲ್ಲ ಬಿಜೆಪಿ ಸರ್ಕಾರ ಇದ್ದಾಗ ಹುಬ್ಬಳ್ಳಿ, ಬೆಂಗಳೂರಿನಲ್ಲಿ ಎಷ್ಟು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಕೇಸ್ ದಾಖಲಿಸಿದೆ ಎಂಬುದನ್ನು ನೋಡಿ. ನಾವು ಇದುವರೆಗೂ ಆ ರೀತಿ ಮಾಡಿಲ್ಲ. ಮುಂದೆಯೂ ಮಾಡಲ್ಲ ಎಂದರು. ಪೊಲೀಸ್ ಠಾಣೆ ಮುತ್ತಿಗೆ ಹಾಕಲು ವಿರೋಧ ಪಕ್ಷದ ನಾಯಕರು ಹುಬ್ಬಳ್ಳಿಗೆ ತೆರಳಿರುವ ಬಗ್ಗೆ ಕೇಳಿದಾಗ, ಅವರು ಹೋಗಿ ಕಟ್ಟಿ ಹಾಕಿಕೊಳ್ಳಲಿ. ಅವರ ಸರ್ಕಾರದಲ್ಲಿ ಏನೆಲ್ಲಾ ಮಾಡಿದ್ದರು ಎಂದು ನೋಡಿಕೊಳ್ಳಲಿ. ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಮವಸ್ತ್ರ ಬದಲು ಕೇಸರಿ ಬಟ್ಟೆ ಹಾಕಿಸಿದರು. ಅಂತಹ ಕೆಲಸ ನಾವು ಮಾಡಿಲ್ಲ ಎಂದು ತಿರುಗೇಟು ನೀಡಿದರು.



ಇರಾನ್‌ನಲ್ಲಿ ಅವಳಿ ಸ್ಫೋಟ; 103 ಸಾವು

ತೆಹ್ರಾನ್: ಆಗ್ನೇಯ ನಗರವಾದ ಕೆರ್ಮನ್‌ನಲ್ಲಿರುವ ಇರಾನ್ ಜನರಲ್ ಖಾಸೆಮ್ ಸುಲೇಮಾನಿ ಅವರ ಸಮಾಧಿ ಬಳಿ ಏಕಕಾಲದಲ್ಲಿ ಸಂಭವಿಸಿದ 2 ಸ್ಫೋಟಗಳಲ್ಲಿ 103 ಜನರು ಸಾವಿಗೀಡಾಗಿದ್ದು, 141 ಮಂದಿ ಗಾಯಗೊಂಡಿದ್ದಾರೆ. ಯುಎಸ್ ಡ್ರೋನ್ ದಾಳಿಯಲ್ಲಿ ದೇಶದ ಉನ್ನತ ಕಮಾಂಡರ್ ಖಾಸೆಮ್ ಮೃತಪಟ್ಟಿದ್ದು, ಅವರ ಪುಣ್ಯಸ್ಮರಣೆ ಆಚರಿಸಲು ಜನರು ಸಮಾರಂಭ ನಡೆಸುತ್ತಿದ್ದಾಗ ಈ ಘಟನೆ ನಡೆದಿದೆ.

ಆಲನಹಳ್ಳಿ ಗ್ರಾಪಂ, ಅಂಗನವಾಡಿ, ಶಾಲೆಗೆ ಮೈಸೂರು ಜಿಪಂ ಸಿಇಓ ಗಾಯತ್ರಿ ಭೇಟಿ

ನಿವೇಶನಗಳ ಪರಿವರ್ತನೆ ವೇಳೆ ಎಚ್ಚರ ವಹಿಸಲು ಸೂಚನೆ







ಮೈಸೂರು, ಜ.3(ಎಂಕೆ)–ತಾಲೂಕಿನ ಆಲನಹಳ್ಳಿ ಗ್ರಾಮ ಪಂಚಾಯಿತಿ, ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಶಾಲೆಗೆ ಬುಧವಾರ ಭೇಟಿ ನೀಡಿದ ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಪರಿಶೀಲನೆ ನಡೆಸಿದರು.

ಆಲನಹಳ್ಳಿ ಗ್ರಾಮ ಪಂಚಾಯಿತಿಯು ನಗರ ಪ್ರದೇಶಕ್ಕೆ ಹೊಂದಿಕೊಂಡಿದ್ದು, ಬಡಾವಣೆಗಳು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣವಾಗುತ್ತಿದೆ. ಬಡಾವಣೆಯಲ್ಲಿ ನಿವೇಶನವನ್ನು ಪರಿವರ್ತಿಸುವಾಗ ಹೆಚ್ಚಿನ ಜಾಗೃತಿ ವಹಿಸಬೇಕು. ದಾಖಲೆಗಳ ನಿರ್ವಹಣೆ ಹಾಗೂ ಸ್ಥಳ ಪರಿಶೀಲನೆಯನ್ನು ಕಡ್ಡಾಯವಾಗಿ ಮಾಡಬೇಕು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿಗೆ ಎಚ್ಚರಿಸಿದರು. ಹಾಗೆಯೇ ಮೂಲಭೂತ ಸೌಕರ್ಯದ ವ್ಯವಸ್ಥೆಗೆ ಯಾವುದೇ ತೊಡಕಾಗಬಾರದು. ಗ್ರಾಮಗಳಲ್ಲಿ ಹೆಚ್ಚಾಗಿ ನೈರ್ಮಲ್ಯ ಕಾಪಾಡಬೇಕು. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ದೊರಕುವ ಸೌಲಭ್ಯಗಳನ್ನು ಜನರಿಗೆ ದೊರಕಿಸಿಕೊಡಬೇಕು. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಿಗದಿಪಡಿಸಿರುವ ಮಾನವ ದಿನಗಳ ಗುರಿ ಸಾಧಿಸಬೇಕು. ನಗರಕ್ಕೆ ಸಮೀಪವಿರುವ ಕಾರಣ ವೈಯಕ್ತಿಕ ಕಾಮಗಾರಿಯನ್ನು ಹೆಚ್ಚಾಗಿ ಕೈಗೊಳ್ಳಿ ಎಂದರು.

> ನರೇಗಾ ಯೋಜನೆಯಡಿ ಜನರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುವ ಜೊತೆಗೆ ದುಡಿಯುವವರಿಗೆ ಕೆಲಸ ನೀಡಿ. ಶಾಲೆಗಳಿಗೆ ಅಗತ್ಯವಿರುವ ಶೌಚಾಲಯ, ಕಾಂಪೌಂಡ್, ಆಟದ ಮೈದಾನ, ಪೌಷ್ಟಿಕ ಕೈತೋಟ ಅಭಿವೃದ್ಧಿಪಡಿಸಲು ಕ್ರಮವಹಿಸಬೇಕು. ಜೊತೆಗೆ ಶಾಲೆಗೆ ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಕಲ್ಪಿಸಿ.
> –ಕೆ.ಎಂ.ಗಾಯತ್ರಿ

ಅಂಗನವಾಡಿಗೆ ಭೇಟಿ: ಇದೇ ವೇಳೆ ಆಲನಹಳ್ಳಿ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ಕೇಂದ್ರದಲ್ಲಿ ಮಕ್ಕಳಿಗೆ ಸರಿಯಾಗಿ ಶಾಲಾ ಪೂರ್ವ ಶಿಕ್ಷಣ ನೀಡಬೇಕು. ಗಾಳಿ, ಬೆಳಕು ಉತ್ತಮವಾಗಿರಬೇಕು. ಪ್ರಮುಖವಾಗಿ ಸ್ವಚ್ಛತೆ ಕಾಯ್ದುಕೊಳ್ಳಬೇಕು. ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರದ ಬಗ್ಗೆ ಮಾಹಿತಿ ಪಡೆದು, ಶುದ್ಧ ಕುಡಿಯುವ ನೀರು ನೀಡಬೇಕು. ಮಕ್ಕಳ ಮೇಲೆ ಸದಾ ನಿಗಾ ವಹಿಸಬೇಕು ಎಂದು ಅಂಗನವಾಡಿ ಮೇಲ್ವಿಚಾರಕರಿಗೆ ಜಿಪಂ ಸಿಇಓ ಸೂಚಿಸಿದರು. ಬಳಿಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳ ಜೊತೆಗೆ ಸಂವಾದ ನಡೆಸಿದ ಅವರು, ಬಿಸಿಯೂಟ, ಮಕ್ಕಳ ಪಾಠದ ಕುರಿತು ಮಾಹಿತಿ ಪಡೆದರು. ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಿ ಆರೋಗ್ಯ ತಪಾಸಣೆ ಮಾಡಿಸಬೇಕು. ಅವರಿಗೆ ಹೆಚ್ಚಿನ ಪೌಷ್ಟಿಕಾಂಶ ಹೊಂದಿರುವ ಹಾಲು, ಮೊಟ್ಟೆಯಂತಹ ಆಹಾರ ನೀಡಬೇಕು ಎಂದರು.

ನಂತರ ಸಂಜೀವಿನಿ ಒಕ್ಕೂಟದ ಸದಸ್ಯೆ ಸವಿತಾ ಅವರ ಕೈಮಗ್ಗ ನೇಕಾರಿಕೆ ಘಟಕಕ್ಕೆ ಭೇಟಿ ನೀಡಿ, ತಯಾರಿಸಿದ ರೇಷ್ಮೆ ಸೀರೆ ಬಗ್ಗೆ ಮಾಹಿತಿ ಪಡೆದರು. ಹೆಚ್ಚಿನ ಸೀರೆ ತಯಾರಿಸಿದರೆ ಮಾರಾಟಕ್ಕೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು. ತಾಪಂ ಇಓ ಎಂ.ಎಸ್.ಗಿರಿಧರ್, ಪಿಡಿಓ ಡಿ.ರವಿ, ಕಾರ್ಯದರ್ಶಿ ಸಂಜೀವ, ಹನುಮಂತರಾಯ ತಳವಾರ, ಆದಿತ್ಯ, ಪವಿತ್ರ, ಪ್ರೇಮಕುಮಾರಿ ಮತ್ತಿತರರಿದ್ದರು.

ಸೋ.ಪೇಟೆಯಲ್ಲಿ ಕ್ರೀಡಾ ವಸತಿನಿಲಯ ಆರಂಭಕ್ಕೆ ಕ್ರಮ

• ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ಭರವಸೆ • ಸಿಂಥೆಟಿಕ್ ಹಾಕಿ ಟರ್ಫ್ ಕ್ರೀಡಾಂಗಣ ಉದ್ಘಾಟನೆ



ಸೋಮವಾರಪೇಟೆ, ಜ.3–ತಾಲೂಕಿನಲ್ಲಿ ಕ್ರೀಡಾ ವಸತಿನಿಲಯ ಆರಂಭಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಭರವಸೆ ನೀಡಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಸೋಮವಾರಪೇಟೆಯ ಚೌಡ್ಲು ಗ್ರಾಮದಲ್ಲಿ ನಿರ್ಮಿಸಿರುವ 'ಸಿಂಥೆಟಿಕ್ ಹಾಕಿ ಟರ್ಫ್' ಕ್ರೀಡಾಂಗಣ ಉದ್ಘಾಟಿಸಿ ಮಾತನಾಡಿದ ಸಚಿವರು, ಕೊಡಗು ಜಿಲ್ಲೆ ಕ್ರೀಡೆಗೆ ಹೆಸರುವಾಸಿಯಾಗಿದೆ. ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು. ಸಿಂಥೆಟಿಕ್ ಟರ್ಫ್ ಹಾಕಿ ಕ್ರೀಡಾಂಗಣ ಬಳಿ ತಡೆಗೋಡೆ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗೆ ಹೆಚ್ಚಿನ ಅನುದಾನ ಬಿಡುಗಡೆಗೆ ಕ್ರೀಡಾ ಸಚಿವರ ಜೊತೆಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಜಿಲ್ಲೆಯ ಅಭಿವೃದ್ಧಿಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಶಿಕ್ಷಣ, ಆರೋಗ್ಯ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಸೋಮವಾರಪೇಟೆಯಲ್ಲಿ ಹಾಕಿ ಕ್ರೀಡಾಂಗಣ ನಿರ್ಮಾಣಕ್ಕೆ ಹಿಂದೆ ಕ್ರೀಡಾ ಸಚಿವರಾಗಿದ್ದ ಎಂ.ಪಿ. ಅಪ್ಪಚ್ಚುರಂಜನ್ ಅವರ ಕೊಡುಗೆ ಹೆಚ್ಚಿನದ್ದಾಗಿದೆ. ಕ್ರೀಡಾಂಗಣದ ಅಭಿವೃದ್ಧಿಗೆ ಹೆಚ್ಚುವರಿ 40 ಲಕ್ಷ ರೂ. ಅನುದಾನ ಬಿಡುಗಡೆಗೆ ಶಾಸಕ ಡಾ. ಮಂಥರ್‌ಗೌಡ ಶ್ರಮಿಸಿದ್ದಾರೆ. ರಾಷ್ಟ್ರೀಯ ಹಾಕಿ ಕ್ರೀಡಾಕೂಟ ಸೋಮವಾರಪೇಟೆ, ಕೂಡಿಗೆ, ಮಡಿಕೇರಿ ಮತ್ತು ಪೊನ್ನಂಪೇಟೆಯಲ್ಲಿ ನಡೆಯಲಿದೆ ಎಂದು ಸಚಿವರು ಮಾಹಿತಿ ನೀಡಿದರು.

ಶಾಸಕ ಡಾ.ಮಂಥರ್‌ಗೌಡ ಮಾತನಾಡಿ, ಸೋಮವಾರಪೇಟೆಯಲ್ಲಿ ಹಾಕಿ ಕ್ರೀಡಾಂಗಣ ಉದ್ಘಾಟನೆಯಾಗಿರುವುದು ಎಲ್ಲರಿಗೂ ಸಂತಸ ತಂದಿದೆ. ಜೊತೆಗೆ ಇಲ್ಲಿನ ಜನರ ಕನಸು ನನಸಾಗಿದೆ. ಜಿಲ್ಲೆಯಲ್ಲಿ ಹಾಕಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದ್ದು, ಕ್ರೀಡಾಂಗಣ ನಿರ್ವಹಣೆ ಮಾಡುವುದು ಅತ್ಯಗತ್ಯವಾಗಿದೆ. ಸೋಮವಾರಪೇಟೆ ಹಾಕಿ ಕ್ರೀಡಾಂಗಣಕ್ಕೆ ಜಾಗ ನೀಡಿದ ಸಿ.ಕೆ.ಕಾಳಪ್ಪ ಅವರ ಹೆಸರಿಡಬೇಕು ಎಂದು ಸಚಿವರಿಗೆ ಮನವಿ ಮಾಡಿದರು.

ಇದೇ ವೇಳೆ ಹಾಕಿ ಕ್ರೀಡೆ ಬೆಳವಣಿಗೆಗೆ ಶ್ರಮವಹಿಸಿದ ಬಿ.ಎಂ.ಸುರೇಶ್ ಹಾಗೂ ಹಾಕಿ ಕ್ರೀಡಾಪಟು ಸಿ.ಎಲ್.ಸುಬ್ಬಯ್ಯ, ಕ್ರೀಡಾಂಗಣದ ಸ್ಥಳ ದಾನಿ ಕುಟುಂಬದ ಸದಸ್ಯರಾದ ಸುದೈವ, ಸುಧರ್ಮ, ಈಶಾನ್ ಅವರನ್ನು ಸನ್ಮಾನಿಸಲಾಯಿತು. ಹಾಕಿ ಕ್ರೀಡಾ ತರಬೇತುದಾರ ಶಶಿಧರ್, ಕ್ರೀಡಾ ವಸತಿ ನಿಲಯ ಆರಂಭಕ್ಕೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ನಾಗರಾಜು ಯಾದವ್, ಉಪ ವಿಭಾಗಾಧಿಕಾರಿ ವಿನಾಯಕ್ ನರ್ವಾಡೆ, ತಹಶೀಲ್ದಾರ್ ಎಸ್.ಎನ್.ನರಗುಂದ, ಪಪಂ ಮುಖ್ಯಾಧಿಕಾರಿ ನಾಚಪ್ಪ, ಯುವ ಸಬಲೀಕರಣ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ವಿ.ಟಿ.ವಿಸ್ಮಯಿ ಹಾಜರಿದ್ದರು.

ಸಚಿವರ ಕಾರು ತಡೆಯಲು ಬಿಜೆಪಿ ಕಾರ್ಯಕರ್ತರ ಯತ್ನ



ಸೋಮವಾರಪೇಟೆಯ 'ಸಿಂಥೆಟಿಕ್ ಹಾಕಿ ಟರ್ಫ್' ಮೈದಾನದ ಉದ್ಘಾಟನೆ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಪಾಲಿಸಿಲ್ಲ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರ ಕಾರನ್ನು ತಡೆಯಲು ಯತ್ನಿಸಿದರು.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಕ್ರೀಡಾ ಸಚಿವರಾಗಿದ್ದ ಎಂ.ಪಿ.ಅಪ್ಪಚ್ಚುರಂಜನ್ ಅವರ ಪ್ರಯತ್ನದಿಂದ ಸೋಮವಾರಪೇಟೆಯಲ್ಲಿ ಹಾಕಿ ಟರ್ಫ್ ಮೈದಾನ ನಿರ್ಮಾಣವಾಗಿದೆ. ಆದರೆ, ಉದ್ಘಾಟನಾ ಸಮಾರಂಭಕ್ಕೆ ಅವರನ್ನು ಆಹ್ವಾನಿಸಿಲ್ಲ. ಸಂಸದ ಪ್ರತಾಪ್ ಸಿಂಹ, ಎಂಎಲ್‌ಸಿ ಸುಜಾ ಕುಶಾಲಪ್ಪ ಹಾಗೂ ಚೌಡ್ಲು ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಮೈದಾನ ಉದ್ಘಾಟನೆಗೆ ಆಗಮಿಸಿದ್ದ ಸಚಿವ ಎನ್.ಎಸ್.ಭೋಸರಾಜು ಅವರ ಕಾರನ್ನು ತಡೆಯಲು ಯತ್ನಿಸಿದರು. ನಂತರ ಪೊಲೀಸರು ಪ್ರತಿಭಟನಾಕಾರರನ್ನು ತಡೆದರು.

ಇದೇ ವೇಳೆ ಸೋಮವಾರಪೇಟೆ ಉಪವಿಭಾಗ ಡಿವೈಎಸ್ಪಿ ಗಂಗಾಧರಪ್ಪ ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಬಿಜೆಪಿ ತಾಲೂಕು ಅಧ್ಯಕ್ಷ ಮನುಕುಮಾರ್, ನಗರಾಧ್ಯಕ್ಷ ಸೋಮೇಶ್, ಜಿಪಂ ಮಾಜಿ ಸದಸ್ಯ ದೀಪಕ್, ತಾಪಂ ಮಾಜಿ ಸದಸ್ಯ ಅಭಿಮನ್ಯು ಕುಮಾರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕೊಡುಗೆ ನೀಡಿದವರಿಗೆ ಗೌರವ ನೀಡಬೇಕು: ಬಳಿಕ ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಸಂಸದ, ಎಂಎಲ್‌ಸಿ ಅವರ ಬಳಿ ಮಾತನಾಡಿದ್ದೇನೆ. ಮೈದಾನ ನಿರ್ಮಾಣಕ್ಕೆ ಕೊಡುಗೆ ನೀಡಿದವರಿಗೆ ಗೌರವ ನೀಡುವಂತಹ ಕೆಲಸವಾಗಬೇಕು ಎಂದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, 17 ವರ್ಷದ ಬಾಲಕಿಯರ ರಾಷ್ಟ್ರೀಯ ಮಟ್ಟದ ಹಾಕಿ ಪಂದ್ಯಾವಳಿ ಜ.4 ರಿಂದ ಈ ಕ್ರೀಡಾಂಗಣದಲ್ಲಿ ಆರಂಭಗೊಳ್ಳಲಿದೆ. ಒಬ್ಬ ಜನಪ್ರತಿನಿಧಿಯಾಗಿ ಮೈದಾನದ ಕಾಮಗಾರಿಯನ್ನು ಪೂರ್ಣಗೊಳಿಸಿದ್ದೇನೆ. ರಾಜಕೀಯ ಚುನಾವಣೆ ವೇಳೆ ಮಾತ್ರ. ನಂತರ ಅಭಿವೃದ್ಧಿ ಕೆಲಸ ಮುಖ್ಯ. ಈ ಬಗ್ಗೆ ಅವರು ಅವಲೋಕನ ಮಾಡಿಕೊಳ್ಳಬೇಕು ಎಂದರು.

ನಾಳೆ ಡಿಸಿ ಕಚೇರಿ ಎದುರು ಧರಣಿ ಸತ್ಯಾಗ್ರಹ



ಮಡಿಕೇರಿ, ಜ.3–ಕೊಡವ ಲ್ಯಾಂಡ್ ಭೂರಾಜಕೀಯ ಸ್ವಾಯತ್ತತೆಗಾಗಿ ಆಯೋಗ ರಚಿಸುವಂತೆ ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಜ.5ರಂದು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ.

ಹೊಸವರ್ಷದಲ್ಲಿ ಮತ್ತೆ ಕೊಡವ ಲ್ಯಾಂಡ್ ಹೋರಾಟವನ್ನು ತೀವ್ರಗೊಳಿಸಲಿದ್ದು, ಶುಕ್ರವಾರ ಬೆಳಗ್ಗೆ 10.30 ರಿಂದ 11.30ರ ವರೆಗೆ ಜಿಲ್ಲಾಧಿಕಾರಿ ಕಚೇರಿ ಎದುರು ಶಾಂತಿಯುತ ಧರಣಿ ನಡೆಸಿ ಬೇಡಿಕೆಗಳ ಈಡೇರಿಸುವಂತೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಿಧಾನದ ಆರ್ಟಿಕಲ್ 244 ಆರ್/ಡಬ್ಲ್ಯೂ 6ನೇ ಮತ್ತು 8ನೇ ಶೆಡ್ಯೂಲ್‌ನಡಿ ಭೂರಾಜಕೀಯ ಸ್ವಾಯತ್ತತೆಗಾಗಿ ಕೊಡವ ಕ್ವೆಸ್ಟ್‌ನ ಕಾನೂನುಬದ್ಧ ಆಕಾಂಕ್ಷೆಗಳನ್ನು ಪರಿಹರಿಸಲು 2ನೇ ರಾಜ್ಯಗಳ ಮರು–ಸಂಘಟನೆ ಆಯೋಗ ರಚಿಸಬೇಕು. ಈ ಕುರಿತು ಕೇಂದ್ರದ ಮಾಜಿ ಸಚಿವ ಡಾ.ಸುಬ್ರಮಣಿಯನ್‌ಸ್ವಾಮಿ ಅವರು ಸಿಎನ್‌ಸಿ ಪರ ಕಾನೂನು ಹೋರಾಟ ಮಾಡುತ್ತಿದ್ದಾರೆ. ಸರ್ಕಾರ ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಿ.ಟಿ.ಶ್ರೀನಿವಾಸ್ ನಿಧನ



ಗೋಣಿಕೊಪ್ಪ ಜ.3– ಇಲ್ಲಿನ ನಿವಾಸಿಯಾದ ಸಂಗೀತ ಕೀಬೋರ್ಡ್ ಕಲಾವಿದ ವಿ.ಟಿ.ಶ್ರೀನಿವಾಸ್ (63) ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಇಲ್ಲಿನ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಸಾಕಷ್ಟು ಕಾರ್ಯಕ್ರಮದಲ್ಲಿ ಸಂಗೀತ ಕಲೆ ನೀಡಿ, ಸಂಗೀತ ತರಬೇತಿ ನೀಡುತ್ತಿದ್ದರು.

ಕಾಡಾನೆ ದಾಳಿ: ಕಾರ್ಮಿಕ ಮಹಿಳೆಗೆ ಗಂಭೀರ ಗಾಯ




ಸಿದ್ದಾಪುರ, ಜ.3–ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕ ಮಹಿಳೆಯ ಮೇಲೆ ಕಾಡಾನೆ ದಾಳಿ ನಡೆಸಿದ ಪರಿಣಾಮ ಆಕೆ ಗಂಭೀರವಾಗಿ ಗಾಯಗೊಂಡಿರುವ ಘಟನೆ ಬುಧವಾರ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಹೇರೂರು ಕಾಫಿ ತೋಟದಲ್ಲಿ ನಡೆದಿದೆ.

ತೋಟದ ಲೈನ್‌ಮನೆ ನಿವಾಸಿ ಪಂಜೀರ ಎರವರ ಮಂಜು ಅವರ ಪತ್ನಿ ಪಲ್ಲವಿ (28) ಕಾಡಾನೆ ದಾಳಿಯಿಂದ ಗಾಯ ಗೊಂಡು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ. ಈಕೆ ಬೆಳಗ್ಗೆ ಕಾಫಿ ತೋಟದ ಕೆಲಸಕ್ಕೆ ತೆರಳುತ್ತಿದ್ದ ವೇಳೆ ಜೊತೆಯಲ್ಲಿದ್ದ ಮೂರು ಕಾರ್ಮಿಕರು ಸ್ವಲ್ಪ ದೂರ ಮುಂದೆ ಹೋಗುತ್ತಿದ್ದರು. ಪಲ್ಲವಿ ಒಬ್ಬಂಟಿಯಾಗಿ ಹೋಗುತ್ತಿದ್ದಾಗ ದಿಢೀರ್ ಪ್ರತ್ಯಕ್ಷವಾದ ಕಾಡಾನೆ ಈಕೆಯ ಮೇಲೆ ದಾಳಿ ಮಾಡಿದೆ. ಇದರಿಂದ ಗಂಭೀರ ಗಾಯಗೊಂಡ ಮಹಿಳೆ ಕಾಫಿ ಗಿಡದ ಬುಡದಲ್ಲಿ ಸಿಲುಕಿಕೊಂಡಿದ್ದರು. ನಂತರ ಈಕೆ ಕೂಗಿಕೊಂಡಿದ್ದರಿಂದ ಮುಂದೆ ಹೋಗುತ್ತಿದ್ದ ಕಾರ್ಮಿಕರು ಓಡಿ ಬಂದು ಸಿದ್ದಾಪುರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಬಳಿಕ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ.

ಆರೋಗ್ಯ ವಿಚಾರಿಸಿದ ಶಾಸಕ ಪೊನ್ನಣ್ಣ: ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಶಾಸಕ ಎ.ಎಸ್.ಪೊನ್ನಣ್ಣ ಹಾಗೂ ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ, ಪಲ್ಲವಿಯ ಆರೋಗ್ಯ ವಿಚಾರಿಸಿದರು. ನಂತರ ವೈದ್ಯರೊಂದಿಗೆ ಚರ್ಚಿಸಿ ಈಕೆಯ ಆರೋಗ್ಯದ ಕುರಿತು ಮಾಹಿತಿ ಪಡೆದರು. ಇದೇ ವೇಳೆ ಎಸಿಎಫ್ ನೆಹರು, ವಲಯ ಅರಣ್ಯಾಧಿಕಾರಿ ಕಳ್ಳಿರಾ ಎಂ.ದೇವಯ್ಯ, ಅರಣ್ಯ ರಕ್ಷಕ ಅರುಣ್, ಆರ್‌ಆರ್‌ಟಿ ಸಿಬ್ಬಂದಿ ವಿನೋದ್ ಹಾಜರಿದ್ದರು.

ಕಾಡಾನೆ ಹಾವಳಿ ತಡೆಗೆ ಒತ್ತಾಯ: ಕರಡಿಗೋಡು, ಮಾಲ್ದಾರೆ, ಘಟ್ಟದಳ, ಬಾಡಗ ಬಾಣಂಗಾಲ, ಸಿದ್ದಾಪುರ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ಕಾರ್ಮಿಕರು ಹಾಗೂ ಬೆಳೆಗಾರರು ಆತಂಕದ ಜೀವನ ನಡೆಸುವಂತಾಗಿದೆ. ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವ ಮೂಲಕ ನೆಮ್ಮದಿಯ ಜೀವನ ನಡೆಸಲು ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು. ಗಾಯಗೊಂಡ ಮಹಿಳೆ ಪಲ್ಲವಿಗೆ ಸೂಕ್ತ ಪರಿಹಾರ ನೀಡಬೇಕೆಂದು ಆದಿವಾಸಿ ಮುಖಂಡ ಸಿದ್ದಪ್ಪ ಅರಣ್ಯ ಒತ್ತಾಯಿಸಿದ್ದಾರೆ.

ವಿ.ಪೇಟೆ ಕ್ಷೇತ್ರಕ್ಕೆ 72 ಕೋಟಿ ರೂ. ಅನುದಾನ



ವಿರಾಜಪೇಟೆ, ಜ.3– ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕುಡಿಯುವ ನೀರಿಗಾಗಿ 42 ಕೋಟಿ ರೂ. ಹಾಗೂ ರಸ್ತೆ ಅಭಿವೃದ್ಧಿಗೆ 30 ಕೋಟಿ ರೂ. ಸೇರಿ ಒಟ್ಟು 72 ಕೋಟಿ ರೂ. ಅನುದಾನವನ್ನು ರಾಜ್ಯ ಸರ್ಕಾರ ಬಿಡುಗಡೆಗೊಳಿಸಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

ಸಮೀಪದ ಬಿಟ್ಟಂಗಾಲ ಹೆಗ್ಗಡೆ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು 5 ತಿಂಗಳಾಗಿದ್ದು, ಹಿಂದಿನ ಬಿಜೆಪಿ ಸರ್ಕಾರ ಖಜಾನೆ ಖಾಲಿ ಮಾಡಿದೆ. ಆದರೆ, ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ ಎಂದು ಬಿಜೆಪಿ ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ಅನುದಾನ ಕ್ರೋಢೀಕರಿಸಿ, ಅಭಿವೃದ್ಧಿಗೆ ಒತ್ತು ನೀಡುತ್ತಿದೆ ಎಂದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಕಾಂಗ್ರೆಸ್ ಕಳೆದ ಚುನಾವಣೆಯಲ್ಲಿ ನೀಡಿದ್ದ ಭರವಸೆಗಳನ್ನು ರಾಜ್ಯದ ಜನತೆಗೆ ತಲುಪಿಸುತ್ತಿದೆ. ಅದರಲ್ಲೂ ಕೊಡಗಿನಲ್ಲಿ 1 ಲಕ್ಷ 13 ಸಾವಿರ ಕುಟುಂಬಗಳು ಭಾಗ್ಯಲಕ್ಷ್ಮಿ ಯೋಜನೆಯನ್ನು ಪಡೆದುಕೊಳ್ಳುತ್ತಿವೆ. ಕೊಡಗಿನ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡುವಂತೆ ಕೋರಲಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವರು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅನುದಾನ ಬಿಡುಗಡೆಗೊಳಿಸಲಿದ್ದಾರೆ ಎಂದರು.

ಶಾಸಕ ಮಂತರ್‌ಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿದರು. ವಿಧಾನಪರಿಷತ್ ಮಾಜಿ ಸದಸ್ಯರಾದ ವೀಣಾ ಅಚ್ಚಯ್ಯ, ಸಿ.ಎಸ್.ಅರುಣ್ ಮಾಚಯ್ಯ, ಪಕ್ಷದ ಜಿಲ್ಲಾ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಮುಖಂಡ ಕೆ.ಕೆ.ಮಂಜುನಾಥ್, ವಿರಾಜಪೇಟೆ ಬ್ಲಾಕ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ, ನಾಪೋಕ್ಲು ಬ್ಲಾಕ್ ಅಧ್ಯಕ್ಷ ಇಸ್ಮಾಯಿಲ್ ಇನ್ನಿತರರು ಉಪಸ್ಥಿತರಿದ್ದರು.

ನಾಲ್‌ರೋಡ್ ಬಳಿ ರೈತರಿಂದ ರಸ್ತೆ ತಡೆ

• ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ
• ಸುಮಾರು 5 ಗಂಟೆ ಕಾಲ ಸಂಚಾರ ಸ್ಥಗಿತ



ಹನೂರು, ಜ.3– ವಿವಿಧ ಬೇಡಿಕೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ಹನೂರು ತಾಲೂಕಿನ ರಾಮಾಪುರ ಹೋಬಳಿಯ ನಾಲ್‌ರೋಡ್‌ನಲ್ಲಿ ಬುಧವಾರ ರೈತ ಸಂಘದ ಪದಾಧಿಕಾರಿಗಳು ಹಾಗೂ ನೂರಾರು ರೈತರು ರಸ್ತೆ ತಡೆದು ಬೃಹತ್ ಪ್ರತಿಭಟನೆ ನಡೆಸಿದರು.

ಗ್ರಾಮದ ಮುಖ್ಯ ರಸ್ತೆಯಲ್ಲಿ ಬೆಳಗ್ಗೆ 10 ಗಂಟೆಯ ಸುಮಾರಿಗೆ ಸಮಾವೇಶಗೊಂಡ ನೂರಾರು ರೈತರು ಮಧ್ಯಾಹ್ನ 3.15 ರವರೆಗೆ ರಸ್ತೆ ತಡೆದು, ಬೇಡಿಕೆ ಈಡೇರಿಸುವಂತೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಸುಮಾರು 5 ಗಂಟೆಗಳ ಕಾಲ ಸಂಚಾರ ಸ್ಥಗಿತಗೊಂಡಿತ್ತು. ಪರಿಣಾಮ ಸಾರ್ವಜನಿಕರು ತೊಂದರೆಪಟ್ಟರು. ಇತ್ತ ಪ್ರತಿಭಟನಾಕಾರರು ರಸ್ತೆ ಮಧ್ಯೆಯೇ ಊಟ ಮಾಡಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಹನೂರು ಪಟ್ಟಣದಿಂದ ರಾಮಾಪುರ ಮೂಲಕ ನಾಲ್‌ರೋಡ್‌ವರೆಗಿನ ರಸ್ತೆಯು ತೀರ ಹದಗೆಟ್ಟಿದ್ದು ಈ ರಸ್ತೆಯಲ್ಲೇ 40 ಟನ್‌ವರೆಗಿನ ಭಾರ ಹೊತ್ತು ವಾಣಿಜ್ಯ ವಾಹನಗಳು ಓಡಾಡುತ್ತಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಆದ್ದರಿಂದ ಈ ರಸ್ತೆಯನ್ನು 40 ಟನ್‌ವರೆಗಿನ ಭಾರ ತಡೆದುಕೊಳ್ಳುವ ಗುಣಮಟ್ಟದ ರಸ್ತೆಯನ್ನಾಗಿ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ರಾಮಾಪುರ ಹೋಬಳಿ ಹೂಗ್ಯ ಸರ್ವೆ ನಂ. 239ರ 2700 ಎಕರೆ 35 ಸೆಂಟು ಜಮೀನು ಒಂದೇ ಆರ್‌ಟಿಸಿನಲ್ಲಿ ನಮೂದಾಗಿದ್ದು, ಅಲ್ಲಿ ವ್ಯವಸಾಯ ಮಾಡುವ ಎಲ್ಲಾ ರೈತರು ಜಮೀನು ಪೋಡುಗಳಾಗದೇ ಸರ್ಕಾರಿ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಈ ಆರ್‌ಟಿಸಿಯಲ್ಲಿರುವ ಎಲ್ಲಾ ರೈತರಿಗೂ ಪ್ರತ್ಯೇಕ ಪೋಡು ನೀಡಬೇಕು ಎಂದು ಆಗ್ರಹಿಸಿದರು.

ಅಲ್ಲದೆ ನಾಲ್‌ರೋಡ್‌ನಿಂದ ಜಲ್ಲಿಪಾಳ್ಯದವರೆಗೆ ಸಂಪರ್ಕ ಕಲ್ಪಿಸಿರುವ ವಿದ್ಯುತ್ ತಂತಿ ಕಳಪೆಯಿಂದ ಕೂಡಿದ್ದು, ಪದೇ ಪದೆ ದುರಸ್ತಿಗೊಳ್ಳುತ್ತಿದೆ. ಮಾರ್ಟಳ್ಳಿ ಹಾಗೂ ಜಲ್ಲಿಪಾಳ್ಯ ಅರಣ್ಯದಂಚಿನ ಜಮೀನುಗಳಿಗೆ ಕಾಡುಪ್ರಾಣಿಗಳು ಲಗ್ಗೆ ಇಟ್ಟು ಫಸಲನ್ನು ನಾಶಪಡಿಸುತ್ತಿವೆ. ಜೊತೆಗೆ ರೈತರ ಮೇಲೆ ದಾಳಿ ನಡೆಸುತ್ತಿವೆ. ಸುಳ್ವಾಡಿ ಹಾಗೂ ಕೂಡಲೂರು ಆಸ್ಪತ್ರೆಯಲ್ಲಿ ಆರೋಗ್ಯ ಸೇವೆ ಸಮರ್ಪಕವಾಗಿ ಸಿಗುತ್ತಿಲ್ಲ. ಕೊಟ್ಟಿಗೆ ಗೊಬ್ಬರವನ್ನು ಹೊರರಾಜ್ಯಗಳಿಗೆ ಸಾಗಿಸಲಾಗುತ್ತಿದೆ ಎಂದು ದೂರಿದರು.

ಅಧಿಕಾರಿಗಳ ಭೇಟಿ: ವಿಷಯ ತಿಳಿದು ಸ್ಥಳಕ್ಕೆ ಡಿವೈಎಸ್‌ಪಿ ಸೋಮೇಗೌಡ ಭೇಟಿ ನೀಡಿ ಪ್ರತಿಭಟನಾಕಾರರನ್ನು ಮನವೊಲಿಸಲು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಈ ವೇಳೆ ಅರಣ್ಯ, ಸೆಸ್ಕ್, ಕಂದಾಯ, ಆರೋಗ್ಯ ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕೂಡಲೇ ಸ್ಥಳಕ್ಕಾಗಮಿಸಿ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದಲ್ಲಿ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದು ರೈತರು ಎಚ್ಚರಿಸಿದರು.

ಬಳಿಕ ಗ್ರೇಡ್–2 ತಹಶೀಲ್ದಾರ್ ಧನಂಜಯ, ಸೆಸ್ಕ್ ಎಇಇ ಶಂಕರ್, ಪಿಡಬ್ಲ್ಯೂಡಿ ಇಂಜಿನಿಯರ್ ಮಹೇಶ್ ಹಾಗೂ ಎಸಿ ಮಹೇಶ್ ಸ್ಥಳಕ್ಕಾಗಮಿಸಿ ರೈತರ ಮನವಿ ಸ್ವೀಕರಿಸಿದರು.

ನಂತರ ಎಸಿ ಮಹೇಶ್ ಮಾತನಾಡಿ, ಈ ಸಂಬಂಧ ಕೂಡಲೇ ಅಧಿಕಾರಿಗಳು ಹಾಗೂ ರೈತರ ಸಭೆ ಕರೆದು ಸಮಸ್ಯೆ ಬಗೆಹರಿಸಲು ಕ್ರಮವಹಿಸುವುದಾಗಿ ಭರವಸೆ ನೀಡಿದ ಬಳಿಕ ರೈತರು ಪ್ರತಿಭಟನೆ ಹಿಂಪಡೆದರು. ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾ ಅಧ್ಯಕ್ಷ ಶಾಂತಮಲ್ಲಪ್ಪ, ಉಪಾಧ್ಯಕ್ಷ ಗೌಡೇಗೌಡ ಕಾರ್ಯದರ್ಶಿ ಭಾಸ್ಕರ್, ಸಂಘಟನಾ ಕಾರ್ಯದರ್ಶಿ ಶಕ್ತಿವೇಲು, ಮಹಿಳಾ ಘಟಕದ ಕಾರ್ಯದರ್ಶಿ ಪುಂಗುಡಿ, ತಾಲೂಕು ಅಧ್ಯಕ್ಷ ಅಮ್ಜದ ಖಾನ್, ಗ್ರಾಮ ಘಟಕದ ಅಧ್ಯಕ್ಷರು ಹಾಗೂ ವಿವಿಧ ಗ್ರಾಮದ ರೈತರು ಭಾಗವಹಿಸಿದ್ದರು.

ಕೋಟ್ಪಾ ಕೇಸ್: 8500 ರೂ. ದಂಡ ವಸೂಲಿ



ಚಾಮರಾಜನಗರ, ಜ.3– ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ಜಿಲ್ಲಾ ಕಣ್ಗಾವಲು ಘಟಕ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಕೋಟ್ಪಾ ತನಿಖಾ ತಂಡದ ಸಹಯೋಗದೊಂದಿಗೆ ಡಿಸೆಂಬರ್ ತಿಂಗಳಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೋಟ್ಪಾ ದಾಳಿ ನಡೆಸಿ ಒಟ್ಟು 68 ಪ್ರಕರಣಗಳಲ್ಲಿ 8500 ರೂ. ದಂಡ ವಿಧಿಸಿ ವಸೂಲಿ ಮಾಡಲಾಗಿದೆ.

ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು ಪಟ್ಟಣ, ಹಿರೇಬೇಗೂರು, ಅರಳೀಕಟ್ಟೆ ಹನೂರು ತಾಲೂಕಿನ ದೊರೆದೊಡ್ಡಿ, ಗೊಲ್ಲರದಿಂಬ, ಕೊಪ್ಪ, ಗಾಜನೂರು, ಮೀಣ್ಯಂ, ಎರಂಬಾಡಿ, ಸೂಳೆಕೊಪ್ಪ ಮತ್ತು ನಕ್ಕುಂದಿ ಗ್ರಾಮಗಳ ವ್ಯಾಪ್ತಿಯಲ್ಲಿ ದಾಳಿ ನಡೆಸಿ ದಂಡ ವಿಧಿಸಲಾಗಿದೆ.

ನಿಯಮ ಉಲ್ಲಂಘಿಸಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳು, ಕೋಟ್ಪಾ ಸೆಕ್ಷನ್–4 ಎಚ್ಚರಿಕೆ ನಾಮಫಲಕ ಪ್ರದರ್ಶಿಸದ ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್, ಟೀ ಸ್ಟಾಲ್, ಚಿಲ್ಲರೆ ಅಂಗಡಿಗಳು ಹಾಗೂ ಇತರೆ ಅಂಗಡಿಗಳು, ಕೋಟ್ಪಾ ಸೆಕ್ಷನ್–6(ಎ) ನಾಮಫಲಕ ಪ್ರದರ್ಶಿಸದ ತಂಬಾಕು ಮಾರಾಟವಿರುವ ಅಂಗಡಿಗಳು, ಶಿಕ್ಷಣ ಸಂಸ್ಥೆಯ 100 ಗಜಗಳ ಅಂತರದ ಒಳಗೆ ತಂಬಾಕು ಪದಾರ್ಥಗಳ ಮಾರಾಟ ಮತ್ತು ಸೇವನೆಗೆ ಉತ್ತೇಜನ ನೀಡುವ ಅಂಗಡಿಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದ ವ್ಯಕ್ತಿಗಳಿಗೆ ಸ್ಥಳದಲ್ಲೇ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗಿದೆ.

ಕರಪತ್ರ ವಿತರಿಸಿ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಮತ್ತು ತಂಬಾಕು ನಿಯಂತ್ರಣ ಕಾಯ್ದೆ ಕೋಟ್ಪಾ–2003ರ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಜಿಲ್ಲೆಯ ಎಲ್ಲಾ ಸಾರ್ವಜನಿಕ ಸ್ಥಳದ ಮಾಲೀಕರು, ಮುಖ್ಯಸ್ಥರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕೋಟ್ಪಾ ಕಾಯ್ದೆ ಉಲ್ಲಂಘನೆಯಾಗದಂತೆ ಕಟ್ಟೆಚ್ಚರ ವಹಿಸುವಂತೆ ಜಿಲ್ಲಾ ತಂಬಾಕು ನಿಯಂತ್ರಣ ಘಟಕ ಕಾರ್ಯಕ್ರಮಾಧಿಕಾರಿ ತಿಳಿಸಿದ್ದಾರೆ.

ಜ.6, ಕೊಳ್ಳೇಗಾಲ ತಾಲೂಕು ಮಟ್ಟದ ಎಸ್ಸಿ, ಎಸ್ಟಿ ಹಿತರಕ್ಷಣಾ ಸಮಿತಿ ಸಭೆ

ಚಾಮರಾಜನಗರ, ಜ.3– ಕೊಳ್ಳೇಗಾಲ ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಹಿತರಕ್ಷಣಾ ಸಮಿತಿ ಸಭೆಯು ಶಾಸಕರ ನೇತೃತ್ವದಲ್ಲಿ ಹಾಗೂ ತಹಶೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಜನವರಿ 6ರಂದು ಬೆಳಿಗ್ಗೆ 11 ಗಂಟೆಗೆ ಕೊಳ್ಳೇಗಾಲ ತಾಪಂ ಸಭಾಂಗಣದಲ್ಲಿ ನಡೆಯಲಿದೆ. ಅಹವಾಲುಗಳಿದ್ದಲ್ಲಿ ಜ.5ರ ಸಂಜೆ 5.30 ಗಂಟೆಯೊಳಗೆ ಕೊಳ್ಳೇಗಾಲ ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸುವಂತೆ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ತಾಲೂಕು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಗೌಡಿಕೆ ಡಿ. ಪುಟ್ಟಣ್ಣ ನಿಧನ



ಚಾಮರಾಜನಗರ, ಜ.3– ತಾಲೂಕಿನ ಉಮ್ಮತ್ತೂರು ಗ್ರಾಮದ ಚಲನಚಿತ್ರ ಮಂದಿರ ಮಾಲೀಕರಾಗಿದ್ದ ಗೌಡಿಕೆ ಡಿ. ಪುಟ್ಟಣ್ಣ (75) ಇಂದು ಬೆಳಗ್ಗೆ ನಿಧನರಾದರು.

ಮೃತರು ಪತ್ನಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸಂಜೆ ಸ್ವಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ಅಂಬಳೆ ಡೇರಿ ಅಧ್ಯಕ್ಷರಾಗಿ ಶಿವಾನಂದಸ್ವಾಮಿ ಆಯ್ಕೆ



ಯಳಂದೂರು, ಜ.3– ತಾಲೂಕಿನ ಅಂಬಳೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅಂಬಳೆ ಎಂ. ಶಿವಾನಂದಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

ಬುಧವಾರ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಅಂಬಳೆ ಎಂ.ಶಿವಾನಂದಸ್ವಾಮಿ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಮಂಗಳಮ್ಮ ಹಾಗೂ ಬಿ. ಮಹದೇವಸ್ವಾಮಿ ನಾಮಪತ್ರ ಸಲ್ಲಿಸಿದ್ದರು. ಆದರೆ ಕೊನೆಯಲ್ಲಿ ಬಿ. ಮಹದೇವಸ್ವಾಮಿ ನಾಮಪತ್ರವನ್ನು ಹಿಂಪಡೆದ ಹಿನ್ನೆಲೆಯಲ್ಲಿ ಮಂಗಳಮ್ಮ ಮಾತ್ರ ಕಣದಲ್ಲಿದ್ದರಿಂದ ಚುನಾವಣಾಧಿಕಾರಿ ಜಿಯಾವುಲ್ಲಾ, ಇವರಿಬ್ಬರೂ ಅವಿರೋಧ ಆಯ್ಕೆಯಾಗಿರುವುದಾಗಿ ಘೋಷಿಸಿದರು.

ನೂತನ ಅಧ್ಯಕ್ಷ ಅಂಬಳೆ ಎಂ.ಶಿವಾನಂದಸ್ವಾಮಿ ಮಾತನಾಡಿ, ವ್ಯವಸಾಯಕ್ಕಿಂತ ಹೈನುಗಾರಿಕೆಯಲ್ಲಿ ಹೆಚ್ಚಿನ ಆದಾಯವಿದೆ. ಈ ಬಗ್ಗೆ ರೈತರು ಈಗ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಗುಣಮಟ್ಟದ ಹಾಲನ್ನು ಡೇರಿಗೆ ನೀಡಿದ್ದಲ್ಲಿ ರೈತರಿಗೆ ಇನ್ನಷ್ಟು ಹೆಚ್ಚು ಲಾಭವಾಗಲಿದೆ. ಡೈರಿಗೆ ಬರುವ ಆದಾಯ ಹೈನುಗಾರಿಕೆಗೆ ನೇರವಾಗಿ ತಲುಪುವುದರಿಂದ ಈ ಬಗ್ಗೆ ಈಗ ಆಯ್ಕೆಗೊಂಡಿರುವ ನಿರ್ದೇಶಕರು ಜಾಗೃತಿ ಮೂಡಿಸಬೇಕು. ನಮ್ಮಲ್ಲಿ ಒಗ್ಗಟ್ಟು ಹೆಚ್ಚಿದ್ದಲ್ಲಿ ಸಂಘವನ್ನು ಲಾಭದತ್ತ ಕೊಂಡೊಯ್ಯಬಹುದು. ನಾನು ಎಲ್ಲರೊಂದಿಗೂ ಸೌಹಾರ್ದಯುತವಾಗಿ ಇರಲು ಇಚ್ಛಿಸುವ ವ್ಯಕ್ತಿಯಾಗಿದ್ದು ನಮ್ಮಲ್ಲಿನ ಸಮಸ್ಯೆಗಳನ್ನು ಇಲ್ಲೇ ಬಗೆಹರಿಸಿಕೊಂಡು ಇದನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸುವ ಯೋಜನೆ ಇದ್ದು ಇದಕ್ಕೆ ಎಲ್ಲರೂ ಸಹಕರಿಸಬೇಕು. ಅಂಬಳೆ ವ್ಯಾಪ್ತಿಯಲ್ಲಿ ಎಮ್ಮೆಗಳು ಕಡಿಮೆ ಇವೆ. ಈಗ ಕೆಎಂಎಫ್ ಎಮ್ಮೆ ಹಾಲನ್ನು ಪರಿಚಯಿಸಿದೆ. ಇದಕ್ಕೆ ಹಸುವಿನ ಹಾಲಿಗಿಂತಲೂ ಹೆಚ್ಚು ಬೇಡಿಕೆ ಇದೆ. ಈ ಹಾಲನ್ನು ಉತ್ಪಾದಿಸಲು ಹೈನುಗಾರರಲ್ಲಿ ಜಾಗೃತಿ ಮೂಡಿಸಲು ಯತ್ನಿಸಲಾಗುವುದು. ಮುರ್ರಾ, ಸುರ್ತಿ ಸೇರಿದಂತೆ ವಿವಿಧ ತಳಿಗಳ ಎಮ್ಮೆಗಳನ್ನು ಸಾಕುವಂತೆ ಪ್ರೇರೇಪಿಸಲು ಜಾಗೃತಿ ಮೂಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಮಂಗಳಮ್ಮ, ನಿರ್ದೇಶಕರಾದ ಬಿ. ರಾಚಯ್ಯ, ರಂಗನಾಯಕ, ನಾಗರಾಜು, ಮಹದೇವಸ್ವಾಮಿ, ಬಸವಣ್ಣ, ಶಿವಸ್ವಾಮಿ, ಮಲ್ಲಪ್ಪ, ರಾಜಮ್ಮ, ಸುಬ್ಬಣ್ಣ, ನಿಂಗಣ್ಣ ಕಾರ್ಯದರ್ಶಿ ಪುಟ್ಟಬುದ್ಧಿ, ಹಾಲು ಪರೀಕ್ಷಕ ಎಂ. ಚೇತನ್ ಸೇರಿದಂತೆ ಅನೇಕರು ಇದ್ದರು.

ಹೆಚ್.ಎಸ್.ಮಹದೇವಪ್ರಸಾದ್ ಪುಣ್ಯಸ್ಮರಣೆ



ಗುಂಡ್ಲುಪೇಟೆ, ಜ.3– ತಾಲೂಕಿನ ಹಾಲಹಳ್ಳಿ ಗ್ರಾಮದಲ್ಲಿ ಮಾಜಿ ಸಚಿವ ದಿ.ಹೆಚ್.ಎಸ್.ಮಹದೇವಪ್ರಸಾದ್ ಅವರ 7ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮ ನಡೆಯಿತು.

ಬುಧವಾರ ಹಾಲಹಳ್ಳಿ ಗ್ರಾಮದ ಸಮೀಪದಲ್ಲಿರುವ ತೋಟದಲ್ಲಿರುವ ದಿ.ಮಹದೇವಪ್ರಸಾದ್ ಅವರ ಸಮಾಧಿಗೆ ಪತ್ನಿ, ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್, ಪುತ್ರ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಸೊಸೆ ವಿದ್ಯಾ ಗಣೇಶ್, ಸಹೋದರ ಹೆಚ್.ಎಂ.ನಂಜುಂಡಪ್ರಸಾದ್, ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್, ಕೊಳ್ಳೇಗಾಲ ಮಾಜಿ ಶಾಸಕ ಜಿ.ಎಸ್.ನಂಜುಂಡಸ್ವಾಮಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ ಹಾಗೂ ಸಹಸ್ರಾರು ಅಭಿಮಾನಿಗಳು ತೆರಳಿ ಪುಷ್ಪನಮನ ಸಲ್ಲಿಸಿದರು. ಪುಣ್ಯಾರಾಧನೆ ಪ್ರಯುಕ್ತ ಗ್ರಾಮದ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಕೃತಕ ಕಾಲು ಜೋಡಣಾ ಶಿಬಿರದಲ್ಲಿ 45ಕ್ಕೂ ಜನರಿಗೆ ಕೃತಕ ಕಾಲು ಜೋಡಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪಡಗೂರು ಅಡವಿ ಮಠಾಧ್ಯಕ್ಷರಾದ ಶ್ರೀ ಶಿವಲಿಂಗೇಂದ್ರ ಸ್ವಾಮೀಜಿ, ಮುಖಂಡರಾದ ಜಿ.ಕೆನಾಜೀಮುದ್ದೀನ್, ಆಲತ್ತೂರು ಜಯರಾಮು, ಮಡಿವಾಳಪ್ಪ, ಎಂ.ಪಿ.ಸುನಿಲ್ ಸೇರಿದಂತೆ ಕಾರ್ಯಕರ್ತರು ಮತ್ತು ಹೆಚ್‌ಎಸ್‌ಎಂ ಅಭಿಮಾನಿಗಳು ಭಾಗವಹಿಸಿದ್ದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಕರ್ನಾಟಕ ಸೇನಾ ಪಡೆಯು ಚಾಮರಾಜನಗರದಲ್ಲಿ 121ನೇ ದಿನವಾದ ಬುಧವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ತರಕಾರಿ, ಸೊಪ್ಪು ಹಿಡಿದು ಪ್ರತಿಭಟನೆ ನಡೆಸಿತು.



ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED

2000 to 3000 sq.ft. Commercial Space on Ground Floor (Vacant and or Building) For Lease or Rent

8884934953
8553080701

HOUSES & OFFICE SPACE FOR RENT

@ Saraswathipuram Kuvempunagar & Surroundings
SS Property Services
(Opp. Kuvempunagar School) SS Puram

9342125252

ಬೇಕಾಗಿದ್ದಾರೆ

ಕಾಲೇಜ್ ಹಾಸ್ಟೆಲ್‌ನಲ್ಲಿ ಅಡುಗೆ ಮಾಡಲು ಅಡುಗೆ ತಯಾರಕರು ಬೇಕಾಗಿದ್ದಾರೆ.
ವಿಕ್ರಂ ಕಾಲೇಜ್ ಆಫ್ ನರ್ಸಿಂಗ್ ಗೋಕುಲಂ, ಮೈಸೂರು

8861953709, 8310846772

40x80 MUDA Site at Kuvempunagar

West South Corner
Price - 7000/sqft
40 Feet Road

8660105902

SITE FOR SALE

30x40 West face 40ft Road opp Park Site for Sale In Vijayanagar 4th Stage 2nd Phase

6366440444

WANTED

Science, English, Maths Hindi and Social Science Teaching Staff for Reputed Institution Send your Resume through Whatsapp/Message

8971577685
9980631121

ಸೈಟುಗಳು ಮಾರಾಟಕ್ಕಿದೆ

30x40, 20x30 ದಟ್ಟಗಳ್ಳಿ
30x50,ಆದಿತ್ಯ ಸರ್ಕಲ್ ಹತ್ತಿರ
40x60 Site 60 Lakh,
30x40 Dulpex New House
ಹಳೆ ಮನೆ/ಹೊಸ ಮನೆ ಸೈಟು ಮಾರುವವರು/ಕೊಳ್ಳುವವರು

9945042875
ಶ್ರೀ ಬನಶಂಕರಿ ರಿಯಲ್ ಎಸ್ಟೇಟ್

GODOWN/ SHOP FOR RENT

10x23 Ft, In Corner building at No.8, Bharathiswamy Layout, Near christ Public School Bogadi, Mysuru is available for Rent

9916777948

ತಕ್ಷಣ ಬೇಕಾಗಿದ್ದಾರೆ

Office Work ಗೆ Female Tele Callers ಬೇಕಾಗಿದ್ದಾರೆ.
Experience or Fresher
Salary: 9000 to 18,000
Qualification: PUC and Any Degree
Location : Saraswathipuram, Mysore

8494960255

ಬೇಕಾಗಿದ್ದಾರೆ

ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ/ ಯುವತಿಯರು, ಮಹಿಳೆಯರು, ವಿಧವೆ /ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16000 ರಿಂದ 20000 ವರೆಗೆ

6366141518 |9845010281

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.

9590491194,9606783264

ಬೇಕಾಗಿದ್ದಾರೆ

ಕಾಫಿ, ಟೀ ಮಾಡುವವರು ಹೋಟೆಲ್ ಸಪ್ಲೈಯರ್ ಕ್ಲೀನಿಂಗ್ ಹುಡುಗರು ಕುವೆಂಪುನಗರದಲ್ಲಿರುವ ವೆಜ್ ರಸ್ಟೋರೆಂಟ್

9916531905

ತಕ್ಷಣ ಬೇಕಾಗಿದ್ದಾರೆ

Only for Female Only for Female Only for Female
Gassafe ಕಂಪನಿಗೆ
Receptionist & Team Leader
(Andriod ಮೊಬೈಲ್ ಹೊಂದಿರಬೇಕು)
ವಿದ್ಯಾರ್ಹತೆ: PUC&DEGREE
SALARY- 7000 to 12000

9844444214

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್

Mob: 9591815191

ಬೇಕಾಗಿದ್ದಾರೆ

ಕರ್ನಾಟಕದಾದ್ಯಂತ ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಕೆಲಸಕ್ಕೆ ಆಫೀಸ್ ಕೆಲಸಕ್ಕೆ ಮತ್ತು ವರ್ಕ್ ಫ್ರಂ ಹೋಂ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. ಯಾವುದೇ ಎಜ್ಯುಕೇಷನ್ ಯಾವುದೇ Age ಲಿಮಿಟ್ ಇಲ್ಲ.
Salary (18000 to 38000rs) ಇರುತ್ತದೆ.
ಹೆಚ್ಚಿನ ಮಾಹಿತಿಗೆ ಇಂದೇ ಸಂಪರ್ಕಿಸಿ. H.R. Madam

9886365585
8296278130

ಬೇಕಾಗಿದ್ದಾರೆ

ಶಾಲೆಗೆ ಮಕ್ಕಳನ್ನು Pick-up, Drop ಮಾಡಲು ಸ್ವಂತ ವಾಹನವುಳ್ಳ (ಓಮಿನಿ, ಈಕೋ, ವಿಂಗರ್) ಚಾಲಕರು ಬೇಕಾಗಿದ್ದಾರೆ.
ಆಸಕ್ತರು ಈ ಕೆಳಕಂಡ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ:

8431315761

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

6361056646, 7676844160

FOR RENT ONE SHOP No. 3

Rent Rs. 3000/-
Advance Rs. 30,000/-
Mysuru Vidyaranyapuram, 4th Main, 27th Cross, Corner No. 894/A, West facing. Measuring 10x10 Ft. available near Sterling Theatre.

9448872684, 9900079871

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:

7406375196, 9880548596

FOR SALE

COMMERCIAL BUILDING,
Dattagalli 3rd Stage.

Mob: 9844998724

Only genuine buyers.
(Brokers Excuse)

HOUSE FOR SALE

30x40, West Face site, North face door, newly constructed, G+2, Dattagalli, Somanathanagar, Mysuru.

Mob: 9738884777

ಬೇಕಾಗಿದ್ದಾರೆ

ಫೀಲ್ಡ್ ಆಫೀಸರ್, ಸೆಕ್ಯೂರಿಟಿ ಗಾರ್ಡ್ಸ್, ಹೌಸ್‌ಕೀಪಿಂಗ್ ಹುಡುಗರು, ಪುರುಷರು ಹಾಗೂ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಉಚಿತ ಊಟ, ವಸತಿ ESI+PF ಉತ್ತಮ ವೇತನ ಇರುತ್ತದೆ.

9611055738, 9611055216

ಶಿರಡಿ ಯಾತ್ರಾ ಪ್ಯಾಕೇಜ್ ಪ್ರವಾಸ

ವಿಮಾನದ ಮೂಲಕ ತ್ರಯಂಬಕೇಶ್ವರ ಶಿರಡಿ ದರ್ಶನ, ಶನಿ ಸಿಂಗನಾಪುರ, ರಂಜನಗಾಂವ್ ಮುಂತಾದ ಸ್ಥಳಗಳು 2 ದಿನಗಳ ಪ್ರವಾಸ ಸಂಪರ್ಕಿಸಿ:

9483587373

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್

Mob: 8880558064

HOUSE FOR SALE

Sathagalli 'B' Zone
20x30 E/F
Ground & First Floor, near V.T.U. College.
Price: Rs. 66 Lakhs.
Contact: Ashok

Mob: 9481316084

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್

25–1–2024: ಪುರಿ ಜಗನ್ನಾಥ, ಭುವನೇಶ್ವರ್, ಕೋನಾರ್ಕ್, ಚಂದ್ರಭಾಗ್ ಬೀಚ್.
25–1–2023: ಶಿರಡಿ, 3 ಜ್ಯೋತಿರ್ಲಿಂಗ ದರ್ಶನ, ವಿಮಾನದಲ್ಲಿ ಪ್ರವಾಸ.
25–1–24: ಹೈದರಾಬಾದ್ 5 ದಿನಗಳ ಪ್ರವಾಸ.
21–2–2024: ರಾಯಲ್ ರಾಜಸ್ಥಾನ್, 11 ದಿನಗಳ ಪ್ರವಾಸ.
21–3–2023: ನೇಪಾಳ ಮುಕ್ತಿನಾಥ, 10 ದಿನಗಳ ಪ್ರವಾಸ.
21–5–2024: ಚಾರ್‌ಧಾಮ್ ಯಾತ್ರೆ.

9591017782, 9964527782

HOUSE FOR SALE

30x40 Ground Floor, near J.P. Nagar.

Mob: 9900251194

Hiring Immediately

Sapthagiri Services, Mysuru
Male candidates with computer knowledge.
Salary: 12,000 to 20,000
Age below 30 years.

Mob: 9880151303

ಸೈಟ್ ಬೇಕಾಗಿದೆ

30x40, 20x30
BSNL Layout
ಹಂಚ್ಯಾ ಸಾತಗಳ್ಳಿ ಹತ್ತಿರ

8050332377

ತಕ್ಷಣ ಬೇಕಾಗಿದ್ದಾರೆ

ಅಪೋಲೋ ಆಸ್ಪತ್ರೆ, ಸ್ವರಸ್ವತಿಪುರಂ, ಗಂಗೋತ್ರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು
ಸಂಬಳ : 18500/-(26 days)
ವಯೋಮಿತಿ : 50 ವರ್ಷದ ಒಳಗೆ
ESI ಮತ್ತು PF ಸೌಲಭ್ಯವಿರುತ್ತದೆ

9620667819
9880727819

Hiring Immediately

Sapthagiri Services, Mysore
Male candidates only.
Qualification: PUC / Diploma, Any Degree Pass or Fail.
Salary: 18,000 to 30,000
Age below 35 years.

Mob: 9880151303

LAND FOR SALE

1 acre of land for sale, good approach just 8 km from Devegowda Circle, Bannur Road.

9986741909, 8310181951

Ads Posting Job

No Registration Fees
ನಿಮ್ಮ ಮನೆಯಿಂದ ನಿಮ್ಮ ಮೊಬೈಲ್ ಫೋನ್ ಮೂಲಕ ತಿಂಗಳಿಗೆ 20,000/– ರಿಂದ 30,000/– ಗಳಿಸಿ.

9731891409

Veg. Lingayat Cook Available

For Guru Malleshwara Layout, Alanahalli, Yeragana Halli and Siddartha Layout.

Mob: 7899389186

AFFIDAVIT

I, Smt. Suma, W/o Sri Ramesh S., residing at No. LIG-161, 3rd Stage, Kuvempunagar, Mysore-570 023, have changed my name as Sundramma, on my own free will in front of Notary C.R. Seetharam on 1-1-2024. I shall be known, called and recognised Sundramma, hereinafterwards and shall also use & sign my name as such Sundramma in future.

Sd/- Sundramma

ಬೇಕಾಗಿದ್ದಾರೆ

ಮೈಸೂರು ಮಂಡ್ಯ ಸುತ್ತಮುತ್ತ ಕೆಲಸ ಮಾಡಲು ಅನುಭವ ಇರುವ ಸೆಕ್ಯೂರಿಟಿ ಗಾರ್ಡ್, ಹೌಸ್‌ಕೀಪಿಂಗ್ ಮತ್ತು ಪುರುಷರು ಬೇಕಾಗಿದ್ದಾರೆ. ಆಕರ್ಷಕ ವೇತನ ESI, PF ಉಚಿತ ಊಟ, ವಸತಿ, ಸೌಲಭ್ಯ ಇರುತ್ತದೆ

9880116412
9964415265

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಗಾರ್ಡುಗಳು – 10 ಮಂದಿ
(ರಾತ್ರಿ ಪಾಳಿ ಮುಖ್ಯವಾಗಿ)
2) ಹೌಸ್ ಕೀಪರ್ (ಮಹಿಳೆಯರು ಮಾತ್ರ)
ಸ್ಥಳ : ಹಿನಕಲ್, ಹೆಬ್ಬಾಳ್, ಸಿದ್ದಾರ್ಥನಗರ, ಊಟ ವಸತಿ ವ್ಯವಸ್ಥೆಯಿದೆ

9242406261

ಕೆಲಸಕ್ಕೆ ಬೇಕಾಗಿದ್ದಾರೆ

ಉದ್ಯಮ ಆಧಾರ್ ಮತ್ತು ZED ಪ್ರಮಾಣಪತ್ರವನ್ನು ಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ. (ಆಂಡ್ರಾಯ್ಡ್ ಮೊಬೈಲ್ ಬಳಕೆ ಬರಬೇಕು) (ವಯಸ್ಸಿನ ಮಿತಿ: 35 ವರ್ಷ ಒಳಗೆ).

Mob: 97310 51975

ಬೇಕಾಗಿದ್ದಾರೆ

ಮೈಸೂರಿನ ಸರ್ಕಾರಿ ನೊಂದಾಯಿತ ಹೆಲ್ತ್ ಕೇರ್ ಸಂಸ್ಥೆಗೆ ನಮ್ಮಲ್ಲೇ ಉಳಿದುಕೊಂಡು ವೃದ್ಧರ ಆರೈಕೆ ಮಾಡಲು ಅನುಭವ ಇರುವ / ಇಲ್ಲದಿರುವ ಯುವಕ, ಯುವತಿಯರು, ಮಹಿಳೆಯರು ಹೋಂ ನರ್ಸಿಂಗ್ ಕೆಲಸಕ್ಕೆ ತಕ್ಷಣವೇ ಸಂಪರ್ಕಿಸಿ. ಊಟ, ವಸತಿ ಉಚಿತದೊಂದಿಗೆ ಆಕರ್ಷಕ ಸಂಬಳ ಇರುತ್ತದೆ. ಸಂಪರ್ಕಿಸಿ:

Mob: 9035113222

FOR SALE

1) 30x50 (10 sites) new R.T. Nagar, near next to Defence Apartment.
2) 30x40 (5 sites) Suvarna Nagar attach, Bogadi Road. 3) 2 BHK, 3 BHK flats in Natana Shala attach R.K. Nagar. 4) 10, 20 guntas farm land KRS back water attach. 5) 20x30 Srirampura 50x80, 4 commercial sites, Bogadi Road.
PRAKRUTHI PROPERTIES

9538690359, 9035990359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

MUDA App Sites JP Nagar Ring Road

30x40 - 62 Lakhs
Bank Loan upto 75%, Ready for Registration

8660105902

SITES FOR SALE

60X40ft East Facing at Ahad City Mysuru. 6km from Satellite bus Stand Towards Mahadevapura Road, Beautiful Layout Gaited Community UGD Electricity Water Multiple Gardens Tar Roads

990121117

ಬೇಕಾಗಿದ್ದಾರೆ

ಸಸ್ಯಾಹಾರಿ ಹೋಟೆಲ್‌ಗೆ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಹಾಯಕರು ಮತ್ತು ಪಾನಿಪುರಿ ಮಸಾಲಪುರಿ ಮಾಡುವವರು ಬೇಕಾಗಿದ್ದಾರೆ.

9945609723
7338146855

40x60 MUDA Site, near Narayana Hrudayalaya

Semi-Commercial Site
Price - 1.35 Cr.
Near Rajeev Nagar, 40 Feet Road

8660105902

100% TEAK WOOD

FACTORY FINISH DOORS & FRAMES
@ FACTORY DEPOT RATES



10 YEARS WARRANTY*

9845426862
9901291267

ಬೇಕಾಗಿದ್ದಾರೆ

ಗ್ರಾಫಿಕ್ ಡಿಸೈನರ್
Corel Draw & Photoshop ಕಲಿತಿರಬೇಕು
ಅಕೌಂಟ್ ಮ್ಯಾನೇಜರ್
ಟ್ಯಾಲಿ ಕಲಿತಿರಬೇಕು
ಆಕರ್ಷಕ ಸಂಬಳ
ಅಶೋಕ ರೋಡ್, ಮೈಸೂರು

Call: 0821-4267800

Used Laptops available

74068 54998



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru

9845175443

ಬೇಕಾಗಿದ್ದಾರೆ

ಎಸ್.ಬಿ.ಬುಕ್
ಹುದ್ದೆ: ಸೇಲ್ ಎಕ್ಸಿಕ್ಯೂಟೀವ್ – 3 ಹುದ್ದೆಗಳು
ವೇತನ: ಆಕರ್ಷಕ ವೇತನ, ಸಂದರ್ಶನ ದಿನಾಂಕ: 06–01–2024, ಸಂದರ್ಶನ ವೇಳೆ : 10.30 am to 1.30 pm
ಸಂದರ್ಶನ ಸ್ಥಳ: ಎಸ್.ಬಿ.ಬುಕ್ ಸೇಂಟ್ ಥಾಮಸ್ ಶಾಲೆ ಹತ್ತಿರ, ವಿಶ್ವೇಶ್ವರನಗರ, ಮೈಸೂರು. ತರಬೇಕಾದ ದಾಖಲಾತಿ: ಬಯೋಡೇಟಾ, ಆಧಾರ್ ಕಾರ್ಡ್, ಭಾವಚಿತ್ರ

0821-4280927,9535584111

WANTED

For a Travel Office
Mysore International Travels Pvt.Ltd. Office Staff with experience in the Travel Industry & Drivers.

9900428903
9739733535
0821-4247111

WANTED

Billing Executive
Candidates having 2+ years exp. in billing at Pharma Distributors. Knowledge of MARG Software is a must. Salary: Best as per the industry. For interview Call:

Mob: 8971799998

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್

ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:

Mob: 8867064586

HOUSE FOR SALE

30x40, No. 28, N/F, ground & first floor, Iswarya Layout, J.P. Nagar, near Siddalingeshwara Layout 2nd Stage.
Price: Rs. 1.45 Cr.
(Brokers Excuse)

Mob: 9448271349

ಡೇಟಾ ಎಂಟ್ರಿ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ

Timings: 9.30 to 5.30.
Rs. 7000 ಸಂಬಳ.
ರಾಮಾನುಜ ರಸ್ತೆ, ಅಗ್ರಹಾರ.

Mob: 7411223692

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಗಾರ್ಡ್ಸ್ (ಪುರುಷರು & ಮಹಿಳೆಯರು) (Gokulam, R.K. Nagar, Hebbal Industrial Area).
2) ಹೌಸ್‌ಕೀಪಿಂಗ್ (ಹುಡುಗರು & ಹುಡುಗಿಯರು) (Kuvempunagar & R.K. Nagar).
ESI, PF ಸೌಲಭ್ಯವಿದೆ. ಸ್ವವಿವರಗಳೊಂದಿಗೆ (ಹೆಬ್ಬಾಳು ಸೂರ್ಯ ಬೇಕರಿ ಸರ್ಕಲ್). ಸಂಪರ್ಕಿಸಿ:

9389199355, 9844235981

ಬೇಕಾಗಿದ್ದಾರೆ

ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ.
Salary: 13,000-21,000 +
ESI, PF. ವಿದ್ಯಾರ್ಹತೆ: 10th, PUC, ITI, Diploma and Any Degree

9035734821

ಶ್ರೀ ಮೂರ್ತಿ ಟೂರಿಸ್ಟ್

18–1–24 ರಿಂದ 21–1–24
(4ದಿನಗಳು ಹೊರನಾಡು, ಬೇಲೂರು, ಶೃಂಗೇರಿ, ಕೊಲ್ಲೂರು, ಗೋಕರ್ಣ, ಮುರುಡೇಶ್ವರ, ಆನೆಗುಡ್ಡ, ಅಂಬಲಪಾಡಿ, ಉಡುಪಿ, ಧರ್ಮಸ್ಥಳ ಸುಬ್ರಹ್ಮಣ್ಯ ಪ್ರವಾಸ
TICKETS AT YOUR DOOR STEP

9480733069

ತಕ್ಷಣ ಬೇಕಾಗಿದ್ದಾರೆ

ಆಫೀಸ್ ಸ್ಟಾಫ್ ಕಂ–ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಸೇಲ್ ಎಕ್ಸಿಕ್ಯೂಟಿವ್: ಮೈಸೂರು ಮತ್ತು ನರಸೀಪುರ, ಭಾಗಗಳಿಗೆ, ಸೇಲ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಆಕರ್ಷಕ ಇನ್ಸೆಂಟೀವ್‌ನೊಂದಿಗೆ
ವಿಳಾಸ: ಶ್ರೀ ಭ್ರಮರಾಂಭ ಟ್ರಾಕ್ಟರ್, ಮೈಸೂರು ತಿ.ನರಸೀಪುರ ಮುಖ್ಯರಸ್ತೆ ಆಲನಹಳ್ಳಿ ಸಿಗ್ನಲ್ ಹತ್ತಿರ, ಮೈಸೂರು

9902721839,7676582019

ಬೇಕಾಗಿದ್ದಾರೆ

ಬಿಳಿಕೆರೆ, ಹುಣಸೂರು ರಸ್ತೆ ಮತ್ತು ಮೈಸೂರಿನ ಸುತ್ತಮುತ್ತ, ರೆಸಾರ್ಟ್ ಹಾಗೂ ಹೋಟೆಲ್ ಒಂದರಲ್ಲಿ ಅನುಭವವುಳ್ಳ ಹೌಸ್ ಕೀಪಿಂಗ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಕೆಲಸ ಮಾಡಲು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC

9035050656
9035050653

ಬೇಕಾಗಿದ್ದಾರೆ

ವಿತರಣೆ ಮತ್ತು ಉತ್ಪಾದನಾ ಘಟಕಕ್ಕೆ ಸಹಾಯಕರು. ಯಾದವಗಿರಿ ಕೈಗಾರಿಕಾ ಪ್ರದೇಶ ಮೈಸೂರು.
ಕನಿಷ್ಠ ವೇತನ: 14000/–

9448664411

ಮನೆ ಭೋಗ್ಯಕ್ಕೆ ಇದೆ

For Lease (8 ಲಕ್ಷಕ್ಕೆ)
30x40 ಅಳತೆಯ ಡ್ಯೂಪ್ಲೆಕ್ಸ್ ಮನೆ ಸ್ಥಳ: ಗಂಜಾಂ, ಶ್ರೀರಂಗಪಟ್ಟಣ

9972358966

ಬೇಕಾಗಿದ್ದಾರೆ

ಮಡಿಕೇರಿಯ ಹೋಂ ಸ್ಟೇಗೆ ಅನುಭವವುಳ್ಳ ಅಡುಗೆಯವರು ಮತ್ತು ಹೌಸ್ ಕೀಪಿಂಗ್ ಸಿಬ್ಬಂದಿ ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಕರ್ಯ ನೀಡಲಾಗುವುದು.

7337722277

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ಸ್
ಸಂಬಳ 10000 ರಿಂದ 12000(12 ಗಂಟೆಗೆ)
ಸ್ಥಳ: ಆಲನಹಳ್ಳಿ, ನಜರ್‌ಬಾದ್, ಕೂರ್ಗಳ್ಳಿ, ಕುವೆಂಪುನಗರ, ಮೈಸೂರು ನಗರ,

9741616826,6361740914

FOR SALE

1) 52Sq. House Built on 1100 Sqft
2) 80x80 Ramakrishnagar Corner
3) 40x60 4Nos. Sites at Hebbal
4) 40x60 House @ Agrahara
5) 40x60 House Vidyaranyapuram

9663368424

ಬೇಕಾಗಿದ್ದಾರೆ

ಸರಸ್ವತಿಪುರಂನಲ್ಲಿ ಜೆರಾಕ್ಸ್ ಹಾಗೂ ಕಂಪ್ಯೂಟರ್ ಟೈಪಿಂಗ್ ಅನುಭವವುಳ್ಳವರು ಮತ್ತು ಸ್ಟೇಷನರಿ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಈ ನಂಬರಿಗೆ ಕರೆ ಮಾಡಿ.

8217562062

WANTED

Required Office Attender (Male)
Education : SSLC/PUC Pass
Age: 20 Yrs to 35 Yrs
SNS SECURITY SERVICE
380/D 14/A 2nd Floor krishna Vilasa Road, Mysore-01

9606023464

AVAILABLE FOR RENT

5 BHK House With attached Bathroom, 30x40, G+2 Floors @ anandanagar, Near Nivedithanagar Park

9742094264

WANTED

For medical/Pharma Distibutor Male Staff - 3 (For Delivery, Collection & Office work) SSLC / PUC, Pass / Fail with / Without Experience

9986108208
9739377827

NARAYANA SWEETS · ROYAL WARRIOR

WE'RE HIRING

Are You Ready to join us?
- We are hiring for Salesman and Supervisor
- Food and Accommodation will be provided by company

9611479167,9019876412
9686907943

ಉದ್ಯೋಗ ಅವಕಾಶದ ಸೆಮಿನಾರ್

ರಾಜ್ಯ/ಕೇಂದ್ರ/ಸಾರ್ವಜನಿಕ ಸಂಸ್ಥೆಗಳಿಂದ ನಿವೃತ್ತರಾದವರು ಹಾಗೂ ಆಸಕ್ತಿ ಇರುವ ಮಹಿಳೆಯರು 30 ವರ್ಷ ಮೇಲ್ಪಟ್ಟವರಿಗೆ ಉದ್ಯೋಗ ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ವಿದ್ಯಾರ್ಹತೆ SSLC & Above, Any Degree. ಸೆಮಿನಾರ್ ನಡೆಯುವ ಸ್ಥಳ: ಶಾರದಾ ಪ್ಲಾಜಾ ನೆಲಮಹಡಿ, ದೊಡ್ಡಗಡಿಯಾರದ ಹತ್ತಿರ, ಮೈಸೂರು–01. ದಿನಾಂಕ 06-01-2024, ಬೆಳಗ್ಗೆ 11 ಗಂಟೆಗೆ, ಬೇಕಾಗುವ ದಾಖಲಾತಿಗಳು: 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್ 4) ವಿದ್ಯಾರ್ಹತೆ ಪ್ರೂಫ್ 5) ಬ್ಯಾಂಕ್ ಪಾಸ್‌ಬುಕ್(1st page). Followed by LUNCH

9449068132, 7022034200

ಮನೆಯಿಂದಲೇ ಕೆಲಸ

ಗೃಹಿಣಿಯರಿಗೆ, ವಯಸ್ಸಾದವರಿಗೆ, ವಿದ್ಯಾರ್ಥಿಗಳು ವಯಸ್ಸಿನ ಮಿತಿ ಇಲ್ಲಾ ಪೆನ್ಸಿಲ್ ಪ್ಯಾಕಿಂಗ್ ಕವರ್ ಪ್ಯಾಕಿಂಗ್ ಚಾಕೋಲೇಟ್ ಪ್ಯಾಕಿಂಗ್ ಜ್ಯುವೆಲರಿ ಪ್ಯಾಕಿಂಗ್, ಮೆಹಂದಿ ಪ್ಯಾಕಿಂಗ್, ಫ್ಲವರ್ ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಮನೆಯಿಂದಲೇ ಕೆಲಸ ಮಾಡಿ ಗಳಿಸಿ ತಿಂಗಳಿಗೆ 25000/– ದಿಂದ 30000 ವರೆಗೆ

8147197339

ಬೇಕಾಗಿದ್ದಾರೆ

ಸಪ್ಲೆಯರ್ಸ್ ಬೇಕಾಗಿದ್ದಾರೆ ಹೋಟೆಲ್ ಒಂದರಲ್ಲಿ ಕೆಲಸ ಮಾಡಲು ಸಪ್ಲೆಯರ್ಸ್ ಬೇಕಾಗಿದ್ದಾರೆ.

9902612333

ಬೇಕಾಗಿದ್ದಾರೆ

ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 12000/–

9380041120

ಬಂಧನ ಮ್ಯಾರೇಜ್

ಎಲ್ಲಾ ಜಾತಿಯ ಡಾಕ್ಟರ್, ಇಂಜಿನಿಯರ್ಸ್ ಮತ್ತು ಎಲ್ಲಾ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ

9449408551

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ ಗುರುವಾರ 4 ಜನವರಿ 2024

ಶ್ರೀ ವಿವೇಕ ಬಾಲೋದ್ಯಾನ ಶಾಲಾ ವಾರ್ಷಿಕೋತ್ಸವ



ಮೈಸೂರು, ಜ. 3– ಮೈಸೂರಿನ ಜಯನಗರದಲ್ಲಿರುವ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆ ಯುವ ವಿವೇಕ ಕುಟುಂಬಕಂ ಹೆಸರಿನಲ್ಲಿ 44ನೇ ಶಾಲಾ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಮೈಸೂರಿನ ಶ್ರೀರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಸಂಸ್ಥೆಯ ಕರೆಸ್ಪಾಂಡೆಂಟ್ ಸ್ವಾಮಿ ಮಹಾಮೇಧಾನುದಾಜೀ ಮಹಾರಾಜ್ ಸಾನ್ನಿಧ್ಯವಹಿಸಿದ್ದರು.

ಬೆಂಗಳೂರಿನ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ವಿಜ್ಞಾನಿ ರೂಪಾ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪೂರ್ಣಕುಂಭ ಸ್ವಾಗತದೊಂದಿಗೆ ಸ್ವಾಮೀಜಿಯವರನ್ನು ವೇದಿಕೆಗೆ ಬರಮಾಡಿಕೊಳ್ಳಲಾಯಿತು. ನಂತರ ಸ್ವಾಮಿ ವಿವೇಕಾನಂದರ ಪುತ್ಥಳಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸ್ವಾಮಿ ವಿವೇಕಾನಂದರ ಪುತ್ಥಳಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ

ರೂಪಾ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ ವ್ಯಕ್ತಿಗಳನ್ನು ಆದರ್ಶವನ್ನಾಗಿ ಇಟ್ಟುಕೊಂಡು ಮುಂದುವರೆಯಬೇಕು. ನಮ್ಮ ದೇಶದ ಆದರ್ಶ ಶಿಕ್ಷಕರೆಂದು ಹೆಸರು ಮಾಡಿದ ರಾಧಾಕೃಷ್ಣನ್ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಬೇರೆಡೆಗೆ ವರ್ಗಾವಣೆಯಾದ ಸಂದರ್ಭದಲ್ಲಿ ವಿದ್ಯಾರ್ಥಿಗಳೆಲ್ಲ ಅವರನ್ನು ಸಾರೋಟಿನಲ್ಲಿ ಕುಳ್ಳಿರಿಸಿ ಮೆರವಣಿಗೆ ಮೂಲಕ ರೈಲ್ವೆ ನಿಲ್ದಾಣದವರೆಗೂ ಕರೆದುಕೊಂಡು ಹೋದರು. ಅಂತಹ ಗುರು–ಶಿಷ್ಯರ ಸಂಬಂಧವನ್ನು ವರ್ಣಿಸಲು ಪದಗಳೇ ಸಾಲದು ಎಂದರು.

ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಸ್ವಾಮೀಜಿಯವರು ಆಶೀರ್ವಚನವನ್ನು ನೀಡಿ ಮಾತನಾಡಿ, ಪೋಷಕರಾಗಲಿ, ಶಾಲೆಗಳಾಗಲಿ ಮಕ್ಕಳ ನಡುವೆ ಆರೋಗ್ಯಕರವಾದ ಸ್ಪರ್ಧೆಯನ್ನು ಏರ್ಪಡಿಸಬೇಕು. ಪ್ರತಿ ಸಣ್ಣ ಸಾಧನೆಗೂ ಅವರನ್ನು ಪ್ರೋತ್ಸಾಹಿಸುತ್ತಾ ಬಂದರೆ ಮುಂದೆ ಉತ್ತಮ ಸಾಧನೆ ಮಾಡಬಲ್ಲರು. ಯಾವುದೇ ಕಾರಣಕ್ಕೂ ಮತ್ತೊಬ್ಬರೊಡನೆ ಹೋಲಿಕೆ ಮಾಡಿ ಅವರ ಸಾಧನೆಯನ್ನು ಅಳೆಯಬಾರದು. ಪ್ರತಿಯೊಬ್ಬರಿಗೂ ಅವರದೇ ಆದ ಪ್ರತಿಭೆ ಇದ್ದೇ ಇದೆ ಎಂದು ನುಡಿದರು.

ಸಂಸ್ಥೆಯ ಕಾರ್ಯದರ್ಶಿ ಎಂ. ಎಸ್ ನಾಗೇಶ್ ಮಾತನಾಡಿ, ಈ ಒಂದು ಕಾರ್ಯಕ್ರಮ ಇಷ್ಟು ಅದ್ಭುತವಾಗಿ ನಡೆಯುತ್ತಿರುವುದಕ್ಕೆ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳ ಸಹಕಾರ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರ ಪರಿಶ್ರಮ, ಎಲ್ಲಕ್ಕಿಂತ ಮುಖ್ಯವಾಗಿ ಪೋಷಕ ವರ್ಗದ ಪ್ರೋತ್ಸಾಹ ಕಾರಣವಾಗಿದೆ ಎಂದರು.

ಆಡಳಿತ ಮಂಡಳಿ ಉಪಾಧ್ಯಕ್ಷ ಬಿ.ಎನ್. ಪ್ರಭಾಕರ್, ಖಜಾಂಚಿ ಎಚ್.ಎಸ್. ಶಿವಶಂಕರ್, ಶಾಲೆಯ ಮುಖ್ಯ ಆಡಳಿತ ಅಧಿಕಾರಿ ಭವಾನಿ, ಪ್ರಾಂಶುಪಾಲೆ ಪ್ರತಿಭಾ ಮತ್ತಿತರರು ಉಪಸ್ಥಿತರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಕ್ಯಾಲೆಂಡರ್, ಡೈರಿ ಬಿಡುಗಡೆ

ಮೈಸೂರು ಪ್ರವಾಸೋದ್ಯಮ ಹಿಂದುಳಿದಿದೆ; ಸಿಎಂ ಮೇಲೆ ಜಿಟಿಡಿ ಬೇಸರ

ಮೈಸೂರು, ಜ.3(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ 2024ನೇ ಸಾಲಿನ ನೂತನ ಕ್ಯಾಲೆಂಡರ್ ಮತ್ತು ಡೈರಿಯನ್ನು ಶಾಸಕ ಜಿ.ಟಿ.ದೇವೇಗೌಡ ಮತ್ತು ಸಿದ್ಧಾರ್ಥ ಗ್ರೂಪ್ಸ್‌ನ ಮಾಲೀಕರಾದ ಹೋಟೇಲ್ ಉದ್ಯಮಿ ಪಿ.ವಿ.ಗಿರಿ ಅವರು ಸಂಘದ ಸಭಾಂಗಣದಲ್ಲಿ ಬುಧವಾರ ಬಿಡುಗಡೆಗೊಳಿಸಿದರು.

ನಂತರ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಮೈಸೂರಿನ ಪತ್ರಕರ್ತರು ಹಿರಿಯರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದು, ಜವಾಬ್ದಾರಿಯಿಂದ ಸಾಗುತ್ತಿದ್ದಾರೆ. ಪತ್ರಕರ್ತರು ಸಲಹೆಗಾರರಾಗಿದ್ದು, ನಿಮ್ಮ ಬರವಣಿಗೆಯಿಂದ ಸಮಾಜಕ್ಕೆ ಅನುಕೂಲ ಮತ್ತು ಅನಾನುಕೂಲವಾಗಲಿದೆ ಎಂದು ಆಲೋಚಿಸಿ ನಡೆಯಬೇಕು. ಮಾಧ್ಯಮ ಕ್ಷೇತ್ರವನ್ನು ಪುಣ್ಯ ಕ್ಷೇತ್ರವೆಂದು ತಿಳಿದುಕೊಂಡು ದೇಶಸೇವೆ ಮಾಡಿ. ಜೊತೆಗೆ ಪತ್ರಕರ್ತರು ಸಾಕಷ್ಟು ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಮತ್ತು ಮಾಧ್ಯಮ ಕ್ಷೇತ್ರದಲ್ಲಿಯೂ ಸಾಕಷ್ಟು ಬದಲಾವಣೆಗಳಾಗಿವೆ. ಹಿಂದೆ ಶಿಕ್ಷಣ ಕಡಿಮೆ ಇತ್ತು. ಆದರೆ, ಸಂಸ್ಕಾರ ಹೆಚ್ಚಿತ್ತು. ಇಂದು ಸಂಸ್ಕಾರ ಕಡಿಮೆಯಾಗಿದ್ದು, ಶಿಕ್ಷಣ ಹೆಚ್ಚಾಗುತ್ತಿದೆ. ಜೊತೆಗೆ ನಮ್ಮ ನಾಡು, ನುಡಿ, ಕುಟುಂಬ, ಸಮಾಜ ಎಂಬುವುದರ ಬಗ್ಗೆ ಅಭಿಮಾನ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.



ಇಡೀ ದೇಶದಲ್ಲೇ ಮೈಸೂರು ಪ್ರವಾಸೋದ್ಯಮ ಬೆಳೆಯಲು ಅವಕಾಶವಿದೆ. ಆದರೆ, ಅದನ್ನು ಬಳಸಿಕೊಳ್ಳುತ್ತಿಲ್ಲ. ಏರ್‌ಪೋರ್ಟ್ ಬಗ್ಗೆ ಸಾಕಷ್ಟು ಕನಸು ಇತ್ತು. ಇಂದು ವಿಮಾನಗಳ ಹಾರಾಟ ಕಡಿಮೆಯಾಗಿದೆ. ಮೈಸೂರಿನವರೇ ಆದ ಸಿದ್ದರಾಮಯ್ಯ ಮೈಸೂರಿನ ಪ್ರವಾಸೋದ್ಯಮಕ್ಕೆ ಯಾವುದೇ ಉತ್ತೇಜನ ನೀಡಿಲ್ಲ. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅವರು ಶಿವಮೊಗ್ಗಕ್ಕೆ ಹಾಗೂ ಮತ್ತೊಂದೆಡೆ ಹೆಚ್.ಡಿ.ದೇವೇಗೌಡರು, ಕುಮಾರಸ್ವಾಮಿ, ರೇವಣ್ಣ ಅವರು ಹಾಸನದಲ್ಲಿ ಅನೇಕ ಅಭಿವೃದ್ಧಿ ಮಾಡಿದ್ದಾರೆ. ಆದರೆ ಮೈಸೂರು ಯಾಕೆ ಹಿಂದುಳಿದೆ ಎಂದು ಆಲೋಚನೆ ಮಾಡಬೇಕು ಎಂದರು.

ನಂತರ ಸಿದ್ಧಾರ್ಥ ಗ್ರೂಪ್ಸ್‌ನ ಮಾಲೀಕರಾದ ಹೋಟೇಲ್ ಉದ್ಯಮಿ ಪಿ.ವಿ.ಗಿರಿ ಮಾತನಾಡಿ, ಮೈಸೂರಿನಲ್ಲಿ ಸಮುದ್ರ ಬಿಟ್ಟು ಎಲ್ಲವೂ ಇದೆ. ಇವುಗಳನ್ನು ಬಳಸಿಕೊಂಡು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಬೇಕು. ಮೈಸೂರಿನ ಪ್ರವಾಸೋದ್ಯಮಕ್ಕಾಗಿ ಸಾಕಷ್ಟು ಸಲಹೆಗಳನ್ನು ನೀಡಿದ್ದೇನೆ. ಅವುಗಳನ್ನು ಯಾರೂ ಪರಿಗಣಿಸಲಿಲ್ಲ. ಹಾಗೇ 1987ರಲ್ಲಿ ಮೃಗಾಲಯದ ಮುಂಭಾಗ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವಂತೆ ಸಲಹೆ ನೀಡಿದೆ. ಅಲ್ಲಿ ಇಂದಿಗೂ ಪಾರ್ಕಿಂಗ್ ಸಮಸ್ಯೆ ನಿವಾರಣೆಯಾಗಿಲ್ಲ. ಮತ್ತೊಂದೆಡೆ ಇತ್ತೀಚಿನ ದಿನಗಳಲ್ಲಿ ಸೈಬರ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಹೋಟೆಲ್‌ಗಳ ಹೆಸರಿನಲ್ಲಿ ನಕಲಿ ಬುಕ್ಕಿಂಗ್ ಆಗುತ್ತಿದೆ. ಈ ಸಂಬಂಧ ಸೈಬರ್ ಠಾಣೆಗೆ ದೂರು ನೀಡಿದರೆ, ಅದನ್ನು ಭೇದಿಸಲು ಮೂರು ತಿಂಗಳಿಗಿಂತಲೂ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

1988ರಲ್ಲಿ ಮೈಸೂರಿನ ಹೋಟೆಲ್‌ಗಳಲ್ಲಿ ರೂಂ ಬುಕ್ಕಿಂಗ್ ಮಾಡುವುದು ಕಷ್ಟಕರವಾಗಿತ್ತು. ಅಷ್ಟು ಪ್ರವಾಸಿಗರು ಆಗಮಿಸುತ್ತಿದ್ದರು. ಆದರೆ, ಇಂದು ಅಷ್ಟು ಪ್ರಮಾಣದ ಪ್ರವಾಸಿಗರು ಆಗಮಿಸುತ್ತಿಲ್ಲ. ಮೈಸೂರಿಗೆ ವಿಮಾನ ನಿಲ್ದಾಣ ಬೇಕೆಂದು ಸಾಕಷ್ಟು ಕೋರಿಕೆ ಇತ್ತು. ಆದರೆ, ಇಂದು ಕೇವಲ ಎರಡು ವಿಮಾನ ಹಾರಾಟ ನಡೆಸುತ್ತಿದೆ. ಮೊದಲು ಮೈಸೂರಿನಿಂದ ಗೋವಾಕ್ಕೆ ವಿಮಾನದ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ತೆರಳುತ್ತಿದ್ದರು. ಆದರೆ, ಈಗ ಏಕೆ ಆ ವಿಮಾನವನ್ನು ರದ್ದುಗೊಳಿಸಿದ್ದಾರೆ ಎಂದು ಮುಖ್ಯಮಂತ್ರಿಗಳು ಗಮನ ಹರಿಸಬೇಕಿದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, 75ಕ್ಕೂ ಅಧಿಕ ವರ್ಷದ ಇತಿಹಾಸ ಹೊಂದಿರುವ ಸಂಘವೂ ಹಿರಿಯರ ಮಾರ್ಗದರ್ಶನ, ಸಲಹೆಯಂತೆ ಅಚ್ಚು ಕಟ್ಟಾಗಿ ನಡೆದುಕೊಂಡು ಬಂದಿದೆ. ಇತ್ತೀಚೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮುಖ್ಯಮಂತ್ರಿಗಳು ನೂತನ ಪತ್ರಕರ್ತರ ಭವನಕ್ಕೆ ಗುದ್ದಲಿ ಪೂಜೆ ನೆರವೇರಿಸಿದ್ದಾರೆ. ಅದಕ್ಕೆ ಸರ್ಕಾರ ಮತ್ತು ವಿವಿಧ ಸಂಘ–ಸಂಸ್ಥೆಗಳು ಕೈಜೋಡಿಸಿದರೆ ಶೀಘ್ರವಾಗಿ ನೂತನ ಕಟ್ಟಡ ನಿರ್ಮಾಣವಾಗಲಿದೆ ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುಬ್ರಮಣ್ಯ, ಉಪಾಧ್ಯಕ್ಷ ಅನುರಾಗ ಬಸವಣ್ಣ, ರಾಜ್ಯ ಕಾರ್ಯಕಾರಿಣಿ ಸದಸ್ಯ ರಾಘವೇಂದ್ರ, ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

> “ ಸರ್ಕಾರ ಮುಡಾ, ನಗರ ಪಾಲಿಕೆಗೆ ಹೆಚ್ಚು ಅನುದಾನ ನೀಡಬೇಕು. ಮುಡಾದಿಂದ ನಿರ್ಮಿಸಿರುವ ನೂತನ ಬಡಾವಣೆಗಳಲ್ಲಿ ಸರಿಪಡಿಸದ ಸ್ಥಿತಿಯಲ್ಲಿ ಅನೇಕ ಸಂಕಷ್ಟಗಳನ್ನು ಮುಡಾ ತಂದಿಟ್ಟಿದೆ. ಈ ಕುರಿತು ಇತ್ತೀಚೆಗೆ ನಡೆದ ಚಳಿಗಾಲದ ಅಧಿವೇಶನದ ಸದನದಲ್ಲಿ ನೂತನ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪ್ರಶ್ನಿಸಿದೆ. ಸಿದ್ದರಾಮಯ್ಯ ಅವರು ಮೈಸೂರು ನಗರದ ಇತಿಹಾಸ ಉಳಿಸಿ ಜನತೆಗೆ ಎಲ್ಲಾ ಸೌಲಭ್ಯ ನೀಡಿ ರಾಜರ ಹೆಸರಂತೆ ತಮ್ಮ ಹೆಸರು ಚಿರಸ್ಥಾಯಿಯಾಗುಮಂತೆ ಕೆಲಸ ಮಾಡಿ.
> –ಜಿ.ಟಿ.ದೇವೇಗೌಡ, ಶಾಸಕರು.

ಸಾವಿತ್ರಿಬಾಯಿ ಫುಲೆ ಹೋರಾಟದಿಂದ ಮಹಿಳೆಯರು ಮುಖ್ಯವಾಹಿನಿಗೆ

ಪ್ರಾಧ್ಯಾಪಕಿ ಡಾ.ಎನ್.ಕೆ.ಲೋಲಾಕ್ಷಿ ಅಭಿಮತ



ಮೈಸೂರು, ಜ.3(ಎಂಟಿವೈ)– ಅಸ್ಪೃಶ್ಯತೆ ಆಚರಣೆ ಪ್ರಬಲವಾಗಿದ್ದ ಕಾಲದಲ್ಲಿಯೇ ಸಾವಿತ್ರಿಬಾಯಿ ಫುಲೆ ನಡೆಸಿದ ಅವಿರತ ಶ್ರಮದಿಂದಾಗಿ ಮಹಿಳೆಯರು ಇಂದು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗಿದೆ ಎಂದು ಪ್ರಾಧ್ಯಾಪಕಿ ಡಾ.ಎನ್.ಕೆ.ಲೋಲಾಕ್ಷಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಸಾವಿತ್ರಿಬಾಯಿ ಫುಲೆ 193ನೇ ಜನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪಂಚಾಯಿತಿ ಪ್ರಭುತ್ವ, ರಾಜಪ್ರಭುತ್ವ, ವಸಾಹತು ಪ್ರಭುತ್ವ ಪ್ರಬಲವಾಗಿದ್ದ ಕಾಲದಲ್ಲಿ ಸಾವಿತ್ರಿಬಾಯಿ ಫುಲೆ ನಡೆಸಿದ ಹೋರಾಟ ಅವಿಸ್ಮರಣೀಯ. ಶತ ಶತಮಾನಗಳಿಂದ ಅಕ್ಷರ ಸಂಸ್ಕೃತಿಯಿಂದ ವಂಚಿತ ಜನರನ್ನು ಶಿಕ್ಷಿತರನ್ನಾಗಿಸುವ ನಿಟ್ಟಿನಲ್ಲಿ ಅವರು ಅಸಾಮಾನ್ಯ ಹೋರಾಟ ನಡೆಸಿದರು. 19ನೇ ಶತಮಾನದಲ್ಲಿ ಸಾವಿತ್ರಿಬಾಯಿ ಫುಲೆ ನಡೆಸಿದ ಹೋರಾಟ, ಅವರ ಬೆವರಿನ ಶ್ರಮ, ಎದುರಿಸಿದ ಅವಮಾನದಿಂದ ಸ್ತ್ರೀಯರು, ಶೋಷಿತರು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗಿದೆ ಎಂದು ಹೇಳಿದರು.

ಸಾವಿತ್ರಿಬಾಯಿ ಫುಲೆ ಅವರ ಕಾಲದಲ್ಲಿ ಸಾಮಾಜಿಕ ಸ್ಥಿತಿಗತಿ ಕ್ಷೋಭೆಗೆ ಸಿಲುಕಿತ್ತು. ಅಸ್ಪೃಶ್ಯತೆ ಆಚರಣೆ ಪ್ರಬಲವಾಗಿತ್ತು. ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿತ್ತು. ಯುದ್ಧಗಳಿಂದ ವಿಧವೆಯರ ಸಂಖ್ಯೆ ಹೆಚ್ಚಿತ್ತು. ಮಹಿಳೆಯರು ಮನೆಯಿಂದ ಹೊರಬರುವುದಕ್ಕೆ ನಿರ್ಬಂಧ ಹೇರಲಾಗಿತ್ತು. ಅಹಮದಾಬಾದ್‌ನಲ್ಲಿ ಮೊದಲ ಶಿಕ್ಷಕಿ ಪದವಿ ಪಡೆದು, ಮೊದಲ ದಲಿತ ಮಹಿಳಾ ಶಾಲೆಯನ್ನು ಸಾವಿತ್ರಿಬಾಯಿ ಫುಲೆ ಆರಂಭಿಸಿದರು. ಶಾಲೆ ಸ್ಥಾಪನೆಯೊಂದಿಗೆ ಪಠ್ಯಕ್ರಮ ರೂಪಿಸಿದರು. ಸಮಾಜದ ವಿರೋಧದ ನಡುವೆಯೂ 18 ಶಾಲೆಗಳನ್ನು ಆರಂಭಿಸಿ, ಹಲವರಿಗೆ ಶಿಕ್ಷಣ ಸಿಗುವಂತೆ ಮಾಡಿದರು ಎಂದು ತಿಳಿಸಿದರು. ಶಿಕ್ಷಣದಿಂದ ಸಾಮಾಜಿಕ ಪರಿವರ್ತನೆಗೆ ಮುಂದಾದ ಫುಲೆ ದಂಪತಿ ಅಂತರ್‌ಜಾತಿ ವಿವಾಹದವರಿಗೆ ರಕ್ಷಣೆ ಕೊಡುತ್ತಾರೆ. ಆದರೆ, ಇಂದು ಅಂತರ್ಜಾತಿ ವಿವಾಹವಾಗುವವರಿಗೆ ರಕ್ಷಣೆ ಇಲ್ಲದಂತಾಗಿದ್ದು, ಮರ್ಯಾದೆ ಹತ್ಯೆ ಪ್ರಕರಣ ಹೆಚ್ಚಾಗುತ್ತಿದೆ. ಅಂತರ್ ಜಾತಿ ವಿವಾಹವಾದ ದಂಪತಿಗೆ ಜನಿಸಿದ ಮಗುವಿಗೆ ತಂದೆಯ ಜಾತಿಯನ್ನು ನೀಡುವ ಪಿತೃಪ್ರಧಾನ ಕಾನೂನು ವ್ಯವಸ್ಥೆಯನ್ನು ಕಾಣುತ್ತಿದ್ದೇವೆ. ತಾಯಿ ಸಾಕಿದರೂ ತಂದೆ ಜಾತಿ ಕೊಡಬೇಕು ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಕ್ತ ವಿವಿ ಕುಲಪತಿ ಶರಣಪ್ಪ ವಿ.ಹಲಸೆ ವಹಿಸಿದ್ದರು. ಪರೀಕ್ಷಾಂಗ ಕುಲಸಚಿವ ಕೆ.ವಿ. ಪ್ರವೀಣ್, ಶೈಕ್ಷಣಿಕ ಡೀನ್ ಲಕ್ಷ್ಮೀ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಜ.7, ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಸಮಾರಂಭ



ಮೈಸೂರು, ಜ.3(ಜಿಎ)–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಿಂದ ಜ.7ರಂದು ಸಂಜೆ 5.30ಕ್ಕೆ ಜೆಎಸ್‌ಎಸ್ ಆಸ್ಪತ್ರೆ ಬಳಿಯ ರಾಜೇಂದ್ರ ಭವನದಲ್ಲಿ ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ ಎಂದು ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕಾರ್ಯಕ್ರಮ ಉದ್ಘಾಟಿಸುವರು. ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯವನ್ನು ಹಾಗೂ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಅಧ್ಯಕ್ಷತೆ ವಹಿಸುವರು. ದತ್ತಿ ದಾಸೋಹಿ ಶಕುಂತಲಾ ಜಯದೇವ ಉಪಸ್ಥಿತರಿರುವರು ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಮೈಸೂರಿನ ಜಿ.ಎ.ಶಿವಲಿಂಗಯ್ಯ ಹಾಗೂ ಭದ್ರಾವತಿಯ ಎಸ್.ಎಸ್.ವಿಜಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದ್ದು, ತಲಾ 20 ಸಾವಿರ ರೂ. ನಗದು ಹಾಗೂ ಫಲಕಗಳನ್ನು ಪ್ರಶಸ್ತಿ ಒಳಗೊಂಡಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ನಗರ ಘಟಕದ ಸಂಚಾಲಕ ಮುದ್ದು ಮಲ್ಲೇಶ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ ಉಪಸ್ಥಿತರಿದ್ದರು.

ನಾಳೆಯಿಂದ ನಿನಾಸಂ ತಿರುಗಾಟ ನಾಟಕಗಳ ನಾಟ್ಯರಂಗ ಉತ್ಸವ



ಮೈಸೂರು, ಜ.3(ಜಿಎ)–ನಾಟ್ಯಲೇಖ ರಂಗಸಮೂಹ ಮತ್ತು ರಂಗವಲ್ಲಿ ಸಂಸ್ಥೆಯಿಂದ ಜ.5 ಮತ್ತು 6ರಂದು ಪ್ರತಿ ದಿನ ಸಂಜೆ 7ಕ್ಕೆ ನಗರದ ಕಿರು ರಂಗ ಮಂದಿರದಲ್ಲಿ ನಿನಾಸಂ ತಿರುಗಾಟ ನಾಟಕಗಳ ನಾಟ್ಯರಂಗ ಉತ್ಸವ ಆಯೋಜಿಸಲಾಗಿದೆ ಎಂದು ನಾಟ್ಯಲೇಖದ ಸದಸ್ಯ ಅಮಿತ್ ರೆಡ್ಡಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.5ರಂದು ಸಂಜೆ 6.30ಕ್ಕೆ ಕಲಾವಿದ ಕೃಷ್ಣಕುಮಾರ್ ನಾರ್ಣಕಜೆ ಅವರು ಉತ್ಸವಕ್ಕೆ ಚಾಲನೆ ನೀಡುವರು. ನಾರ್ಣಕಜೆ ಮತ್ತು ಫಯಾಜ್ ಅವರಿಗೆ ರಂಗಗೌರವ ಹಮ್ಮಿಕೊಳ್ಳಲಾಗಿದೆ. ಆರ್.ಸಿ. ಧನಂಜಯ ಅವರಿಂದ ಗೀತ ಗಾಯನ ನಡೆಯಲಿದ್ದು, ಲೇಖಕಿ ಸಬಿಹಾ ಭೂಮಿಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಭಾಗವಹಿಸುವರು ಎಂದು ತಿಳಿಸಿದರು. ವೇದಿಕೆ ಕಾರ್ಯಕ್ರಮದ ನಂತರ ಸಂಜೆ 7ಕ್ಕೆ ಚಂದ್ರಶೇಖರ ಕಂಬಾರ ರಚನೆಯ ಕೆ.ಜಿ.ಕೃಷ್ಣಮೂರ್ತಿ ನಿರ್ದೇಶನದ 'ಹುಲಿಯ ನೆರಳು' ನಾಟಕ ಪ್ರದರ್ಶನ ಹಾಗೂ ಜ.6ರಂದು ಸಂಜೆ 7ಕ್ಕೆ ಲೂಯಿ ನಕೊಸಿ ರಚಿಸಿ, ನಟರಾಜ ಹೊನ್ನವಳ್ಳಿ ಕನ್ನಡಕ್ಕೆ ಅನುವಾದಿಸಿದ ಎಚ್.ಕೆ.ಶ್ವೇತಾರಾಣಿ ನಿರ್ದೇಶನದಲ್ಲಿ 'ಆ ಲಯ, ಈ ಲಯ' ನಾಟಕ ಪ್ರದರ್ಶನ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ರಂಗಸಮೂಹದ ಕಾರ್ಯದರ್ಶಿ ಮಧುಸೂದನ್, ಖಜಾಂಚಿ ಮಹೇಶ್ ಕಲ್ಲತ್ತಿ, ಸದಸ್ಯ ರಾಜೇಶ್ ಮಾಧವನ್ ಉಪಸ್ಥಿತರಿದ್ದರು.

ನಾಗರಿಕ ಸುರಕ್ಷಣಾ ಕಾಯ್ದೆ ಚಾಲಕರಿಗೆ ಮರಣ ಶಾಸನ

ಎಲ್ಲರ ಅಭಿಪ್ರಾಯ ಪಡೆದು ಮರು ಪರಿಶೀಲನೆಗೆ ಲಾರಿ ಮಾಲೀಕರ ಒಕ್ಕೂಟ ಆಗ್ರಹ



ಮೈಸೂರು, ಜ.3(ಜಿಎ)–ಸಂಸತ್ತಿನಲ್ಲಿ ಮಂಡಿಸಿರುವ ನಾಗರಿಕ ಸುರಕ್ಷತಾ ಕಾಯ್ದೆ 2023 ವಿಧೇಯಕದಲ್ಲಿ ರಸ್ತೆ ಅಪಘಾತಕ್ಕೆ ಸಂಬಂಧಿಸಿದಂತೆ ವಾಹನ ಚಾಲಕರಿಗೆ ವಿಧಿಸುವ ಶಿಕ್ಷೆಯಲ್ಲಿ ಸಾಕಷ್ಟು ಗೊಂದಲಗಳಿದ್ದು, ಚಾಲಕರಿಗೆ ಮರಣ ಶಾಸನವಾಗಿದೆ. ಆದ್ದರಿಂದ ಕಾಯ್ದೆಯು ಎಲ್ಲರ ಅಭಿಪ್ರಾಯದೊಂದಿಗೆ ಮರು ಪರಿಶೀಲನೆಯಾಗಬೇಕು ಎಂದು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟ ಆಗ್ರಹಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಬಿ.ಕೋದಂಡರಾಮ ಮಾತನಾಡಿ, ವಾಹನದಿಂದ ನಾಗರಿಕರ ಸಾವು ಸಂಭವಿಸಿದರೆ ಚಾಲಕನಿಗೆ ಏಳರಿಂದ ಹತ್ತು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 10 ಲಕ್ಷದವರೆಗೆ ತಂಡ ವಿಧಿಸುವ ನಿರ್ಣಯವನ್ನು ಗೃಹ ಮಂತ್ರಿ ಅಮಿತ್ ಶಾ ಸಂಸತ್ತಿನಲ್ಲಿ ಪ್ರಸ್ತಾಪಿಸಿದ್ದಾರೆ. ಇದರ ಅಳವಡಿಕೆ ಬಗ್ಗೆ ನಮಗೆ ಗೊಂದಲವಿದ್ದು, ಚಾಲಕರಿಗೆ ಮರಣಶಾಸನವಾಗುವ ಸಾಧ್ಯತೆಯಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಚಾಲಕರಿಗೆ ಯಾವುದೇ ಸೌಲಭ್ಯ ನೀಡದೆ, ಅಪಘಾತಗಳ ಸತ್ಯತೆ ಪರಿಶೀಲಿಸುವ ಉತ್ತಮ ವ್ಯವಸ್ಥೆ ಸೃಷ್ಟಿಸದೆ ಕೇವಲ ಚಾಲಕ ವಿರೋಧಿ ನೀತಿಯನ್ನು ಕೇಂದ್ರವು ವಿಧೇಯಕದ ಮೂಲಕ ತೋರಿದೆ. ಇದನ್ನು ಕೈ ಬಿಡಬೇಕು. ಇಲ್ಲದಿದ್ದರೆ ಬರುವ ದಿನಗಳಲ್ಲಿ ಎಲ್ಲ ಬಗೆಯ ಸರಕು ಸಾಗಣೆ ಸ್ಥಗಿತಗೊಳಿಸಿ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಅಬ್ದುಲ್ ಖಾದರ್ ಶಾಹಿದ್, ಪ್ರಕಾಶ್ ಎಫ್.ಫರೇರಾ, ಕಾರ್ಯದರ್ಶಿ ಎಸ್.ಅಭಿಷೇಕ್, ಪ್ರಮುಖರಾದ ಎನ್.ರಾಜೇಂದ್ರ ಕೆ.ಎಂ.ನಾಗಚಂದ್ರ, ಮಹಮ್ಮದ್ ಅಸ್ಗರ್ ಖಾನ್, ಎಂ.ವಿ. ಶ್ರೀನಿವಾಸ್ ಮಿತ್ರ ಉಪಸ್ಥಿತರಿದ್ದರು.

ಶಾರದಾದೇವಿನಗರ ವೃತ್ತದಲ್ಲಿ ಶಾರದಾಮಾತೆ ಪ್ರತಿಮೆ ಸ್ಥಾಪನೆಗೆ ಒತ್ತಾಯ

ಮೈಸೂರು, ಜ. 3– ಮೈಸೂರಿನ ಶಾರದಾ ದೇವಿ ನಗರ ವೃತ್ತದಲ್ಲಿ ಶ್ರೀ ಮಾತಾ ಶ್ರೀ ಶಾರದಾದೇವಿ 171ನೇ ಜಯಂತಿ ಅಂಗವಾಗಿ ಆಧ್ಯಾತ್ಮಿಕ ಲೋಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ.ಟಿ.ಪ್ರಕಾಶ್, ಶ್ರೀ ಶಾರದಾ ಮಾತೆ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ನಂತರ ಸಿಹಿ ವಿತರಿಸಿ ಮಾತನಾಡಿ, ತಮ್ಮ ಸಾಧನೆ, ತ್ಯಾಗ ಮತ್ತು ಪರಿಶ್ರಮದಿಂದ ಶ್ರೀ ರಾಮಕೃಷ್ಣ ಪರಮಹಂಸರು ಹಾಗೂ ವೀರಸನ್ಯಾಸಿ ಸ್ವಾಮಿ ವಿವೇಕಾನಂದರನ್ನು ಆಧ್ಯಾತ್ಮಿಕವಾಗಿ ಬೆಳೆಸಿದ ಮಹಾನ್ ಶಕ್ತಿ ಶ್ರೀ ಶಾರದಾ ದೇವಿಯವರು ಎಂದು ಹೇಳಿದರು.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಬಿ.ಎಂ.ರಘು ಮಾತನಾಡಿ, ವಿವೇಕಾನಂದನಗರ, ರಾಮಕೃಷ್ಣನಗರದ ವೃತ್ತದಲ್ಲಿ ರಾಮಕೃಷ್ಣ ಪರಮಹಂಸರ ಪ್ರತಿಮೆ ಪ್ರತಿಷ್ಠಾಪಿಸಿದಂತೆ ಶಾರದಾದೇವಿನಗರದಲ್ಲಿಯೂ ಶಾರದಾಮಾತೆಯ ಪ್ರತಿಮೆ ಸ್ಥಾಪನೆ ಆಗಬೇಕು. ತನ್ಮೂಲಕ ಮೂವರು ಮಹನೀಯರ ಕೊಡುಗೆಯನ್ನು ಶಾಶ್ವತವಾಗಿ ನೆನೆಯುವ ಕೆಲಸವಾಗುತ್ತದೆ ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಇಂದಿನ ಪೀಳಿಗೆಗೆ ಶ್ರೀಮಾತೆ ಶ್ರೀ ಶಾರದಾದೇವಿಯವರ ಬದುಕು, ತತ್ವ, ಸಂದೇಶ ಮತ್ತು ಆದರ್ಶಗಳು ದಾರಿದೀಪವಾಗಬೇಕು. ಎಲ್ಲರೂ ಅವುಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷರಾದ ಕಡಕೋಳ ಜಗದೀಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳೀಯ ಮುಖಂಡರಾದ ಎಚ್.ಜಿ.ರಾಜಮಣಿ, ಶ್ರೀಧರ್‌ಶರ್ಮಾ, ವಿಜೇಂದ್ರ, ರಾಜಕುಮಾರ್ ಕಾಮತ್, ಪಾಂಡುರಂಗ ಶೆಟ್ಟಿ, ರವಿ ಅರಸ್, ವಿನುತಾ, ಹೇಮಲತಾ, ರಾಧಾ ಮುತಾಲಿಕ್, ಸುಮಾ, ರಮಾಬಾಯಿ, ಮಂಜುಳ, ನೇತ್ರಾವತಿ, ರಮೇಶ್, ತುಳಸಿ ಹಾಗೂ ಇನ್ನಿತರರು ಹಾಜರಿದ್ದರು.

ಹವೀಕ ಸಂಘದ ನೂತನ ಪದಾಧಿಕಾರಿಗಳು

ಮೈಸೂರು, ಜ. 3– ಮೈಸೂರಿನ ಹವೀಕ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಡಿ.ಎನ್. ಕೃಷ್ಣಮೂರ್ತಿ (ಅಧ್ಯಕ್ಷ), ಶಾಂತಾರಾವ್ ಭಟ್ (ಉಪಾಧ್ಯಕ್ಷ), ಚಿನ್ಮಯ ಡಿ. ಹೆಗಡೆ (ಕಾರ್ಯದರ್ಶಿ), ಚಂದ್ರಶೇಖರ್ ಜಿ. ಭಟ್ (ಜಂಟಿ ಕಾರ್ಯದರ್ಶಿ), ಜಿ.ಎನ್. ಅನಂತವರ್ಧನ (ಖಜಾಂಚಿ). ಆಡಳಿತ ಮಂಡಳಿ ಸದಸ್ಯರಾಗಿ ಎನ್.ನಾಗೇಂದ್ರ ಭಟ್, ಬಿ.ಸಂದೇಶ, ಡಾ.ನಾರಾಯಣ ಹೆಗಡೆ, ಜಿ.ಕೆ. ಉಮೇಶ, ಲಕ್ಷ್ಮೀಕಾಂತ ಹೆಗಡೆ, ಶ್ರೀಮತಿ ಸಂಧ್ಯಾ ರವಿ ಆಯ್ಕೆಯಾಗಿದ್ದಾರೆ.

ಶ್ರೀಕಂಠೇಶ್ವರ ದೇವಾಲಯದ ಅಂಧಕಾಸುರ ಸಂಹಾರ ಪ್ರಕರಣ

ಜಿಲ್ಲಾಡಳಿತದ ಶಾಂತಿ ಸಭೆ ವಿಫಲ



ನಂಜನಗೂಡು, ಜ.3– ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ವತಿಯಿಂದ ಡಿ.26 ರಂದು ನಡೆದ ಅಂಧಕಾಸುರನ ಸಂಹಾರ ಧಾರ್ಮಿಕ ಕಾರ್ಯಕ್ರಮಕ್ಕೆ ಅಡ್ಡಿ ಪಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಶಾಂತಿ ಸಭೆ ವಿಫಲಗೊಂಡಿತು.

ನಗರದ ಮಿನಿ ವಿಧಾನಸೌಧದ ತಾಲೂಕು ಕಚೇರಿಯ ಸಭಾಂಗಣದಲ್ಲಿ ನಡೆದ ಶಾಂತಿ ಸಭೆಯಲ್ಲಿ ದಲಿತಪರ, ರೈತ ಪರ ಸಂಘಟನೆಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು. ಶ್ರೀಕಂಠೇಶ್ವರ ಭಕ್ತರಿಗೆ ಶಾಂತಿ ಸಭೆ ನಡೆಯುವ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಜಿಲ್ಲಾಡಳಿತ ಏಕಪಕ್ಷೀಯವಾಗಿ ಸಭೆ ನಡೆಸಲು ಮುಂದಾಗುತ್ತಿದೆ ಎಂದು ಆರೋಪಿಸಿ ಶ್ರೀಕಂಠೇಶ್ವರ ಭಕ್ತರು ಸಭೆಯಿಂದ ಹೊರ ನಡೆಯಲು ಮುಂದಾದರು.

ಬಿಜೆಪಿ ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ ಮಾತನಾಡಿ, ಅಂಧಕಾಸುರನ ಸಂಹಾರ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿ ದೇವರ ಉತ್ಸವಮೂರ್ತಿಗಳಿಗೆ ನೀರು ಎರಚಿ ಅಪಚಾರ ಎಸಗಿದ್ದಾರೆ ಎಂದು ಆಪಾದಿಸಿರುವ ಗುಂಪಿನ ಮುಖಂಡರಿಗೆ ಸರಿಯಾದ ಮಾಹಿತಿ ನೀಡದೇ ಇರುವ ಕಾರಣ ಇದು ಅವ್ಯವಸ್ಥೆಯ ಸಭೆಯಾಗಿದೆ. ಕೆಲವರಿಗೆ ಮಾಹಿತಿ ಕೊಟ್ಟು ಇನ್ನು ಕೆಲವರಿಗೆ ಮಾಹಿತಿಯನ್ನೇ ಕೊಟ್ಟಿಲ್ಲ. ನಾನು ಯಾವುದೋ ಕೆಲಸದ ನಿಮಿತ್ತ ಮಿನಿ ವಿಧಾನಸೌಧಕ್ಕೆ ಬಂದವನು ಸಭೆ ನಡೆಯುವುದು ತಿಳಿದು ಒಳಗಡೆ ಬಂದಿದ್ದೇನೆ. ಈ ಬಗ್ಗೆ ಯಾರೂ ಧ್ವನಿ ಎತ್ತುತ್ತಿದ್ದಾರೋ ಅವರಿಗೆ ಸಭೆಯ ಮಾಹಿತಿಯಿಲ್ಲ. ಹಾಗಾಗಿ ಮತ್ತೊಂದು ದಿನ ಶಾಂತಿ ಸಭೆ ಆಯೋಜಿಸುವಂತೆ ಆಕ್ಷೇಪ ವ್ಯಕ್ತಪಡಿಸಿ ಸಭೆಯಿಂದ ಹೊರ ನಡೆದರು.

ಈ ವೇಳೆ ಅವರನ್ನು ಹಿಂಬಾಲಿಸಿದ ಮುಖಂಡರನ್ನು ಮನವೊಲಿಸಿದ ಅಪರ ಜಿಲ್ಲಾಧಿಕಾರಿ ಲೋಕನಾಥ್, ಎಲ್ಲರ ಅಹವಾಲು ಆಲಿಸಿ ಸಮಸ್ಯೆ ಇತ್ಯರ್ಥ ಪಡಿಸುವುದೇ ನಮ್ಮ ಉದ್ದೇಶವಾಗಿದೆ. ಎಲ್ಲರಿಗೂ ಮಾಹಿತಿ ತಲುಪಿಸುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡಿದೆ. ಸಭೆಗೆ ಬಂದು ಅರ್ಧಕ್ಕೆ ಎದ್ದು ಹೋಗುವುದು ಸಭಾ ಗೌರವಲ್ಲ. ಸಭೆಯಲ್ಲಿ ಕುಳಿತು ಸಭೆಯನ್ನು ಆಲಿಸಿ ಎಂದು ಎದ್ದು ಹೊರಹೋಗುತ್ತಿದ್ದ ಭಕ್ತಮಂಡಳಿಯ ಮುಖಂಡರನ್ನು ಸಭೆಯಲ್ಲಿ ಕೂರುವಂತೆ ಮಾಡಿದರು.

ಇದೇ ವೇಳೆ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ನಂದಿನಿ ಮಾತನಾಡಿ, ಎರಡು ಕಡೆಯಿಂದ ಎಫ್‌ಐಆರ್ ದಾಖಲಾದ ಮೇಲೆ ನಮಗೆ ಕೆಲವು ರೀತಿ ನೀತಿ ಇರುತ್ತವೆ. ಕಾನೂನು ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗಿರುವುದರಿಂದ ಇದಕ್ಕೆ ಕಾಲಾವಕಾಶ ಬೇಕಿದೆ. ಯಾರ ಭಾವನೆಗಳಿಗೆ ಧಕ್ಕೆಯಾಗಿದೆ ಎಂಬುದಕ್ಕೆ ನ್ಯಾಯಾಲಯಕ್ಕೆ ಸಾಕ್ಷ್ಯ ಒದಗಿಸಲು ಅಧಿಕೃತ ದಾಖಲೆಗಳನ್ನು ಕಲೆ ಹಾಕಲು ತನಿಖೆ ನಡೆಯುತ್ತಿದೆ. ಧಾರ್ಮಿಕ ವಿಚಾರ ಬಂದಾಗ ನಾವು ಬಹಳ ಸೂಕ್ಷ್ಮವಾಗಿ ಕಾರ್ಯನಿರ್ವಹಣೆ ಮಾಡಬೇಕಾಗುತ್ತದೆ ಎಂದರು. ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ಮಾತನಾಡಿ, ಎರಡು ಗುಂಪಿನ ಭಾವನೆಗಳ ನಡುವೆ ಸಂಘರ್ಷ ಹೊರತುಪಡಿಸಿ ಪರಸ್ಪರ ಅನ್ಯೋನ್ಯತೆಯಿಂದ ಒಗ್ಗಟ್ಟಾಗಿ ಇರುವುದನ್ನು ಈ ಸಭೆಯಲ್ಲಿ ಗಮನಿಸಿದ್ದೇನೆ. ಘಟನೆ ಕುರಿತು ತನಿಖೆ ನಡೆಯುತ್ತಿರುವುದರಿಂದ ಸತ್ಯಾಸತ್ಯತೆ ಹೊರ ಬರಲಿದೆ. ಅಲ್ಲದೆ ಕಡ್ಡಾಯವಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ ಹಾಗಾಗಿ ನಂಜನಗೂಡು ಬಂದ್‌ಗೆ ಅನುಮತಿ ನೀಡುವಂತೆ ಪತ್ರ ಬರೆದಿರುವವರು ಬಂದ್ ಹಿಂಪಡೆಯುವಂತೆ ಮನವಿ ಮಾಡಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ನಗರಸಭಾ ಸದಸ್ಯ ಕಪಿಲೇಶ್, ಬಂದ್ ಆಚರಿಸುವ ಕುರಿತು ಹಲವು ಸಂಘಟನೆಗಳು, ಸಂಘ ಸಂಸ್ಥೆಯವರು ನಿರ್ಧಾರ ಮಾಡಿರುವುದರಿಂದ ಸಭೆ ಯಲ್ಲಿ ಇರುವ ನಾವು ನಾಲ್ಕು ಜನ ನಿರ್ಧಾರ ತಿಳಿಸಲು ಸಾಧ್ಯವಿಲ್ಲ. ಎಲ್ಲರೊಂದಿಗೂ ಚರ್ಚಿಸಿ ನಮ್ಮ ಅಂತಿಮ ನಿರ್ಧಾರ ಪ್ರಕಟಿಸುತ್ತೇವೆ ಆದ್ದರಿಂದ ನಮಗೆ ಕಾಲಾವಕಾಶ ಬೇಕು ಎಂದು ತಿಳಿಸಿದರು

ದಸಂಸ ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್, ಮಲ್ಲಹಳ್ಳಿ ನಾರಾಯಣ, ಶಂಕರಪುರ ಸುರೇಶ, ತಾಪಂ ಮಾಜಿ ಅಧ್ಯಕ್ಷ ಬಿ.ಎಂ. ನಾಗೇಶ್ ರಾಜ್, ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಪ್ರಧಾನ ಆಗಮಿಕ ಜೆ. ನಾಗಚಂದ್ರ ದೀಕ್ಷಿತ್, ಹಿರಿಯ ಅರ್ಚಕ ನೀಲಕಂಠ ದೀಕ್ಷಿತ್ ಮತ್ತು ನಗರ ಸಭಾ ಸದಸ್ಯ ಕಪಿಲೇಶ್ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ರಕ್ಷಿತ್, ತಹಸೀಲ್ದಾರ್ ಶಿವಪ್ರಸಾದ್, ಡಿವೈಎಸ್ಪಿ ಗೋವಿಂದರಾಜು, ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಬಸವರಾಜು ಉಪಸ್ಥಿತರಿದ್ದರು.

ಮಹಿಳೆ ಮೇಲೆ ಹುಲಿ ದಾಳಿ

ರೈತರ ಬೊಬ್ಬೆಯಿಂದ ಮಹಿಳೆ ಬಿಟ್ಟು ಓಡಿದ ಹುಲಿ




ಮಲ್ಲುಂಡಿ, ಜ.3– ಗ್ರಾಮಾಂತರ ಪ್ರದೇಶಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಹುಲಿ ಇದೀಗ ಮಹಿಳೆಯೊಬ್ಬರ ಮೇಲೆ ದಾಳಿ ನಡೆಸಿ ಗಾಯಗೊಳಿಸಿದೆ.

ನಂಜನಗೂಡು ತಾಲೂಕು ಮಲ್ಲುಂಡಿ–ಹಲ್ಲರೆ ಗ್ರಾಮದ ಮಧ್ಯೆ ಈ ಘಟನೆ ಸಂಭವಿಸಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ. ಹಲ್ಲರೆ ಗ್ರಾಮದ ನಿವಾಸಿ ಶಿವಮಲ್ಲಮ್ಮ ಎಂಬುವರೇ ಗಾಯಗೊಂಡವರಾಗಿದ್ದು ಅವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಶಿವಮಲ್ಲಮ್ಮನವರು ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಪೊದೆಯಿಂದ ಹೊರ ಬಂದ ಹುಲಿ ಆಕೆಯ ಮೇಲೆ ಏಕಾಏಕಿ ದಾಳಿ ಮಾಡಿದೆ. ಇದರಿಂದ ಗಾಬರಿಗೊಂಡ ಶಿವಮಲ್ಲಮ್ಮ ಜೋರಾಗಿ ಕಿರುಚಿಕೊಂಡಿದ್ದಾರೆ. ತಕ್ಷಣ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಪತಿ ಲೋಕೇಶ್ ನಾಯಕ ಇದನ್ನು ನೋಡಿ ಕಿರುಚಾಡಿದ್ದಾರೆ. ಅಕ್ಕಪಕ್ಕದ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ರೈತರು ಕೂಡ ಕಂಡು ಜೋರಾಗಿ ಬೊಬ್ಬೆ ಹಾಕಿದ್ದಾರೆ. ಇದರಿಂದ ಗಾಬರಿಗೊಂಡ ಹುಲಿ ಆಕೆಯನ್ನು ಬಿಟ್ಟು ಪರಾರಿಯಾಗಿದೆ.

ತಕ್ಷಣ ಆಕೆಯನ್ನು ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ವಿಷಯ ತಿಳಿದು ನಂಜನಗೂಡಿನ ಆಸ್ಪತ್ರೆಗೆ ಶಾಸಕ ದರ್ಶನ್ ಧ್ರುವನಾರಾಯಣ್ ಭೇಟಿ ನೀಡಿ ಗಾಯಾಳುಗೆ ಧೈರ್ಯ ಹೇಳಿ ತಕ್ಷಣ ಅಧಿಕಾರಿಗಳಿಗೆ ಹುಲಿಯನ್ನು ಸೆರೆ ಹಿಡಿಯುವಂತೆ ಸೂಚಿಸಿದ್ದಾರೆ.

ವಿಧಾನಪರಿಷತ್ ಸದಸ್ಯ ವಿಶ್ವನಾಥ್‌ರಿಂದ ಜನತಾ ದರ್ಶನ



ಹುಣಸೂರು, ಜ.3– ವಿಧಾನಪರಿಷತ್ ಸದಸ್ಯ ಅಡಗೂರು ಎಚ್. ವಿಶ್ವನಾಥ್ ಅವರು ಕ್ಷೇತ್ರದ ಜನರ ಕುಂದು ಕೊರತೆ ಆಲಿಸಿ ಸಮಸ್ಯೆ ಬಗೆಹರಿಸುವ ದೃಷ್ಟಿಯಿಂದ ಪ್ರತಿ ಸೋಮವಾರ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಬೆಳಿಗ್ಗೆ 11ರಿಂದ ಸಂಜೆ 6ರವರೆಗೆ ಅರ್ಜಿ ಸ್ವೀಕರಿಸಿ ಸ್ಥಳದಲ್ಲೇ ಸಮಸ್ಯೆಯನ್ನು ಬಗೆಹರಿಸಲಾಗುವುದು. ಜನ ಖುದ್ದು ಬರಲು ಸಾಧ್ಯವಾಗದಿದ್ದರೆ ಮೊ.ಸಂ. 9663996390 ಅಥವಾ ಆಪ್ತ ಸಹಾಯಕ ನಟರಾಜ್ ಅವರ ಮೊಬೈಲ್ ನಂ.: 9449055242 ಕರೆ ಮಾಡಿ ಅಹವಾಲು ತಿಳಿಸಬಹುದು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲಾ ಬೀಗ ಮುರಿದು ಅಕ್ಕಿ, ಬೇಳೆ,ಎಣ್ಣೆ ಕಳವು



ಪಿರಿಯಾಪಟ್ಟಣ, ಜ.3– ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬೆಟ್ಟದ ತುಂಗ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸೋಮವಾರ ರಾತ್ರಿ ಕಳ್ಳತನ ನಡೆದಿದೆ.

ಶಾಲಾ ಕೊಠಡಿಯ ಬೀಗ ಒಡೆದು ಒಳನುಗ್ಗಿರುವ ಕಳ್ಳರು ಅಕ್ಕಿ, ಬೇಳೆ, ಎಣ್ಣೆ ಸೇರಿದಂತೆ ಇನ್ನು ಹಲವು ಪದಾರ್ಥಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ.

ಬೆಟ್ಟದ ತುಂಗ ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ನಟರಾಜ್ ಮಾತನಾಡಿ, ನಮ್ಮ ಊರಿನ ಅಂಗನವಾಡಿ ಪ್ರಾಥಮಿಕ ಶಾಲೆಯಲ್ಲಿ ಹಲವಾರು ದಿನಗಳಿಂದ ಆಗಾಗ್ಗೆ ಕಳ್ಳತನ ನಡೆಯುತ್ತಿದ್ದು, ಇದರತ್ತ ಗಮನ ಹರಿಸಬೇಕು ಎಂದು ಆಗ್ರಹಿಸಿದ್ದಾರೆ.

ಇದೇ ವೇಳೆ ರೈತ ಮುಖಂಡ ವಿಜಯ್ ರಾಜ ಅರಸ್ ಮಾತನಾಡಿ, ಇತ್ತೀಚೆಗೆ ಬೆಟ್ಟದ ತುಂಗ ವ್ಯಾಪ್ತಿಯಲ್ಲಿ ಕೆಲವು ಕಿಡಿಗೇಡಿಗಳು ರೈತರ ತೋಟಕ್ಕೆ ನುಗ್ಗಿ ಬಾಳೆ, ಅಡಿಕೆ, ತೆಂಗು ಕಳ್ಳತನ ಮಾಡುತ್ತಿದ್ದು, ಅವರಿಂದ ಬಡ ರೈತರಿಗೆ ತೊಂದರೆಯಾಗುತ್ತಿದೆ. ಇದರತ್ತ ಗಮನ ಹರಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಕುರಿತು ಶಾಲೆ ಮುಖ್ಯಶಿಕ್ಷಕ ಬೆಟ್ಟದಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಈ ಸಂದರ್ಭದಲ್ಲಿ ಶಿಕ್ಷಕರಾದ ರಾಜೇಶ್ ಹಾಗೂ ಗಣೇಶ್ ಹಾಜರಿದ್ದರು

ತ್ರಿಪುರ ಸುಂದರಿ ಅಮ್ಮನ ಸನ್ನಿದಿಯಲ್ಲಿ ಕೆಟ್ಟು ನಿಂತ ಹೈಮಾಸ್ಟ್ ದೀಪ



ಮೂಗೂರು: ಕುಲ ದೇವತೆ ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಅಂದವನ್ನು ಹೆಚ್ಚಿಸುವ ದೃಷ್ಟಿಯಿಂದ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರು ನೀಡಿದ್ದ ಹೈಮಾಸ್ಟ್ ದೀಪ ಕೆಟ್ಟು ನಿಂತಿದ್ದು, ದೇವಾಲಯದ ಸುತ್ತ–ಮುತ್ತ ಕಗ್ಗತ್ತಲಿನಿಂದ ಕೂಡಿದೆ.

ಈ ಹಿಂದೆ ಸಿ.ಎಸ್. ಪುಟ್ಟರಾಜು ಅವರು ಸಂಸದರಾಗಿದ್ದ ಸಂದರ್ಭದಲ್ಲಿ 6.5 ಲಕ್ಷ ರೂ. ವೆಚ್ಚದಲ್ಲಿ ದೇವಾಲಯದ ಆವರಣದಲ್ಲಿ ಗ್ರಾಮಸ್ಥರು ಹಾಗೂ ದೇವಾಲಯದ ಅರ್ಚಕರ ಸಮ್ಮುಖದಲ್ಲಿ ಹೈಮಾಸ್ಟ್ ದೀಪವನ್ನು ಲೋಕಾರ್ಪಣೆ ಮಾಡಿದ್ದರು.

ಹಲವು ವರ್ಷಗಳ ಕಾಲ ದೇವಾಲಯದ ಆವರಣಕ್ಕೆ ಬೆಳಕು ನೀಡುತ್ತಿದ್ದ ಹೈಮಾಸ್ಟ್ ದೀಪವು ಕೆಟ್ಟು ಹಲವು ತಿಂಗಳುಗಳೇ ಕಳೆದಿದ್ದರೂ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಸ್ಥಳೀಯ ಆಡಳಿತ ಅವ್ಯವಸ್ಥೆ ಹಾಗೂ ಅಧಿಕಾರಿಗಳ ಸಮನ್ವಯತೆ ಕೊರತೆಯಿಂದಾಗಿ ದೀಪ ರಿಪೇರಿಯಾಗದೆ ನಿಂತಿದೆ.

ಹೆಚ್.ಡಿ.ಕೋಟೆಯಲ್ಲಿ ಇಂದಿನಿಂದ ಹನುಮ ಜಯಂತಿ

- ಇಂದು ಹನುಮ ಮಾಲಾಧಾರಣೆ
- ನಾಳೆ ಪವನ ಹೋಮ, ಧಾರ್ಮಿಕ ಸಭೆ
- ಜ.6 ರಂದು ಉತ್ಸವ ಮೂರ್ತಿ ಮೆರವಣಿಗೆ



ಹೆಚ್.ಡಿ.ಕೋಟೆ : ಪಟ್ಟಣದಲ್ಲಿ ಹನುಮ ಸೇವಾ ಸಮಿತಿ ವತಿಯಿಂದ 6ನೇ ವರ್ಷದ ಹನುಮ ಜಯಂತಿ ಅಂಗವಾಗಿ ಶೋಭಾಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹನುಮ ಸೇವಾ ಸಮಿತಿ ಅಧ್ಯಕ್ಷ ಡೈರಿ ಶ್ರೀಕಾಂತ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.4ರಂದು ಬೆಳಿಗ್ಗೆ ಪಟ್ಟಣದಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಲ್ಲಿ ಭಕ್ತರು ಹನುಮ ಮಾಲಾಧಾರಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ, 5ನೇ ತಾರೀಕು ಶುಕ್ರವಾರ ಬೆಳಗ್ಗೆ 9:30ರ ಶುಭ ಮುಹೂರ್ತದಲ್ಲಿ ಪವನ ಹೋಮ ಮಧ್ಯಾಹ್ನ 12 ಗಂಟೆಗೆ ಧಾರ್ಮಿಕ ಸಭೆಯಲ್ಲಿ ಭಾಷಣಕಾರರಾದ ಇಲವಾಲ ಶ್ರೀ ವೆಂಕಟರಾಮ ಅವರು ಮಾತನಾಡಲಿದ್ದು, ಮಧ್ಯಾಹ್ನ 1ಕ್ಕೆ ಪ್ರಸಾದ ವಿತರಣೆ ಮಾಡಲಾಗುವುದು.

ಜ.6 ರಂದು ಹೆಚ್.ಡಿ.ಕೋಟೆ ಪಟ್ಟಣದಲ್ಲಿರುವ ಗದ್ದಿಗೆ ಸರ್ಕಲ್‌ನ ಬಳಿ ಇರುವ ಬಣ್ಣಾರಿ ಅಮ್ಮ ದೇವಸ್ಥಾನ ಬಳಿ ಪರಮ ಪೂಜ್ಯ ಶ್ರೀ ಮಹಾದೇವಸ್ವಾಮಿಗಳು, ಪಡುವಲ ವಿರಕ್ತ ಮಠ ಬಿಡುಗಲು ಹಾಗೂ ಗಣ್ಯರಿಂದ ಆಂಜನೇಯ ಸ್ವಾಮಿಗೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಉತ್ಸವ ಮೂರ್ತಿಗೆ ಚಾಲನೆ ನೀಡಲಿದ್ದಾರೆ. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಆಂಜನೇಯ ಸ್ವಾಮಿ ಉತ್ಸವ ಮೂರ್ತಿಯನ್ನು ಮಂಗಳ ಮಂಗಳವಾದ್ಯ, ನಂದಿ ಕಂಬ, ವೀರಗಾಸೆ, ಚಂಡೆ, ಕಂಸಾಳೆ, ಸೇರಿದಂತೆ ಹಲವು ಜಾನಪದ ಕಲಾತಂಡದೊಂದಿಗೆ ಮೆರವಣಿಗೆ ಮೂಲಕ ಶ್ರೀ ವರದರಾಜ ಸ್ವಾಮಿ ದೇವಾಲಯದ ಬಳಿ ಸಮಾವೇಶಗೊಳ್ಳಲಿದೆ ಎಂದರು.

ಹನುಮ ಜಯಂತಿ ಕಾರ್ಯಕ್ರಮಕ್ಕೆ ಪಕ್ಷಾತೀತವಾಗಿ ಜಾತ್ಯಾತೀತವಾಗಿ, ಹೆಚ್ ಡಿ ಕೋಟೆ, ಸರಗೂರು, ತಾಲೂಕಿನಿಂದ ಎಲ್ಲಾ ಸಮುದಾಯದವರು ಕಾರ್ಯಕರ್ತರುಗಳು, ಮುಖಂಡರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಕಾರ್ಯದರ್ಶಿ ರಾಜು ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಹನುಮ ಸೇವಾ ಸಮಿತಿ ಖಜಾಂಚಿ ಮುತ್ತುರಾಜ್, ಉಪಾಧ್ಯಕ್ಷ ಚಂದ್ರಮೋಳಿ, ಸಲಹಾ ಸಮಿತಿ ಸಂಚಾಲಕರಾದ ನಾಗೇಶ್, ಮೋಹನ್‌ಕುಮಾರ್, ಮಾಜಿ ಅಧ್ಯಕ್ಷ ನಂದೀಶ್ ಸಾಮಾಜಿಕ ಜಾಲತಾಣ ಮುಖ್ಯಸ್ಥ ಶಿವರಾಜು ಸದಸ್ಯರಾದ ಎಚ್.ಕೆ.ಸುರೇಶ್, ಮೋಹನ್ ಇನ್ನು ಮುಂತಾದವರು ಹಾಜರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಆಲನಹಳ್ಳಿ ಗ್ರಾಪಂ ವ್ಯಾಪ್ತಿಯ ಜನಸಂಪರ್ಕ ಸಭೆಗೆ ಆಗಮಿಸಿದ್ದ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಕ್ಯಾತನಹಳ್ಳಿ ಗೇಟ್ ಬಳಿ ಸನ್ಮಾನಿಸಲಾಯಿತು. ಈ ವೇಳೆ ಕೆಪಿಸಿಸಿ ಪರಿಶಿಷ್ಟ ಪಂಗಡದ ಪ್ರಧಾನ ಕಾರ್ಯದರ್ಶಿ ಕ್ಯಾತನಹಳ್ಳಿ ನಾಗರಾಜು, ಮೈಮುಲ್ ನಿರ್ದೇಶಕ ಕೆ.ಈರೇಗೌಡ, ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ಗ್ರಾಪಂ ಉಪಾಧ್ಯಕ್ಷ ಪ್ರಸನ್ನ ಕುಮಾರ್, ಕಾರ್ಮಿಕ ಘಟಕದ ಅಧ್ಯಕ್ಷ ಎಚ್. ಮಂಜುನಾಥ್, ಕಾಂಗ್ರೆಸ್ ಘಟಕದ ಅಧ್ಯಕ್ಷ ಶಿಂಡೇನಹಳ್ಳಿ ಎಂ.ಗಿರೀಶ್, ಮಡಿವಾಳ ಬೀರೇಶ್, ಆಲನಹಳ್ಳಿ ಆನಂದ, ದೇವೇಗೌಡ, ನಂದೀಶ್, ದೇವರಾಜು, ಪರಮೇಶ್, ತೇಜು, ಕಿರಣ್ ಇತರರು ಹಾಜರಿದ್ದರು.

ಮನುಕುಲ ಉದ್ಧರಿಸುವ ಮಹಾನ್ ಗ್ರಂಥ ರಾಮಾಯಣ

ರಾಜನಹಳ್ಳಿ ಶ್ರೀ ಮಠದ ಪ್ರಸನ್ನಾನಂದ ಮಹಾಸ್ವಾಮಿಗಳು ಬಣ್ಣನೆ



ತಿ.ನರಸೀಪುರ, ಜ.3– ಆದಿಕವಿ ಮಹರ್ಷಿ ವಾಲ್ಮೀಕಿ ಮಹಾಕವಿಯ ರಾಮಾಯಣ ಮಹಾಕಾವ್ಯದಲ್ಲಿ ಭಾರತೀಯ ಸಂಸ್ಕೃತಿ, ಸಂಪ್ರದಾಯ ಮತ್ತು ಪರಂಪರೆಯು ವಿಶ್ವ ದಲ್ಲಿ ಮಾದರಿಯಾಗಿದೆ. ವಾಲ್ಮೀಕಿ ಮಹ ರ್ಷಿಯ ರಾಮಾಯಣವು ಮನುಕುಲವನ್ನು ಉದ್ಧರಿಸುವ ಮಹಾನ್ ಗ್ರಂಥವಾಗಿದೆ ಎಂದು ದಾವಣಗೆರೆ ರಾಜನಹಳ್ಳಿ ಶ್ರೀ ಮಠದ ಪ್ರಸನ್ನಾನಂದ ಮಹಾಸ್ವಾಮಿ ತಿಳಿಸಿದರು.

ತಾಲೂಕಿನ ಎಸ್.ಮೇಗಡಹಳ್ಳಿ (ಹೊಸೂರು) ಗ್ರಾಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಸೇವಾ ಅಭಿವೃದ್ಧಿ ಸಂಘದ ವತಿಯಿಂದ ನಿರ್ಮಿಸಲಾ ಗಿರುವ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿಯನ್ನು ಬುಧವಾರ ಲೋಕಾರ್ಪಣೆಗೊ ಳಿಸಿ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಆಶೀ ರ್ವಚನ ನೀಡಿ ಅವರು ಮಾತನಾಡಿದರು.

ಪಿತೃವಾಕ್ಯ ಪರಿಪಾಲನೆ ಎಂಬ ಮಾತು ಬಂದಾಗ ನಮಗೆ ತಕ್ಷಣ ರಾಮ ನೆನಪಿಗೆ ಬರುತ್ತಾನೆ. ತಂದೆ ದಶರಥ ಮಹಾರಾಜನ ಮಾತು ನಡೆಸಿ ಕೊಡಲು ರಾಜ್ಯ ಸೇರಿದಂತೆ ಸರ್ವಸ್ವವನ್ನೂ ತೊರೆದು ಕಾಡಿಗೆ ಹೊರಟ ಮರ್ಯಾದಾ ಪುರುಷೋತ್ತಮ ರಾಮ. ಪತಿಯೇ ಪರಮಾತ್ಮನೆಂದು ರಾಮನನ್ನು ಹಿಂಬಾಲಿಸಿದ ಪತ್ನಿ ಸೀತಾದೇವಿ, ಅಣ್ಣ–ಅತ್ತಿಗೆಗೆ ಸಂರಕ್ಷಕನಾಗಿ ಅವರ ಹೆಜ್ಜೆಗೆ ಹೆಜ್ಜೆ ಹಾಕಿದ ಸೋದರ ಲಕ್ಷ್ಮಣ. ಇವು ಭಾರತೀಯ ಸಂಸ್ಕೃತಿಯ ತಾಯಿ ಬೇರಿನಂತಿರುವ, ಈ ನೆಲದ ಆದಿ ಕಾವ್ಯ ಎಂದು ಪರಿಗಣಿಸಲ್ಪಟ್ಟಿರುವ ರಾಮಾಯಣ ಎಂಬ ಪ್ರಾಚೀನ ಮಹಾ ಕಾವ್ಯದಲ್ಲಿ ಕಾಣಬರುವ ಪಾತ್ರಗಳು. ಇದರ ಸೃಷ್ಟಿಕರ್ತರು ವಾಲ್ಮೀಕಿ ಮಹರ್ಷಿಗಳು. ರಾಮಾಯಣದಂತಹ ಜೀವನ ಮೌಲ್ಯಗಳುಳ್ಳ ಮಹಾಕಾವ್ಯವನ್ನು ಕಟ್ಟಿಕೊಟ್ಟ ವಾಲ್ಮೀಕಿಯನ್ನು ನಮ್ಮ ಪರಂಪರೆ ಬಹಳ ಗೌರವದಿಂದ ನೆನೆಯುತ್ತದೆ. ವಾಲ್ಮೀಕಿ ರಾಮಾಯಣವು ಅನೇಕ ಕಾವ್ಯ, ಕಥೆ, ಪುರಾಣ, ಇತಿಹಾಸಕ್ಕೆ ಆಕರವಾಗಿದೆ ಎಂದರು.

ಮಹರ್ಷಿ ವಾಲ್ಮೀಕಿಯವರು ಆಸ್ತಿ ಹಾಗೂ ಅಧಿಕಾರಕ್ಕಾಗಿ ಅಣ್ಣ ತಮ್ಮಂದಿರ ತ್ಯಾಗಕ್ಕೆ ರಾಮಾಯಣ ಎಂದು ಕರೆದರೆ, ವ್ಯಾಸ ಮಹರ್ಷಿಗಳು ಆಸ್ತಿ, ಅಧಿಕಾರಕ್ಕಾಗಿ ಅಣ್ಣ ತಮ್ಮಂದಿರ ನಡುವೆ ನಡೆಯುವ ಜಗಳವನ್ನು ಮಹಾ ಭಾರತವೆಂದು ಕರೆದರು. ಈಗ ರಾಮಾಯಣ–ಮಹಾಭಾರತ ಯಾರ ಮನೆಯ ಲ್ಲಿಲ್ಲ ಹೇಳಿ ಎಂದು ಶ್ರೀಗಳು ಪ್ರಶ್ನಿಸಿದರು.

ಈ ವೇಳೆ ಮೈಸೂರು ಮತ್ತು ಚಾಮರಾಜನಗರ ನಾಯಕ ಸಂಘದ ಜಿಲ್ಲಾಧ್ಯಕ್ಷ ಎಂ.ರಾಮಚಂದ್ರಪ್ಪ, ತಾಲೂಕು ನಾಯಕರ ಸಂಘದ ಅಧ್ಯಕ್ಷ ಚಿಕ್ಕಣ್ಣ, ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಟಿ.ಎಚ್.ಮಂಜುನಾಥನ್, ಕ್ಷೇತ್ರ ಬಿಜೆಪಿ ಅಧ್ಯಕ್ಷ ಕೆ.ಸಿ.ಲೋಕೇಶ್‌ನಾಯಕ್, ಕೆಪಿಸಿಸಿ ಸದಸ್ಯ ಹೊನ್ನ ನಾಯಕ, ಗ್ರಾಪಂ ಮಾಜಿ ಅಧ್ಯಕ್ಷ ನಾಗಣ್ಣ, ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್,

ಮುಖಂಡರಾದ ಎಂ.ಪಿ.ಮರಿಸ್ವಾಮಿ, ದೇವರಾಜ್ ಪಾಳೆಗಾರ್, ಪಿಎಸಿಸಿ ಅಧ್ಯಕ್ಷ ಮುಸುವಿನಕೊಪ್ಪಲು ಶಿವರಾಮು, ಸೋಸಲೆ ಇಂದ್ರೇಶ್, ಸುಂದರನಾಯಕ, ಗೋವಿಂದರಾಜು, ಸರ್ಕಾರಿ ನೌಕರರು ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ಮರಡೀಪುರ ನಾಗರಾಜು, ಆರ್.ಪಿ.ಹುಂಡಿ ನಾಗರಾಜು, ಪ್ರಭಾಕರ್, ಶ್ರೀ ಮಹರ್ಷಿ ವಾಲ್ಮೀಕಿ ಸೇವಾ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷ ಸಿದ್ದನಾಯಕ, ಪ್ರಧಾನ ಕಾರ್ಯ ದರ್ಶಿ ಬಸವರಾಜು, ಕಾರ್ಯದರ್ಶಿ ಯೋಗೀಶ್,ಖಜಾಂಚಿ ಮಹದೇವನಾಯ್ಕ ಸೇರಿದಂತೆ ಗ್ರಾಮಸ್ಥರು, ಯಜಮಾನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಫೆ.8, 9ಕ್ಕೆ ವಾಲ್ಮೀಕಿ ಜಾತ್ರೆ!

ಫೆ8 ಮತ್ತು 9ರಂದು 2 ದಿನಗಳ ಕಾಲ ರಾಜನಹಳ್ಳಿಯಲ್ಲಿ 6ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಜಾತ್ರೆ ನಡೆಯಲಿದ್ದು ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ದಾವಣಗೆರೆ ರಾಜನಹಳ್ಳಿ ಮಠದ ಪ್ರಸನ್ನಾನಂದ ಮಹಾಸ್ವಾಮಿ ಮನವಿ ಮಾಡಿದರು. ಮಹರ್ಷಿ ವಾಲ್ಮೀಕಿ ಪುತ್ಥಳಿ ಲೋಕಾರ್ಪಣೆಗಾಗಿ ಗ್ರಾಮಕ್ಕೆ ಆಗಮಿಸಿದ ಪ್ರಸನ್ನಾನಂದ ಸ್ವಾಮಿ ಅವರಿಗೆ ಗ್ರಾಮದ ಬಾಲಕಿಯರು ಪೂರ್ಣಕುಂಭ ಸ್ವಾಗತ ನೀಡಿ ವೇದಿಕೆಗೆ ಕರೆದೊಯ್ದರು. ಆನಂತರ ಅಂದಾಜು 2 ಲಕ್ಷರೂ. ವೆಚ್ಚದಲ್ಲಿ ನಿರ್ಮಿಸಲಾದ 4 ಅಡಿ ಎತ್ತರದ ವಾಲ್ಮೀಕಿ ಪುತ್ಥಳಿ ಯನ್ನು ಶ್ರೀಗಳು ಲೋಕಾರ್ಪಣೆಗೊಳಿಸಿದರು. ಕಾರ್ಯಕ್ರಮದಲ್ಲಿ ಪುತ್ಥಳಿ ಹಾಗೂ ಗೋಪುರ ನಿರ್ಮಾಣಕ್ಕೆ ಸಹಕರಿಸಿದ ದಾನಿಗಳನ್ನು ಶ್ರೀಗಳು ಸನ್ಮಾನಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂ)	2 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ) 3 ಪ್ರದರ್ಶನಗಳು ಸಲಾರ್ (ಹಿಂ)	1 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಸಲಾರ್– 1 (ತೆ):** ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, **ಡಂಕಿ (ಹಿಂ):** ಮ.12.50ಕ್ಕೆ, ರಾ.7.14ಕ್ಕೆ.
ಸ್ಕ್ರೀನ್ 2	**ಸಲಾರ್–1 (ಕ):** ಬೆ.9ಕ್ಕೆ, ಸಂ.6.50ಕ್ಕೆ, **ಅನಿಮಲ್ (ಹಿಂ):** ಮ.12.20ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಸಂ.4.05ಕ್ಕೆ, **ನೆರು (ಮ):** ರಾ.10.15ಕ್ಕೆ,
ಸ್ಕ್ರೀನ್ 3	**ಸಲಾರ್–1 (ತೆ):** ಬೆ.7ಕ್ಕೆ, **ಡಂಕಿ (ಹಿಂ):** ಬೆ.10.30ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, **ಸಲಾರ್ (ಕ):** ರಾ.9.55ಕ್ಕೆ.
ಸ್ಕ್ರೀನ್ 4	**ಸಲಾರ್–1(ತೆ):** ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, **ಡಂಕಿ (ಹಿಂ):** ಮ.3.55ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಡಂಕಿ (ಹಿಂ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಲಾರ್ –1 (ತೆ):** ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	**ಡಂಕಿ (ಹಿಂ):** ಬೆ.11.30ಕ್ಕೆ, ಸಂ.6.25ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, **ಸಲಾರ್ –1 (ಕ):** ರಾ.9.45ಕ್ಕೆ.
ಸ್ಕ್ರೀನ್ 4	**ಸಲಾರ್–1 (ತೆ):** ಬೆ.8.40ಕ್ಕೆ, **ಸಲಾರ್–1 (ಕ):** ಮ.12.15ಕ್ಕೆ, ಸಂ.6.35ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.3.50ಕ್ಕೆ, ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮ ಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ.


ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, **ಡಂಕಿ (ಹಿಂ):** ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ನೆರು (ಮ):** ರಾ.10.10ಕ್ಕೆ, **ಸಲಾರ್ –1 (ಮ):** ಸಂ.6.35ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, **ಸಲಾರ್–1 (ಕ):** ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, **ಸಲಾರ್– 1(ತೆ):** ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಂ.ಗೂಡಲ್ಲಿ ಲಾರಿ ಚಾಲಕರು, ಮಾಲೀಕರ ಪ್ರತಿಭಟನೆ

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ಸಾರಿಗೆ ಕಾಯ್ದೆ ರದ್ದಿಗೆ ಆಗ್ರಹ



ನಂಜನಗೂಡು, ಜ.3– ಕೇಂದ್ರ ಸರ್ಕಾರ ಚಾಲಕರ ವಿರುದ್ಧ ಜಾರಿಗೆ ತಂದಿರುವ ನೂತನ ಕಾಯ್ದೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ಮತ್ತು ಕೈಗಾರಿಕೆಗಳಲ್ಲಿ ಸ್ಥಳೀಯ ಲಾರಿ ಚಾಲಕರಿಗೆ ಆದ್ಯತೆ ನೀಡಿ ಸೌಲಭ್ಯವನ್ನು ಕಲ್ಪಿಸುವಂತೆ ಆಗ್ರಹಿಸಿ ಲಾರಿ ಚಾಲಕರು ಮತ್ತು ಮಾಲೀಕರು ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿದರು.

ನಗರದ ಎಪಿಎಂಸಿ ಮುಂಭಾಗ ಜಮಾವಣೆಗೊಂಡ ಲಾರಿ ಚಾಲಕರು ಮತ್ತು ಮಾಲೀಕರು ಹುಲ್ಲಹಳ್ಳಿ ವೃತ್ತದ ಮಾರ್ಗವಾಗಿ ತಾಲೂಕು ಕಚೇರಿವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಿ ತಾಲೂಕು ಕಚೇರಿಯ ಮುಂಭಾಗ ಧರಣಿ ನಡೆಸಿದರು.

ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿದ್ದಪ್ಪ ಮಾತನಾಡಿ, ಕೇಂದ್ರ ಸರ್ಕಾರ ಅಪಘಾತ ಸಂಭವಿಸಿದಲ್ಲಿ ಲಾರಿ ಚಾಲಕರು 10 ಲಕ್ಷ ರೂ. ಪರಿಹಾರ ನೀಡಬೇಕು ಎಂಬುದು ಸೇರಿದಂತೆ ನೂತನ ನೀತಿಗಳನ್ನು ಜಾರಿ ಮಾಡುವುದರಿಂದ ಲಾರಿ ಚಾಲಕರಿಗೆ ಮತ್ತು ಮಾಲೀಕರಿಗೆ ಅನ್ಯಾಯವಾಗಲಿದೆ. ಈ ಕೂಡಲೇ ಲಿಖಿತ ರೂಪದಲ್ಲಿ ಕೇಂದ್ರ ಸರ್ಕಾರ ನೂತನ ಮೋಟಾರು ಕಾಯ್ದೆ ತಿದ್ದುಪಡಿಯನ್ನು ವಾಪಸ್ ಪಡೆಯಬೇಕು. ಇಲ್ಲವಾದಲ್ಲಿ ಲಾರಿಗಳನ್ನು ರಸ್ತೆಯಲ್ಲಿಯೇ ನಿಲ್ಲಿಸಿ ಪ್ರತಿಭಟನೆಯನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಗಳಲ್ಲಿ ಲಾರಿ ಚಾಲಕರಿಗೆ ವಸತಿ, ವಿಶ್ರಾಂತಿ, ಪ್ರಥಮ ಚಿಕಿತ್ಸೆ ಸೌಲಭ್ಯಗಳನ್ನು ನೀಡುತ್ತಿಲ್ಲ, ಜೊತೆಗೆ ಹೊರ ರಾಜ್ಯದ ಚಾಲಕರನ್ನು ನೇಮಿಸಿಕೊಂಡು ವಾಹನ ಚಾಲನೆ ಮಾಡಲಾಗುತ್ತಿದ್ದು, ಸ್ಥಳೀಯ ಲಾರಿ ಚಾಲಕರಿಗೆ ಆದ್ಯತೆ ನೀಡುತ್ತಿಲ್ಲ ಹಾಗೂ ಕಾರ್ಮಿಕ ಕಲ್ಯಾಣ ಇಲಾಖೆಯಿಂದ ದೊರೆಯುತ್ತಿರುವ ಆರೋಗ್ಯ ವಿಮಾ ಇತರ ಸೌಲಭ್ಯಗಳು ನಮಗೆ ದೊರಕುತ್ತಿಲ್ಲ. ಈ ಹಿಂದೆ ಮಾಲೀಕರ ಹಣದಿಂದಲೇ ಸಹ ಚಾಲಕರಿಗೂ ಸಹ ವಿಮೆ ಮಾಡಿಸುವುದಕ್ಕೆ ನಮ್ಮ ಮಾಲೀಕರ ಸಂಘವು ರೂಪುರೇಷೆಗಳನ್ನು ಮಾಡುವಂತೆ ಮನವಿ ಮಾಡಿತ್ತು. ಇದುವರೆಗೆ ಸರ್ಕಾರ ಜಾರಿ ಮಾಡಲು ಮುಂದಾಗಿಲ್ಲ ಈ ಎಲ್ಲಾ ಬೇಡಿಕೆಗಳನ್ನು ಈ ಕೂಡಲೇ ಬಗೆಹರಿಸಿಕೊಡಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಉಪಾಧ್ಯಕ್ಷ ಸಜ್ಜಾದ್ ಭಾಷ, ಭಾಗ್ಯರಾಜು, ಶ್ರೀನಿವಾಸ, ಕುಮಾರ್, ಸುರೇಶ್, ಎನ್.ಬಿ.ರಾಜಶೇಖರ್, ವಿನಿತ್ ಸೇರಿದಂತೆ ಲಾರಿ ಚಾಲಕರು ಇದ್ದರು.

ಬಂಧಿತ ಶ್ರೀಕಾಂತ್ ಪೂಜಾರಿ ಕರಸೇವಕ ಅಲ್ಲ, ಆತನ ವಿರುದ್ಧ 16 ಪ್ರಕರಣಗಳಿವೆ



ಬೆಂಗಳೂರು: ಹುಬ್ಬಳ್ಳಿಯಲ್ಲಿ ಕರಸೇವಕರ ಬಂಧನವನ್ನು ಖಂಡಿಸಿ ರಾಜ್ಯಾದ್ಯಂತ ಬಿಜೆಪಿ ಆರಂಭಿಸಿರುವ ಪ್ರತಿಭಟನೆಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಡಾ. ಜಿ ಪರಮೇಶ್ವರ ಅವರು, ಆ ವ್ಯಕ್ತಿ ಕರಸೇವಕರಲ್ಲ ಮತ್ತು ಆತನ ವಿರುದ್ಧ 16 ಪೊಲೀಸ್ ಪ್ರಕರಣಗಳಿವೆ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶ್ರೀಕಾಂತ್ ಪೂಜಾರಿ ಎಂಬ ವ್ಯಕ್ತಿಯನ್ನು ಪೊಲೀಸರು ದಾಖಲಿಸಿರುವ ಎಫ್ಐಆರ್ ಮತ್ತು ಇತರ ದಾಖಲೆಗಳಲ್ಲಿ ಕರಸೇವಕ ಎಂದು ಉಲ್ಲೇಖಿಸಿಲ್ಲ ಎಂದಿದ್ದಾರೆ. ಆತ ಆರೋಪಿ ಸ್ಥಾನದಲ್ಲಿದ್ದು, ಆತನ ವಿರುದ್ಧ 16 ಪ್ರಕರಣಗಳಿವೆ. ಅವುಗಳಲ್ಲಿ ಕೆಲವು ಪ್ರಕರಣಗಳು ಹೊರ ಬಂದಿವೆ. ಕಾನೂನು ಪಾಲನೆ ಮಾಡದ ಹಾಗೂ 16 ಪ್ರಕರಣಗಳಲ್ಲಿ ಆರೋಪಿಯಾಗಿರುವ ವ್ಯಕ್ತಿಯನ್ನು ಬೆಂಬಲಿಸುತ್ತಿರುವ ಪಕ್ಷ ಬಿಜೆಪಿಯಾಗಿದೆ. ಬಿಜೆಪಿಗೆ ಏನಾಗಿದೆಯೋ ಗೊತ್ತಿಲ್ಲ ಎಂದು ಹೇಳಿದರು.

ಹಳೆಯ ಪ್ರಕರಣಗಳನ್ನು ತೆರವುಗೊಳಿಸಲು ಆದೇಶ ನೀಡಿದ್ದರಿಂದ ಅವುಗಳನ್ನು ಪರಿಶೀಲಿಸುವಾಗ ಪೂಜಾರಿ ಪ್ರಕರಣ ಬೆಳಕಿಗೆ ಬಂದಿತು. 31 ವರ್ಷಗಳ ನಂತರ ಏಕೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಪ್ರಶ್ನೆ ಮೂಡುವುದು ಸಹಜ. ಆದರೆ, ಬಿಜೆಪಿ ಸರ್ಕಾರದ ನಾಲ್ಕು ವರ್ಷಗಳ ಆಡಳಿತದಲ್ಲಿ ಅಥವಾ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧಿಕಾರದಲ್ಲಿದ್ದಾಗ ಈ ಪ್ರಕರಣಗಳನ್ನು ಹಿಂಪಡೆಯಬಹುದಿತ್ತು. ಅವರೂ ಏನೂ ಮಾಡಿಲ್ಲ. ಯಾರನ್ನು ದೂಷಿಸಬೇಕು ಎಂಬುದು ಪ್ರಶ್ನೆಯಾಗಿದೆ ಎಂದು ತಿಳಿಸಿದರು.

ಬಿಜೆಪಿ ಮಾಜಿ ಸಚಿವ ವಿ ಸುನೀಲ್ ಕುಮಾರ್ ಅವರು ಕರಸೇವಕರ ಪಟ್ಟಿ ನೀಡುವುದಾಗಿ ಮತ್ತು ಕಾಂಗ್ರೆಸ್ ಸರ್ಕಾರಕ್ಕೆ ಸಾಮರ್ಥ್ಯವಿದ್ದರೆ ಅವರನ್ನು ಬಂಧಿಸಲಿ ಎಂದು ಮಾಡಿದ ಸವಾಲಿಗೆ ಪ್ರತಿಕ್ರಿಯಿಸಿದ ಪರಮೇಶ್ವರ, ಇಲ್ಲಿ ಯಾವುದೇ ವ್ಯಕ್ತಿಗಳಿಲ್ಲ. ಇದು ಜನರಿಂದ ಆಯ್ಕೆಯಾದ ಸರ್ಕಾರ. ಶಕ್ತಿ, ಸಾಮರ್ಥ್ಯ ಮತ್ತು ಅಧಿಕಾರವನ್ನು ಜನರು ನೀಡಿದ್ದಾರೆ. ಕಾನೂನು ಪ್ರಕಾರ ಸರ್ಕಾರ ಕಾರ್ಯ ನಿರ್ವಹಿಸುತ್ತದೆ ಎಂದರು.

ಹುಬ್ಬಳ್ಳಿಯಲ್ಲಿ ಡಿಸೆಂಬರ್ 5, 1992 ರಂದು ಅಂಗಡಿಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ ಪೊಲೀಸರು ಶ್ರೀಕಾಂತ್ ಪೂಜಾರಿಯನ್ನು ಬಂಧಿಸಿದ್ದಾರೆ. ಪೂಜಾರಿ ಪ್ರಕರಣದಲ್ಲಿ ಮೂರನೇ ಆರೋಪಿಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇತರ ಎಂಟು ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಪೂಜಾರಿಯನ್ನು ಸದ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಹುಬ್ಬಳ್ಳಿ ಪೊಲೀಸರು 1992 ರಿಂದ 1996 ರ ನಡುವೆ ನಡೆದ ಕೋಮು ಘರ್ಷಣೆಯಲ್ಲಿ ಬೇಕಾಗಿರುವ 300 ಜನರ ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ. ಬಹುತೇಕ ಆರೋಪಿಗಳು ಈಗ 70 ವರ್ಷದ ಆಸುಪಾಸಿನವರಾಗಿದ್ದು, ಅವರಲ್ಲಿ ಹಲವರು ನಗರದಿಂದ ತೆರಳಿದ್ದಾರೆ ಎಂದು ಪೊಲೀಸ್ ಮೂಲಗಳು ವಿವರಿಸಿವೆ. ಪೂಜಾರಿ ಬಂಧನ ರಾಜ್ಯದಲ್ಲಿ ಭಾರಿ ವಿವಾದವನ್ನು ಹುಟ್ಟು ಹಾಕಿದ್ದು, ಸರ್ಕಾರ ಮತ್ತು ಪ್ರತಿಪಕ್ಷಗಳ ಟೀಕಾಪ್ರಹಾರ ಜೋರಾಗಿದೆ.

ಹಿಂದೂ ಕಾರ್ಯಕರ್ತನ ಬಂಧನಕ್ಕೆ ಬಿಜೆಪಿ ಮಹಿಳಾ ಮುಖಂಡರ ಖಂಡನೆ



ಮೈಸೂರು, ಜ.3– ಹುಬ್ಬಳ್ಳಿಯ ಹಿಂದೂ ಕಾರ್ಯಕರ್ತ ಶ್ರೀಕಾಂತ ಪೂಜಾರಿ ಬಂಧನ ಕಾಂಗ್ರೆಸ್ ಹಿಂದು ವಿರೋಧಿ ನೀತಿಗೆ ಸಾಕ್ಷಿ ಎಂದು ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್ ಟೀಕಿಸಿದ್ದಾರೆ. ಇಡೀ ದೇಶ, ದೇಶದ ಕೋಟ್ಯಾಂತರ ಹಿಂದೂ ಕಾರ್ಯಕರ್ತರು ರಾಮಮಂದಿರ ಉದ್ಘಾಟನೆ ಸಂಭ್ರಮದಲ್ಲಿದ್ದಾರೆ. ಆದರೆ, ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ 30 ವರ್ಷ ಹಳೆಯ ಪ್ರಕರಣವನ್ನು ಕೆದಕಿ ಶ್ರೀಕಾಂತ ಪೂಜಾರಿ ಬಂಧಿಸಿದೆ. ಇದು ಕೂಡ ಮುಸ್ಲಿಂ ತುಷ್ಟೀಕರಣದ ಭಾಗವಾಗಿದೆ ಎಂದಿದ್ದಾರೆ. ಶ್ರೀಕಾಂತ ಪೂಜಾರಿ ತಮ್ಮ ಪಾಡಿಗೆ ತಾವು ಆಟೋ ಚಲಾಯಿಸಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ. ಆದರೆ, ಅಂತಹವರನ್ನು ರಾತ್ರೋರಾತ್ರಿ ಬಂಧಿಸಿ ದ್ವೇಷ ರಾಜಕಾರಣವನ್ನು ಕಾಂಗ್ರೆಸ್ ಮಾಡುತ್ತಿದೆ. ಇಂತಹ ಲಜ್ಜೆ ಗೇಡಿತನ ಹಿಂದೂ ವಿರೋಧಿ ಸರ್ಕಾರಕ್ಕೆ ಜನರು ತಕ್ಕ ಪಾಠ ಕಲಿಸಲಿದ್ದಾರೆ. ಕೂಡಲೇ ಅವರನ್ನು ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ, ಬಿಜೆಪಿ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದ್ದಾರೆ.

ಶ್ರೇಷ್ಠ ಕೃಷಿಕ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಜ.3(ಎಂಟಿವೈ)– ಕೃಷಿ ಇಲಾಖೆ ನೀಡುವ ಜಿಲ್ಲಾ ಮತ್ತು ತಾಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತರು ಜ.8 ರೊಳಗೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕಿಯಾದ ಹೆಚ್.ಬಿ.ಮಧುಲತಾ ತಿಳಿಸಿದ್ದಾರೆ.

ಕೃಷಿ ಕ್ಷೇತ್ರದಲ್ಲಿ ಕೃಷಿಯಲ್ಲಿ ಸಮಗ್ರ ಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ ಅಭಿವೃದ್ಧಿ, ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ, ಕೃಷಿ ಸಂಸ್ಕರಣೆ ಸೇರಿದಂತೆ ಇನ್ನಿತರ ಸಾಧನೆ ಮಾಡಿರುವ ರೈತರು ಅರ್ಜಿ ಸಲ್ಲಿಸಬಹುದಾಗಿದೆ. ತೋಟಗಾರಿಕೆ ಕ್ಷೇತ್ರದಲ್ಲಿ ಸಮಗ್ರ ತೋಟಗಾರಿಕೆ, ಹೈಟೆಕ್ ತಂತ್ರಜ್ಞಾನ ಅಳವಡಿಕೆ, ಹಸಿರು ಮನೆ, ಕಸಿ ಅಭಿವೃದ್ಧಿ, ಸಸ್ಯ ಕಾಶಿ ಸೇರಿದಂತೆ ಇನ್ನಿತರ ಸಾಧನೆ ಮಾಡಿರುವ ರೈತರು ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಬಹುದು.

ಪಶುಸಂಗೋಪನೆ ಕ್ಷೇತ್ರದಲ್ಲಿ ಹೈನುಗಾರಿಕೆ, ಆಡು, ಕುರಿ, ಮೊಲ, ಕೋಳಿ, ಹಂದಿ ಸಾಕಾಣಿಕೆಯಲ್ಲಿ ಪ್ರಗತಿ ಸಾಧಿಸಿರುವ ರೈತರು, ಮೀನುಗಾರಿಕೆ, ರೇಷ್ಮೆ ಕೃಷಿ, ಅರಣ್ಯ ಕೃಷಿ ಕ್ಷೇತ್ರದಲ್ಲೂ ಸಾಧಕರಿಗೆ ಪ್ರಶಸ್ತಿ ನೀಡಲಾಗುತ್ತದೆ.

ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಜಿಲ್ಲೆಯ 10 ರೈತರಿಗೆ (ಒಂದು ಕ್ಷೇತ್ರಕ್ಕೆ 2 ರಂತೆ) ತಲಾ ರೂ. 25 ಸಾವಿರ ರೂ, ತಾಲೂಕು ಮಟ್ಟದ ಪ್ರಶಸ್ತಿಗೆ ಆಯ್ಕೆಯಾದ ಐವರು ರೈತರಿಗೆ (ಆಯ್ಕೆಯಾದ 5 ಕ್ಷೇತ್ರಗಳಲ್ಲಿ ಒಬ್ಬರಂತೆ) ತಲಾ ರೂ. 10 ಸಾವಿರ ರೂ. ನಗದು ಬಹುಮಾನ ನೀಡಲಾಗುತ್ತದೆ ಎಂದು ವಿವರಿಸಿದ್ದಾರೆ. ಈ ಹಿಂದೆ ಕೃಷಿ ಪಂಡಿತ ಪ್ರಶಸ್ತಿ ಪಡೆದವರು, ಕೇಂದ್ರ, ರಾಜ್ಯ ಸರ್ಕಾರದಿಂದ ಮತ್ತು ತತ್ಸಂಬಂಧಿತ ಸಂಸ್ಥೆಗಳಿಂದ ಸಮಾನಾಂತರ ಪ್ರಶಸ್ತಿ ಪಡೆದವರು ಹಾಗೂ ಸರ್ಕಾರಿ ಸೇವೆಯಲ್ಲಿರುವ ಯಾವುದೇ ಇಲಾಖೆ ನೌಕರರು, ಅವರ ಕುಟುಂಬದ ಸದಸ್ಯರು ಸ್ಪರ್ಧೆಯಲ್ಲಿ ಭಾಗವಹಿಸಲು ನಿರ್ಬಂಧ ಹೇರಲಾಗಿದೆ.

ತಿಂಗಳ ಸಂಗೀತ ಕಾರ್ಯಕ್ರಮ

ಮೈಸೂರು, ಜ.3– ಮೈಸೂರಿನ ಲಯ ವಿದ್ಯಾ ಪ್ರತಿಷ್ಠಾನ ಲಯವಾದ್ಯ ಕಲೆಗಳ ಅಕಾಡೆಮಿ ವತಿಯಿಂದ ಜ. 5 ರಂದು ಸಂಜೆ 6 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ತಿಂಗಳ ಸಂಗೀತ ಕಾರ್ಯಕ್ರಮದ ಅಂಗವಾಗಿ ವಿದ್ವಾನ್ ಪ್ರತೀಕ್ ಭಾರದ್ವಾಜ್ ಅವರಿಂದ ಗಾಯನ ಏರ್ಪಡಿಸಲಾಗಿದೆ. ವಿದ್ವಾನ್ ಎಂ.ಡಿ.ಅರ್ಜುನ್–ವಯೋಲಿನ್, ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂನಲ್ಲಿ ಸಹಕಾರ ನೀಡಲಿದ್ದಾರೆ. ಪ್ರವೇಶ ಉಚಿತವಾಗಿರುತ್ತದೆ.

ರಿಟರ್ನಿಂಗ್ ಆಫೀಸರ್, ಭಾನು ಗೃಹ ನಿರ್ಮಾಣ ಸಹಕಾರ ಸಂಘ ನಿ, ಮೈಸೂರು ರವರ ಕಾರ್ಯಾಲಯ.

ಪತ್ರಿಕಾ ಪ್ರಕಟಣೆ

ಭಾನು ಗೃಹ ನಿರ್ಮಾಣ ಸಹಕಾರ ಸಂಘ ನಿ, ಮೈಸೂರು ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಚುನಾವಣೆಯನ್ನು ದಿನಾಂಕ : 19-01-2024 ರಂದು ಶುಕ್ರವಾರ ಬೆಳಗ್ಗೆ 10-00 ಗಂಟೆಯಿಂದ ಸಂಜೆ 03-00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ನಾಮಪತ್ರಗಳನ್ನು ದಿನಾಂಕ : 05.01.2024 ರಿಂದ 11.01.2024 ರವರೆಗೆ ಬೆಳಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 02.00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ : 12.01.2024 ರಂದು ಬೆಳಗ್ಗೆ 11-30 ಗಂಟೆಗೆ ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮೂಲಕ ಈಗಾಗಲೇ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಮುಖ್ಯಕಾರ್ಯನಿರ್ವಾಹಕರನ್ನು / ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ರಾಜು) ರಿಟರ್ನಿಂಗ್ ಅಧಿಕಾರಿ, ಭಾನು ಗೃಹ ನಿರ್ಮಾಣ ಸಹಕಾರ ಸಂಘ ನಿ, ಮೈಸೂರು

ನಗರಸಭಾ ಕಾರ್ಯಾಲಯ, ನಂಜನಗೂಡು
ನಂಜನಗೂಡು–571301, ಮೈಸೂರು ಜಿಲ್ಲೆ, ಕಛೇರಿ ದೂರವಾಣಿ: 08221–226236
ವೆಬ್‌ಸೈಟ್:www.nanjanaguducity.mrc.gov.in, ಇಮೇಲ್:itstaff_ulb_nanjangud@yahoo.co.in

ಸಂಖ್ಯೆ:ನ.ಸ.ನಂ/ತಾಶಾ/15ಹಕಾ/NMPC/ಟೆಂ/2023–24 ದಿನಾಂಕ: 01.01.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ.)

ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ 2021–22ನೇ ಸಾಲಿನಲ್ಲಿ Million Plus City (BBMP) ಗೆ ಹಂಚಿಕೆಯಾದ 15ನೇ ಹಣಕಾಸು ಆಯೋಗದ ಘನತ್ಯಾಜ್ಯ ವಸ್ತು ನಿರ್ವಹಣೆಯ ಅನುದಾನವನ್ನು Non Million Plus City ಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಿರುವ ಅನುದಾನದ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ KW-1, KW-2 ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಇ–ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು https://kppp.karnataka.gov.in/ ನಿಂದ ಟೆಂಡರ್ ಷರತ್ತು, ಇಎಂಡಿ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕ್ರಸಂ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮೀಸಲಾತಿ
1	DMA/2023-24/OW/WORK_INDENT7491	25.00	ಸಾಮಾನ್ಯ
2	DMA/2023-24/WS/WORK_INDENT7494	5.00	ಪರಿಶಿಷ್ಟ ಪಂಗಡ
3	DMA/2023-24/WS/WORK_INDENT7495	9.00	ಸಾಮಾನ್ಯ
4	DMA/2023-24/OW/WORK_INDENT7497	6.00	ಸಾಮಾನ್ಯ
5	DMA/2023-24/OW/WORK_INDENT7489	25.00	ಪರಿಶಿಷ್ಟ ಜಾತಿ
6	DMA/2023-24/OW/WORK_INDENT7486	10.00	ಪರಿಶಿಷ್ಟ ಜಾತಿ
7	DMA/2023-24/OW/WORK_INDENT7490	10.00	ಸಾಮಾನ್ಯ

ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ 08/01/2024 ಸಂಜೆ 5:00 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 10/01/2024 ಬೆಳಿಗ್ಗೆ 11.00 ಗಂಟೆಗೆ ಸೂಚನೆ: 1.** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in/** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. **2.** ಜಿ.ಎಸ್.ಟಿ ತೆರಿಗೆಯನ್ನು ಪ್ರತ್ಯೇಕವಾಗಿ ಕಾಮಗಾರಿ ಬಿಲ್ಲಿನಲ್ಲಿ ಸೇರಿಸಲಾಗುವುದು.

ಸಹಿ/– ಆಡಳಿತಾಧಿಕಾರಿ, ನಗರಸಭೆ, ನಂಜನಗೂಡು
ಸಹಿ/– ಪೌರಾಯುಕ್ತರು, ನಗರಸಭೆ, ನಂಜನಗೂಡು

DIPR/MYS/KAVITA/849/23-24